(MR. SPEAKER)

for clarification. Therefore, they must reserve time for it from the time allotted for discussion. We are transacting business according to Rules. The Business Advisory Committee has recommended some time and it has been accepted by the House and put into the order paper of the House and that has to be respected. Therefore, it will not be possible for me to give any time for clarification unless there is time left over. May I know what time will be required by the Minister ?

Dr. K. NAGAPPA ALVA (Minister for Health).— I require 45 minutes.

Mr. SPEAKER.—Yesterday it was only 40 minutes and today with interest the Hon'ble Member wants 45 minutes ?

Sri S. SIVAPPA (Sravanabelagola).—He had said that he would require 45 minutes, but the Finance Minister wanted to close it earlier.

Mr. SPEAKER.—The proceedings are there. He said that out of the one hour given to him, he spoke only for 20 minutes and he would require 40 minutes more.

Sri K. NAGAPPA ALVA.—Because I am starting again today, I may require 5 minutes more.

Mr. SPEAKER.—Otherwise I will apply the guillotine exactly at the end of the time allotted for discussion without waiting for the reply to close and without giving any time for clarification.

PAPERS LAID ON THE TABLE

Sri R. M. PATIL (Minister for Home).—I lay Notification No. HD 133 TMT 63 dated 6th February 1964 (Reduction of Tax Payable) as required under sub-section (2) of section 16 of the Mysore Motor Vehicles Taxation Act, 1957.

BUDGET ESTIMATES FOR 1964-65—DEMANDS NOS. 18 AND 19.

(*Debate continued.*)

†Dr. K. NAGAPPA ALVA (Minister for Health).—Mr. Speaker, our aim, our object and our work should be towards positive health and for national health. Hence, the magnitude of the problem of providing health facilities and building up the health of the people is so great that it is necessary for the Hon'ble Members to appreciate the good work that has been done with all the expansion programmes and also to know the difficulties that the Government have been facing to make the programmes a success. Yesterday, Sir, the Hon'ble Member Srimathi Nagarathnamma made a speech. As usual, the speech to start with and the closing was interesting and entertaining. It was a very fluent speech.

There were ennobling suggestions too. But I must say at the outset that much of her speech was more of exaggeration. Coming to her point that all doctors have taken to practice and made money and are making hospitals their nursing homes, I cannot accept it. It is true that a few people here and there are doing it. It is human nature also. But at the same time she knows and others also know that some people have been booked and some people have been punished. It is the duty of the Government to see that good people, honest and loyal officers are encouraged and protected. But at the same time certain officers are also punished. I only wish the Members to openly bring to the notice of the Government these things. She was suggesting that the services of honorary doctors must be taken. We certainly have been taking their services and we will take in more and we will be able to build up honorary system in the State to its full stature. Then she mentioned about the X-Ray plant and repairs and providing of technicians; it is true we had that difficulty, but we are having training programme and technicians have been sent now to most of the Institutions and that programme will continue and we will be in a position to repair X-Ray plants everywhere. Regarding the nursing staff, I can say that the number has been increased with all the difficulties that we are facing in providing the quired personnel. She referred to my visit to some of the developed countries. I know it is my duty to see that in the light of my experience to do whatever I can to improve the state of affairs in our State. Then in the concluding part of her speech she was saying about Nagappa's *tapas.* I wish to say that I do not believe in meditation. But I believe in karma yoga. There has been "ಬುಸ್, ಬುಸ್" it will be there, whenever necessary, but no meditation. I will do my duty that is good to all; there will be protection and encouragement to good and honest officers, but punisement to bad officers. These are things necessary for good Government, better administration, for sanity and sanctity of administration. I shall strive hard for this sincerely and seriously. With all the seriousnese—I assure you and this House that we will take up this matter very seriously. Hon'ble Member Mr. Srinivas Nayak said about the health buildings to be taken up. We have set apart the required amount not only for Mudbidri, Padubidri and Hiriyadka in South Kanara, but in all places where foundation stones have been laid, buildings will be taken up. Primary health programmes are going on throughout the State and by the end of the Third Five Year Plan, we will be having primary health centres in all the blocks and that is the programme by which we can make medical facilities to reach all the people. He spoke about the College of Indian Medicine. While appreciating the suggestion, I have to say that there is no chance for integrated system to continue from next year. At the same time, with regard to those who are practising integrated system and even GCAM students who have taken up Graduate Course, we will think about their future status and very soon we will take a decision about it. Hon'ble Member Mr. Venkatagiriyappa referred to condensed M. B. Course, and said that those who have passed it have not received

(DR. K. NAGAPPA ALWA)

their increased pay for the last few months. He has not understood the difficulties that we are facing. 20 per cent is set apart for promotional vacancies for condensed M B B S and 10 per cent for regular class III LMP doctors. Only according to that scheme we have to go. I must tell this House today that these things will be certainly regularised With regard to the promise that I have given to this House that the LMP and Licenciates who have put in 10 years of service will be upgraded, I must say we have worked up and sent these things to the Public Service Commission and we have got their approval and within the next few months all the licentiates will be automatically upgraded as Assistant Surgeons.

A suggestion was made as to why hospitals should not be closed. This is only a negative suggestion. We have difficulties. We do not have full time doctors in the hospitals. But we have made, in almost all the hospitals, visits by doctors and supervision by them. It is for us to improve the state of affairs. Mr. Sathyanarayan said about the Medical College building. It was a gentleman's agreement between the sponsoring committee, in which he himself is a member—and I wish they will honour that agreement and they will give their quota at the earliest time possible. But work has not been stopped. We have been going ahead. The building will come up and the college is coming up very well.

The Hon'ble Member Sri B.L. Gowda made certain suggestions. But he also made wild and vague charges. He said about the hospitals being dirty and all sorts of things and said about *ghorapapa*. But *ghorapapa* cannot fall on those who are running these institutions or working these institutions. I feel that the human mind must work in such a way having such noble qualities as to be appreciated for its good work, and also grateful to those who are helpful and where good works are being done. He said about Chitaldrug hospital affairs. He said there are no medicines at all in that hospital. In a district headquarters hospital, there are medicines. But some medicines may not be available. We are looking into it. Certain complaints were made about the lady doctors and the district surgeon and we are looking into and action will be taken if found necessary. He was also telling about temporary posts. I am saying here that it is our business to see that the people are helped. But by helping some, we do not want to harm others. If cases of injustice is brought to our notice, we will set them right. To say that preference is being given to some on account of the influence they bring is wrong. We are here for good Government certainly. But the feeling that by influence and pressure anything can be done—that sort of an impression on some of the officers must go. If there are instances where injustice is done, we will certainly look into and set them right. Then, he made another charge. He was very very unkind to have made that charge. He said in the admissions to the medical colleges Rs. 3,000 to 5,000 have been taken freely. He only said that, but did not say—taken by whom and all that. It is six to seven months...

AN HON'BLE MEMBER.—It is the talk. You can employ special police and find out.

DR. K. NAGAPPA ALWA.—It is irresponsible to say such things in this August House. If there was truth, he ought to have the courtesy at least to inform me or to write to me about those cases. He was just telling that he would get cases. Can there be any truth ? This kind of talk has become the mentality of some people. There is an organised attempt to spoil the name of the Government by mud-slinging. This sort of thing should not be there. I can understand suggestions and constructive suggestions being made. I only wish and appeal—let us change this sort of mentality.

The Hon'ble Member Sri Kadam gave certain very good and constructive suggestions, and I am thankful to him. Tuberculosis is a scourge. Lakhs and lakhs of people die and lakhs and lakhs of families are put to so much of inconvenience, difficulties and suffering by this diease. He said that domiciliary treatment should be taken up seriously. Sir, I must tell this House that we have been taking interest in these things. It is not only interest, but we are going ahead with certain programmes. It is true that the disease has spread all over. But we have taken up an intensive programme in Bangalore, Tumkur, Chitaldrug and South Canara and we are going to take up next North Canara, Bijapur and other places. This domiciliary treatment and education will go on. With the guidance of the National Turberculosis institute and their trained personnel, this work will go on. Added to it, there is the T.A., *i.e.*, a pilot project, and added to that, recently the first of its kind in India—with international help from Paris through the World Health Organi ation, we are supplementing the programme and very soon, we will be in a position to catch the imagination of the people and with their co-operation we will go ahead with this programme. I only request the people to give their fullest co-operation.

The Hon'ble Member was also telling about the short supply of medicines. It is true there is some difficulty. During the last three months I have been getting information from a number of districts and 80 to 90 per cent of the medicines have been supplied already. It is our duty to see that the medicine that is set apart in accordance with the grants that are sanctioned is certainly sent. There was also a suggestion in the House that for certain areas, for certain places and for certain institutions more medicines must be sent. We are getting information about these things and we have decided to increase up to fifty per cent. Our Hon'ble Finance Minister is also very sympathetic about these things and he has also assured us of all help. I want to say that to the deserving institutions and to the deserving areas, we will certainly send more than the allotted quota.

About the control and eradication of communicable diseases, our State has marched ahead. It has won the admiration and appreciation of many. Even the Central Government and the World Health Organisation have said that malaria eradication programme has been a very good success. In the small-pox eradication programme, we have protected over

(DR. K. NAGAPP ALWA)

80 per cent of the people in this State and that programme of small-pox eradication will be over by the end of this month, *i.e.*, March 1964, first in India.

10-00 A.M.

About the Medical Colleges. We have been very careful to see that standard is maintained. We have also seen that wastage in the matter of examination results is minimised. It is now much less. The failures in the examination is now much less. For the information of this House I may mention that for the final M.B.B.S. examination we are having examinations three times. This is done to meet the emergency also. The results are as follows: in the Bangalore Medical College:

May examination:

No. of students appeared	...	84
No. of students passed	...	54

September examination:

No. of students appeared	...	28
No. of students passed	...	21

December examination:

No. of students appeared	...	32
No. of students passed	...	11

Under the new scheme the number of students that appeared was 8 and the number passed was 6.

In the Mysore Medical College, the results subject-war are as follows:

Anatomy	...	44 per cent
Physiology	...	44 per cent
Pharmacology	...	55·5 per cent
Pathology	...	51 per cent
Preventive and Social Medicine	...	91 per cent
Ophthalmology	...	86 per cent
Forensic Medicine	...	77 per cent
Medicine	...	64 per cent
Surgery	...	75 per cent
Obstetrics and Gynæcology	...	72 per cent

This clearly shows that the members of the staff and the students have co-operated well and they have worked hard and they have been sincere in their efforts. I congratulate the students and the staff of the colleges.

Our training programmes regarding the nurses and auxiliary midwives is progressing very satisfactorily.

The importance that was attached this year in World Health Assembly was about the supply of drinking water. A mention was made by Smt. Nagaratnamma about the Mysore water supply. I must submit that the State Government had no idea of this at all, *i.e.* half the water to be filtered because it was not brought to the notice. We are now appraised of this matter and we will certainly take up this matter and Mysore will have protected water supply at the earliest possible time. About the Bangalore water-supply, it is a great achievement that we have to spend 26 crores for the scheme. Then, we have a programme to supply water to the 25,000 villages in the State. Ours is the first State to send all the details regarding survey, estimates, etc.; and it costs 24 crores. Out of this Rs. 8 crores are to be spent within the next two or three years to give protected well water to 8,000 villages where at present there is no water supply. All these 25,000 villages will be covered by the end of the Fourth Plan.

Another thing which has attracted the attention of the authorities in this country in about the medical education. It is the research that leads to success to all our programmes. In the discussions that are going on is the World Health Assembly they have given top priority for the research, not ordinary research but research which will be national and international in character because science has been so rapidly progressing and we have to catch up with the time. It is a question of preparing a doctor for the community and not just treating the people. It is comprehensive health care where doctors must be acceptable to the community, where real education—education with rural bias, maintaining and also promoting health, that has to be given. A medical student of today must be prepared and must be made the doctor for tomorrow. That is why the research is there to some extent but it has to be strengthened in this State. Health is not simply having no diseases. It is the question of having health—mental and physical health—at the highest level.

A State Medical Research Council will be formed in a few days. Sir C. V. Raman has given his consent and he will be the Advisor for this Medical Research Council. Major General Bhatia will be the Chairman of this Council.

There are problems or great causes about which I must talk today. That is the mentally and physically defective or handicapped children, Tuberculosis and leprosy. The magnitude of these problems is so great. We have to look to the health of the normal children but we have to attach great importance for the mentally and physically handicapped children. Last year when we had a survey it was thought that one per cent of the children in the country were mentally retarded or handicapped. When I had a chance to visit Vienna I tried to find out the position about this in the hospital. There was a hospital for the mentally handicapped, defective and retarded children. There I asked them the percentage of mentally defective or retarded children. In an advanced country like that, they said that the number is between 3 and 5 per cent. You can just think of the number of the physically defective

(DR. K. NAGAPPA ALWA)

people in so many ways here. That will certainly be not less than 10 to 15 per cent. With regard to Tuberculosis and Leprosy, we have to approach the people for all these things and we are having a governmental programme, and the machinery is being strengthened. But, I have to submit that whatever the attempts of the Government, we cannot achieve the target, we cannot be successful to the extent which we think of if there is no public co-operation and the money forth-coming from the people. There are people to-day, who are prepared to give, but there should be a machinery to get it. About Leprosy, Sir, there is a stigma even to-day attached to this disease. That stigma must go. It is found that 30 per cent of the faces are only contageous, but the society has rejected them. It is a kind of untouchability and this feeling should go. If there is begging to-day, which is a nuisance, it is merely by this Leprosy people. People have not made to realise the seriousness of these things also. Everywhere we have been thinking of this beggar problem. That can be solved only by an approach to the subject of Leprosy. There is constructive surgery now and arrangements will be made wherever possible. It is not possible to admit all these people to the hospital. They must be accepted by society, they must be made to live as human beings and for that we must collect funds and the machinery. We will have a machinery here, we will have a unit here to collect this fund. The idea is that whatever money will be collected for this purpose by the governmental unit will be set up here with all care to see that the money is kept safe, but at the same time used prop rly in the deserving places and to these deserving causes. We will simplify the machinery and see that this money reaches towards the destruction of this disease, about which we must be very very, not only sympathetic, but also as a matter of duty, we must solve this problem at the earliest time possible. Hence, I request the co-operation, through you Sir, of all the Members of this House and through them of the public, because I am very much convinced that the mental health of our people, of our nation, must have the highest standard. The mental health is being disturbed, especially of the wealthier classes. There must be contentment; there must be satisfaction. If money is taken from them—I am sure they will give—there will be promotion of mental health in this country. On the eve of Ugadi to-day, I beg for this cause. This begging will go on and this message of begging must reach all people, whether rich or the middle-class or others, and we will make this our duty. Hence, I appeal to all to co-operate in this venture and to see that along with the programmes that we have before us we will dedicate ourselves to serve the cause of this burning problem.

Once again, Sir, I request the fullest co-operation of all the Hon'ble Members and I commend the Demands for the unanimous acceptance by this House.

ಶ್ರೀ. ಎಸ್. ಆರ್. ಕೇಶವಮೂರ್ತಿ (ಗಂಡಸಿ).—ಗ್ರಾಮಾಂತರ ಪ್ರದೇಶಗಳಲ್ಲಿ ಟ್ಯುಬರ್ ಕಿಲೋಸಿಸ್ ಬಗ್ಗೆ ತುತ್ತಾಗಿರುವ ಹೆಂಗಸರ ಹಾಗೂ ಮಕ್ಕಳ ಸಂಖ್ಯೆ ಎಷ್ಟು ಜನರಿದ್ದಾರೆ ಎನ್ನು

ವುದನ್ನು ತಿಳಿಯುವುದಕ್ಕೆ ಸರಕಾರದವರು ಏನಾದರೂ ಸರ್ವೆ ಮಾಡಿದ್ದಾರೆಯೇ? ಇಲ್ಲದೆ ಇದ್ದರೆ ಅದರ ಬಗ್ಗೆ ಇಲ್ಲಿಯವರೆಗೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ?

ಡಾ॥ ಕೆ. ನಾಗಪ್ಪ ಆಳ್ವ.—ಇದರ ಬಗ್ಗೆ ಒಂದು ಸ್ಯಾಂಪಲ್ ಸರ್ವೆ ಮಾಡಲಾಗಿದೆ. ಆದರೆ ಈಗ ಇದರ ಅಂಕಿ ಸಂಖ್ಯೆಗಳು ನನ್ನಲ್ಲಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ತಿಪಟೂರು ಜನರಲ್ ಆಸ್ಪತ್ರೆ ಕಟ್ಟಡವನ್ನು ಸುಮಾರು ಎರಡು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಟ್ಟಿ ಅದರಲ್ಲಿ 48 ಸಾವಿರ ರೂಪಾಯಿಗಳ ವೆಚ್ಚದಲ್ಲಿ ಎಲೆಕ್ಟ್ರಿಸಿಟಿ ಹಾಕಿಸಿದ್ದಾರೆ. ಅಲ್ಲಿರುವ ಡಾಕ್ಟರುಗಳಿಗೆ ಹಾಗೂ ನರ್ಸುಗಳಿಗೆ ಕ್ವಾರ್ಟರ್ಸುಗಳನ್ನು ಕಟ್ಟಬೇಕೆಂದು ಅಂದಾಜು ಮಾಡಿದ್ದರೂ ಇನ್ನೂ ಅದರ ಕಡೆಗೆ ಸರಕಾರ ಏನೂ ಕ್ರಮ ತೆಗೆದುಕೊಂಡಂತೆ ಕಾಣುತ್ತಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳಿಗೂ ಎಷ್ಟೋ ಸಲ ಮನವಿ ಮಾಡಿಕೊಂಡರೂ ಏನೂ ಆಗಲಿಲ್ಲ. ಅಲ್ಲದೆ ಈ ಆಸ್ಪತ್ರೆ ಊರಿನಿಂದ ಸುಮಾರು ಒಂದು ಮೈಲಿಗೆ ಮೇಲ್ಪಟ್ಟು ದೂರವಿರುವುದರಿಂದ ಇಲ್ಲಿಗೆ ಹೆರಿಗೆಗಾಗಿ ಹೋಗುವ ಜನ ಹೇಗೆ ಹೋಗುತ್ತಾರೆ? ಅಲ್ಲದೆ ಸುಮಾರು 48 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಎಲೆಕ್ಟ್ರಿಸಿಟಿ ಹಾಕಿದ್ದಾರೆ. ಆದರೆ ಏನಾದರೂ ಸ್ವಲ್ಪ ಯಾವಾಗಲಾದರೂ ಕೆಟ್ಟು ಹೋದರೆ ಇದನ್ನು ರಿಪೇರಿ ಮಾಡಲಿಕ್ಕೆ ಬೆಂಗಳೂರಿನ ಕಡೆಯಿಂದಲೇ ಕರೆತರಿಸಿ ರಿಪೇರಿ ಮಾಡಬೇಕು. ಇದಕ್ಕೆ ಕಾರಣವೇನು?

ಡಾ॥ ಕೆ. ನಾಗಪ್ಪ ಆಳ್ವ.—ಇದೆಲ್ಲಾ ಅವರೇ ಮಾಡಿಸಿಕೊಂಡಿರುವುದು ಮತ್ತು ಅವರೇ ಸರಿಪಡಿಸಿಕೊಳ್ಳುತ್ತಾರೆ.

ಶ್ರೀ ಆರ್. ಎಸ್. ಪಾಟೀಲ್ (ರಾಮದುರ್ಗ).—ಹುಬ್ಬಳ್ಳಿಯ ಮೆಡಿಕಲ್ ಕಾಲೇಜಿನ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಯಾವುದನ್ನೂ ಸರಿಯಾಗಿ ಹೇಳಲಿಲ್ಲ. ಇಲ್ಲಿರುವ ವಿದ್ಯಾರ್ಥಿಗಳಿಗೂ ಹಾಗೂ ಡೀನ್‌ರವರಿಗೂ ಸಾಮರಸ್ಯವಿಲ್ಲ. ಇದರಿಂದ ಹಿಂದೆ ಇಲ್ಲ 500 ವಿದ್ಯಾರ್ಥಿಗಳು 15 ದಿವಸಗಳ ಸ್ಟ್ರೈಕನ್ನು ಮಾಡಿ ಇಲ್ಲಿರುವ ಹೌಸ್ ಸರ್ಜನ್ನುಗಳಿಗೆ ನೂರು ರೂಪಾಯಿಗಳಿಗಿಂತ ಕಡಮೆ ಕೊಡಕೂಡದು ಎನ್ನುವ ವ್ಯವಸ್ಥೆ ಮಾಡಬೇಕು ಎಂದು ಸರ್ಕಾರ ಹೇಳಿದ್ದರೂ ಅದನ್ನೂ ಕೊಡಲಿಲ್ಲ. ಇಲ್ಲಿರುವುದನ್ನು ಸುವ್ಯವಸ್ಥೆಗೊಳಿಸಬೇಕೆಂದು ವಿವೇಚನೆ ಮಾಡಿ ನಾವು ಇಲ್ಲಿ ತಮಗೆ ತಿಳಿಸಿದ್ದೆವು. ಆದರೆ ತಾವು ಇಲ್ಲಿ ಹೇಳಿರುವುದು ಸತ್ಯಾಂಶವೇ ಹೇಗೆ? ಎಲ್ಲವನ್ನೂ ವಿವೇಚನೆ ಮಾಡಿ ಇಲ್ಲಿ ಸ್ಪಷ್ಟಪಡಿಸಬೇಕೆಂದು ಕೇಳುತ್ತೇನೆ.

ಡಾ॥ ಕೆ. ನಾಗಪ್ಪ ಆಳ್ವ.— ನೀವು ಹೇಳುವುದು ಕೆಲಮಟ್ಟಿಗೆ ಸತ್ಯವಿರಬಹುದು. ಅದಕ್ಕಾಗಿಯೇ ಇಲ್ಲಿ ಹೆಚ್ಚಿನ ಮಟ್ಟಿಗೆ ಆಗಿರುವ ರಿಸಲ್ಟ್‌ಗಳ ಪಟ್ಟಿಯನ್ನು ಇಲ್ಲಿ ತಿಳಿಸಿದೆ. ವಿದ್ಯಾರ್ಥಿಗಳ ಮತ್ತು ಹೌಸ್ ಸರ್ಜನ್ನುಗಳ ಪೇ ವಿಷಯದಲ್ಲಿ ಈಗಾಗಲೇ ಹೆಚ್ಚು ಮಾಡಲಾಗಿದೆ. ಮೊದಲಿಗೆ ಇವರಿಗೆ 60 ರೂಪಾಯಿಗಳೆಂದು ಬರುತ್ತಿತ್ತು. ಅದನ್ನು ಈಗ ಇಂಟರ್ನೀಸ್‌ಗಾಗಿ 100 ರೂಪಾಯಿಗಳೆಂದು ಹೆಚ್ಚಿಸಿ ಸರ್ಕಾರದ ಆರ್ಡರು ಮಾಡಲಾಗಿದೆ ಮತ್ತು ಬಾಕಿ ಉಳಿಯುವ 40 ರೂಪಾಯಿಗಳನ್ನೂ ಕೊಡಬೇಕೆಂದು ಸರಕಾರದ ಆರ್ಡರು ಮಾಡಿ ಇತ್ತೀಚೆಗೆ ಅಲ್ಲಿಗೆ ಕಳುಹಿಸಲಾಗಿದೆ.

Sri SANJEEVANATH AIKALA (Surathkal).- Government have constructed, at an enormous cost, 170 rooms block for the use of Nurses at Victoria Hospital. The building was completed nearly two years back, but the nurses have not been asked to occupy the building. Government have asked the Post-graduate Doctors and students to occupy this building. Is it fair and proper to ask these Post-graduate Doctors and students to occupy the rooms when it is built for the use of Nurses? I also want to know whether a complaint has been received that the water from the Latrine get into the rooms because of the wrong construction?

ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಆ ಕಟ್ಟಡದ ಡಿಜೈನ್ ಮಾಡಿದವರು ಯಾರು? ಬಾಗಿಲ ಉದ್ದವೆಷ್ಟು; ಅಗಲವೆಷ್ಟು?

Mr. SPEAKER.—All clarifications should be over by 10-30 A.M. I am not allowing any clarification afterwards. Are we cross-examining the Minister on minor details?

ಡಾ. ಕೆ. ನಾಗಪ್ಪ ಆಳ್ವ.—ಆ ಕಟ್ಟಡದಲ್ಲಿ ಕೆಲವು ಬದಲಾವಣೆಗಳಾದವು. ನರ್ಸುಗಳು ಮೊದಲು ಅಲ್ಲಿಗೆ ಹೋಗಲು ಒಪ್ಪಲಿಲ್ಲ. ಆಗ ಮುಂದಿನ ರಸ್ತೆ ಕಡೆಯ ರೂಮುಗಳನ್ನು ಪೋಸ್ಟ್ ಗ್ರ್ಯಾಜುಯೇಟುಗಳಿಗೆ ಕೊಡಲಾಯಿತು. ಕಟ್ಟಡವನ್ನು ಖಾಲಿ ಇಡಬಾರದೆಂದು ಹೀಗೆ ಮಾಡಲಾಯಿತು. ನರ್ಸುಗಳಿಗೂ ಸರಿಯಾಗಿ ಬದಲಾವಣೆ ಮಾಡಿ ಸ್ಥಳವನ್ನು ಕೊಡಲಾಗುವುದು.

Mr SPEAKER—Minor repairs will have to be attended to.

Sri S. M. KRISHNA.—Sir, it is a major waste—not a question of minor repairs.

Mr. SPEAKER.—Water leaking from latrines is a major repair !

Sri S. M. KRISHNA.—The entire conception, planning and everything is a waste there.

Sri P. F. D'MELLOW (Nominated).—Will the Hon'ble Minister be pleased to inform me whether any plans to eradicate leprosy are prepared and whether Government have any plans to separate children of these 30 cases which are considered to be contagious seeing that infection usually takes place before the age of 16 ?

Dr. K. NAGAPPA ALVA.—Yes, Sir.

ಶ್ರೀ ವಿ. ಎಸ್. ಪಾಟೀಲ್ (ನರಗುಂದ್).—ಆರೋಗ್ಯ ಮಂತ್ರಿಗಳು ನಮ್ಮಲ್ಲಿರತಕ್ಕ ಡಾಕ್ಟರುಗಳ ಸಂಬಳಗಳನ್ನು ನಮ್ಮ ನೆರೆಹೊರೆಯ ಡಾಕ್ಟರುಗಳ ಸಂಬಳಸಾರಿಗೆಗೆ ಸರಿದೂಗಿಸುತ್ತೇವೆಂದು ಹೇಳಿದರು. ಈ ಬಗ್ಗೆ ಬಡ್ಜೆಟ್ಟಿನಲ್ಲೇನೂ ಕಾಣುವುದಿಲ್ಲ. ಹಾಗಿರುವಾಗ ಇದನ್ನು ಹೇಗೆ ಇವರು ಜಾರಿಗೆ ತರುತ್ತಾರೆಂಬುದನ್ನು ವಿವರವಾಗಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ. ಕೆ. ನಾಗಪ್ಪ ಆಳ್ವ.—ಈ ವಿಚಾರವನ್ನು ಸ್ಪಷ್ಟವಾಗಿ ಹೇಳಬೇಕೆಂದರೆ - ಕೆಲವು ವಿಷಯಗಳನ್ನು ಬಡ್ಜೆಟ್ಟಿನಲ್ಲಿ ತೋರಿಸಿ ಮಾಡುವುದಕ್ಕೆ ಸಾಧ್ಯವಿದೆ. ಇನ್ನು ಕೆಲವನ್ನು ಬಡ್ಜೆಟ್ಟಿನಲ್ಲಿ ಹಾಕದೆ ಅಷ್ಯೂರೆನ್ಸ್ ಮೇಲೆ ಮಾಡುವುದಕ್ಕೆ ಸಾಧ್ಯವಿದೆ. ಈ ವಿಚಾರದಲ್ಲಿ ನಾನಾಗಲೆ ಹಣಕಾಸಿನ ಮಂತ್ರಿಗಳನ್ನು ಮತ್ತು ಮುಖ್ಯ ಮಂತ್ರಿಗಳನ್ನೂ ಕಂಡು ಮಾತನಾಡಿದ್ದೇನೆ.

Sri B. R. SUNTHANKAR (Belguam City).—Sir, there has been recurrence of cholera and there seems to be a tendency for cholera to become endemic in certain parts of Belgaum District, Hubli City and Tumkur also, and some other areas. May I know whether the Government is taking any permanent steps to control this endemic cholera ?

Dr. K. NAGAPPA ALVA.—Sir, Government is taking steps to prevent these diseases and work also is very good. We have during the last one year,—for the information of the House, I must say that wherever there is cholera breaking out, we have controlled it very early. In Hubli, for example there have been seven deaths and the number of attacks have been about 350 and we have within the last few days, out of a population of 1,50,000, we have innoculated 1,30,000. We have done the same thing in Kanakapura, Bijapur also.

About permanent measures, to eradicate completely cholera—it is said that it is prevalent in some places in an endemic form—it is because rivers are flowing in certain areas and water is contaminated, and it is also because people do not have adequate drinking water in some place. The root cause of this is to be solved and we are at it. That is why, I said in my speech that water-supply programme to all the villages will be there and it will be an intensive programme. Now there is the programme of innoculation going on in places where there is cholera prevalent. But what is happening is the apathy of the people who do not understand the seriousness of the disease when it breaks out, is not being understood at normal times.

Sri Y. RAMAKRISHNA (Yelahanka).—I want to know the number of S.C. students sent for foreign studies for M.D. and M.Sc. courses and how many lecturers were appointed? Even though there were applications, these applications have not been considered by the Minister.

Mr. SPEAKER.—The Hon'ble Member may put a question.

Dr. K. NAGAPPA ALVA.—I do not have the figures with me, Sir.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮೈಸೂರು ಆಸ್ಪತ್ರೆಯಲ್ಲಿರತಕ್ಕ ಬೋರ್ಡ್ ಆಫ್ ವಿಜಿಟರ್ಸ್ ಸರಿಯಾಗಿ ಅಲ್ಲಿ ಕೆಲಸ ಮಾಡುತ್ತಿಲ್ಲ. ಇದನ್ನು ಸರಿಪಡಿಸುವುದಕ್ಕೇನು ಕಾರ್ಯಕ್ರಮ ಕೈಗೊಂಡಿದ್ದೀರಿ ಎಂಬು ಕೇಳಿದ್ದೆ. ಅದಕ್ಕೇನೂ ಉತ್ತರವಿಲ್ಲವಲ್ಲ ಏಕೆ?

ಡಾ. ಕೆ. ನಾಗಪ್ಪ ಆಳ್ವ.—ಆ ವಿಷಯ ನನಗೆ ಮೊದಲು ಗೊತ್ತಿರಲಿಲ್ಲ. ಇನ್ನು ಕೆಲವೇ ದಿವಸಗಳಲ್ಲಿ ಅದನ್ನು ಸರಿಪಡಿಸಲಾಗುತ್ತದೆ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ (ಬಾಗೇವಾಡಿ).—ಬಿಜಾಪುರ ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಅನೇಕ ಆಸ್ಪತ್ರೆಗಳಲ್ಲಿ ಡಾಕ್ಟರುಗಳೇ ಇರುವುದಿಲ್ಲ. ಅಲ್ಲಿ ಸರಿಯಾದ ಕಟ್ಟಡ ಇವೆಲ್ಲಾ ಇದ್ದರೂ ಡಾಕ್ಟರುಗಳನ್ನು ಅಲ್ಲಿಗೆ ಕಳುಹಿಸುತ್ತಿಲ್ಲ. ಈ ತೊಂದರೆಯನ್ನು ಸರ್ಕಾರದವರು ಯಾವಾಗ ಸರಿಮಾಡುತ್ತಾರೆ?

ಡಾ. ಕೆ. ನಾಗಪ್ಪ ಆಳ್ವ.—ಆದರೆ ಇವೆಲ್ಲಾ ಸಾಮಾನ್ಯವಾದ ಪ್ರಶ್ನೆಗಳಾದವು. ಆದರೆ ಎಲ್ಲಾ ಕಡೆಗಳಿಗೂ ಡಾಕ್ಟರುಗಳನ್ನು ಆದಷ್ಟು ಜಾಗ್ರತೆ ಕಳುಹಿಸುವುದಕ್ಕೆ ಪ್ರಯತ್ನ ಮಾಡಲಾಗುತ್ತದೆ.

ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ).—ಸ್ಕೂಲೂ ಕಾಲೇಜುಗಳಲ್ಲಿ ಈಗ ವಿದ್ಯಾರ್ಥಿಗಳಿಂದ ಮೆಡಿಕಲ್ ಫೀ ತೆಗೆದುಕೊಳ್ಳಲಾಗುತ್ತಿದೆ. ಆದರೆ ಈಗ ಆ ವಿದ್ಯಾರ್ಥಿಗಳಿಗೆ ಬರಿ ಅವರ ಒಂದು ಎತ್ತರ, ತೂಕ ಮತ್ತು ಅವರ ಕಣ್ಣಿನ ದೃಷ್ಟಿ ಇಷ್ಟನ್ನು ಮಾತ್ರ ನೋಡಿ ಕೈಬಿಟ್ಟುಬಿಡುತ್ತಾರೆ. ಆದರೆ ಸರ್ಕಾರದವರಿಗೆ ಆ ವಿದ್ಯಾರ್ಥಿಗಳಲ್ಲಿರತಕ್ಕ ಇತರ ಕಾಯಿಲೆಗಳನ್ನು ಗುಣಪಡಿಸಲು ಸಾಧ್ಯವಿಲ್ಲವಾದಲ್ಲಿ ಆ ವಿಚಾರವನ್ನು ಆ ವಿದ್ಯಾರ್ಥಿಗಳ ತಂದೆ ತಾಯಿಗಳಿಗಾದರೂ ತಿಳಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಡಾ. ಕೆ. ನಾಗಪ್ಪ ಆಳ್ವ.—ತಮ್ಮ ಪ್ರಶ್ನೆಯ ಎರಡನೇ ಭಾಗ ನೆಗೆಟೀವ್ ಆಗಿದೆ. ಈ ವಿಚಾರ ವಿದ್ಯಾ ಇಲಾಖೆಗೆ ಸಂಬಂಧಪಟ್ಟಿದ್ದು. ನಾನೂ ಕೂಡ ಈಗ ಈ ವಿಚಾರದಲ್ಲಿ ಹೆಚ್ಚು ಇಂಟರೆಸ್ಟ್ ತೆಗೆದುಕೊಳ್ಳುತ್ತಿದ್ದೇನೆ. ಈ ವಿಚಾರದಲ್ಲಿ ಬರುವ ವರ್ಷ ಯಾವರೀತಿ ಮಾಡಬೇಕು ಎಂಬುದನ್ನೂ ಮತ್ತು ಇದನ್ನು ಹೇಗೆ ಫಾಲೋ ಅಪ್ ಮಾಡಬೇಕೆಂಬುದನ್ನೂ ವಿಚಾರ ಮಾಡುತ್ತಿದ್ದೇನೆ. ಬರೋ ವರ್ಷ ಈ ಬಗ್ಗೆ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ).—ಹುಬ್ಬಳ್ಳಿ ಮೆಡಿಕಲ್ ಕಾಲೇಜಿನಲ್ಲಿರತಕ್ಕ ಡೀನರು ಅಲ್ಲಿನ ವಿದ್ಯಾರ್ಥಿಗಳಿಗೂ ಮತ್ತು ರೋಗಿಗಳಿಗೂ ಬೇಡವಾಗಿದ್ದಾರೆ. ಇದರ ಬಗ್ಗೆ ಮಂತ್ರಿಗಳೇನೂ ಉತ್ತರ ಹೇಳಲಿಲ್ಲ. ಇದನ್ನು ವಿವರಿಸಬೇಕಾಗಿ ಕೇಳಿಕೊಳ್ಳುತ್ತೇನೆ?

ಡಾ. ಕೆ. ನಾಗಪ್ಪ ಆಳ್ವ.—ಇದೂ ಒಂದು ರಾಜಕೀಯ ....

Mr. SPEAKER.—DEMAND No. 18. The question is:

"That a sum not exceeding Rs. 3,81,90,000 be granted to the Government to defray the charges which will come in course of payment during the financial year for the period ending 31st day of March 1965, in respect of 'Medical'."

The motion was adopted.

Mr. SPEAKER.—Demand No. 19. The question is:

"That a sum not exceeding Rs. 3,49,34,000 be granted to the Government to defray the charges which will come in course of payment during the financial year for the period ending 31st day of March 1965, in respect of 'Public Health'."

The motion was adopted.

Mr. SPEAKER.—We will now take up the P.W.D. Demands.

DEMAND No. 31.—PUBLIC WORKS.

Sri VEERENDRA PATIL (Minister for Public Works).—Sir, on the recommendation of the Governor of Mysore, I beg to move:

"That a sum not exceeding Rs. 21,36,77,000 be granted to the Government to defray the charges which will come in course of payment during the financial year for the period ending 31st day of March 1965, in respect of 'Public Works'."

DEMAND No. 32.—PORTS AND PILOTAGE.

53. *Ports and Pilotage.*

Sri VEERENDRA PATIL.—Sir, on the recommendation of the Governor of Mysore I beg to move:

"That a sum not exceeding Rs. 8,53,000 be granted to the Government to defray the charges which will come in course of payment during the financial year for the period ending 31st day of March 1965, in respect of 'Ports and Pilotage'."

DEMAND No. 43.—CAPITAL OUTLAY ON IMPROVEMENT OF PUBLIC HEALTH

94. *Capital Outlay on Improvement of Public Health.*

Sri VEERENDRA PATIL.—Sir, on the recommendation of the Governor of Mysore, I beg to move:

"That a sum not exceeding Rs. 1,66,90,000 be granted to the Government to defray the charges which will come in course of payment during the financial year for the period ending 31st day of March 1965, in respect of 'Capital Outlay on Improvement of Public Health'."

DEMAND No. 48.—CAPITAL OUTLAY ON PUBLIC WORKS.

103. *Capital outlay on Public Works.*

Sri VEERENDRA PATIL.—Sir, on the recommendation of the Governor of Mysore, I beg to move:

"That a sum not exceeding Rs. 5,80,55,000 be granted to the Government to defray the charges which will come in course of payment during the financial year for the period ending 31st day of March 1965, in respect of 'Capital Outlay on Public Works'."

Demand No. 50.—Development of Minor Ports.

110. *Capital Outlay on Ports.*

Sri VEERENDRA PATIL.—Sir, on the recommendation of the Governor of Mysore, I beg to move:

"That a sum not exceeding Rs. 36,30,000 be granted to the Government to defray the charges which will come in course of payment during the financial year for the period ending 31st day of March 1965, in respect of 'Capital Outlay on Ports'."

Mr. SPEAKER.—Motion moved.

"That a sum not exceeding Rs. 21,36,77,000 be granted to the Government to defray the charges which will come in course of payment during the financial year for the period ending 31st day of March 1965, in respect of 'Public Works'."

"That a sum not exceeding Rs. 8,53,000 be granted to the Government to defray the charges which will come in course of payment during the financial year for the period ending 31st day of March 1965, in respect of 'Ports and Pilotage'."

"That a sum not exceeding Rs. 1,66,90,000 be granted to the Government to defray the charges which will come in course of payment during the financial year for the period ending 31st day of March 1965, in respect of 'Capital Outlay on Improvement of Public Health'."

Demand No. 48.—Capital Outlay on Public Works.

103. *Capital Outlay on Public Works.*

"That a sum not exceeding Rs. 5,80,55,000 be granted to the Government to defray the charges which will come in course of payment during the financial year for the period ending 31st day of March 1965, in respect of 'Capital Outlay on Public Works'."

"That a sum not exceeding Rs. 36,30,000 be granted to the Government to defray the charges which will come in course of payment during the financial year for the period ending 31st day of March 1965, in respect of 'Capital Outlay on Ports'."

Mr. SPEAKER.—All the cut motions which have been given notice of, are open for debate. Sri Deve Gowda will begin the debate. He shall take not more than 20 minutes We will have have to sit over-time on some other day. Otherwise we will not be able to catch up. To-day, I am not asking for extra sitting and I am not asking the House to sit extra on Monday also. How we are going to adjust and keep up the schedule, we shall see it on Monday.

Sri C. J. MUCKANNAPPA.—The House may sit on a Sunday. Let Monday be declared a holiday.

Mr. SPEAKER.—The suggestion was made yesterday that it should not be a day of sitting. It was not agreed to. Let us not discuss this further Sri Deve Gowda.

Sri B. D. JATTI (Minister for Finance).—It is better to settle this matter now. We can sit one more hour on Monday.

Mr. SPEAKER.—We shall see it on Monday.

BUDGET ESTIMATES FOR 1964-65 DEMANDS NOS. 31,32,43, 48 AND 50 (General Discussion).

10-30 A.M.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಸಭಾಧ್ಯಕ್ಷರೇ, ಈಗ ನಮ್ಮ ಮುಂದಿರತಕ್ಕ ಲೋಕೋಪಯೋಗಿ ಶಾಖೆಯ ಬೇಡಿಕೆಗಳ ಬಗ್ಗೆ ನಾನು ಒಂದೆರಡು ವಿಷಯಗಳನ್ನು ಮಾತನಾಡುತ್ತಾ, ಆ ವಿಷಯಗಳ ಕಡೆಗೆ ಸರ್ಕಾರದ ಗಮನವನ್ನು ಸೆಳೆಯ ಬೇಕೆಂದು ಇಷ್ಟಪಡುತ್ತೇನೆ. ಈ ಇಲಾಖೆಗೆ ನಮ್ಮ ಆದಾಯದ ಸುಮಾರು ಶೇಕಡ 4ರಷ್ಟು ಹಣವನ್ನು ಲೋಕೋಪಯೋಗಿ ಶಾಖಾಮಂತ್ರಿಗಳು ದೇಶದ ಅಭಿವೃದ್ಧಿಗೋಸ್ಕರ ಖರ್ಚುಮಾಡುತ್ತಿದ್ದಾರೆ. ಈ ಇಲಾಖೆಯ ಬಗ್ಗೆ ಸಾರ್ವಜನಿಕರ ರೀತಿ ಒಳ್ಳೆಯ ಇಲಾಖೆಯೆಂಬ ಹೆಸರನ್ನು ಪಡೆದಿದ್ದರೂ ಅದರ ಕೆಲಸಕಾರ್ಯಗಳ ಬಗ್ಗೆ ಒಂದು ಗೊಂದಲದ ಪರಿಸ್ಥಿತಿಯನ್ನುಂಟುಮಾಡಿದೆ. ಏಕೆಂದರೆ ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ರಾಜಗೋಪಾಲ್ ಅವರು ಹೇಳಿದ ರೀತಿಯಲ್ಲಿ ಇಲಾಖೆ ನಂಬರ್ 1 ಎಂದು ನಾನು ಸಮರ್ಥನೆ ಮಾಡುವುದಕ್ಕೆ ಮುಂಚೆ ಕೆಲವಾರು ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಹೇಳುತ್ತೇನೆ. ಈ ಇಲಾಖೆಯಲ್ಲಿ ಮೂಲಭೂತವಾದ ಕುಂದು ಕೊರತೆಗಳು ಏನು ಎಂಬುದರ ಬಗ್ಗೆ ಸರ್ಕಾರದವರು ಯೋಚಿಸಬೇಕು. ಈ ದಿವಸ ಅಧ್ಯಕ್ಷರು ಕೊಟ್ಟಿರತಕ್ಕ ಕೇವಲ 20 ನಿಮಿಷಗಳ ಕಾಲದಲ್ಲಿ ಒಂದೆರಡು ಮಾತುಗಳನ್ನು ಸರ್ಕಾರಕ್ಕೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈ ಇಲಾಖೆಯ ಅಧಿಕಾರಿಗಳಲ್ಲಿ ಈ ದಿವಸ ಕೆಲಸದಲ್ಲಿ ಒಂದು ಆಸಕ್ತಿ, ಅವರಲ್ಲಿ ಶಾಂತಿ, ನೆಮ್ಮದಿಗಳು ಇಲ್ಲದ ಒಂದು ಪರಿಸ್ಥಿತಿ ಒದಗಿದೆಯೆಂಬುದು ನಮಗೆ ಕಂಡುಬರುತ್ತದೆ. ಈ ಇಲಾಖೆಯ ಮಂತ್ರಿಗಳವರು ಒಂದು ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ಲೋಕೋಪಯೋಗಿ ಶಾಖೆಯನ್ನು ವಹಿಸಿಕೊಂಡಮೇಲೆ ಸಾಧ್ಯವಾದಮಟ್ಟಿಗೂ ಈ ಇಲಾಖೆ ನ್ಯಾಯದೃಷ್ಟಿಯಿಂದ ಕೆಲಸ ಮಾಡುತ್ತಿದೆಯೆಂಬುದಾಗಿ ನಮಗೆ ಕಂಡುಬರುತ್ತಾ ಇದೆ. ಆದರೆ ಈ ಇಲಾಖೆಯಲ್ಲಿ ಕೆಲವು ಪ್ರಮೋಷನ್ಸ್ ಹಾಗೂ ಸೀನಿಯಾರಿಟಿ ಫಿಕ್ಸ್ ಮಾಡುವ ಸಂದರ್ಭದಲ್ಲಿ ಅದರಲ್ಲೂ ಡೈರೆಕ್ಟ್ ರೆಕ್ರೂಟ್‌ಮೆಂಟಿನಲ್ಲಿ ಚೀಫ್ ಇಂಜನಿಯರ್ ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರುಗಳ ಸೆಲೆಕ್ಷನ್ ಪೋಸ್ಟ್‌ಗಳನ್ನು ಸರ್ಕಾರದವರು ಭರ್ತಿ ಮಾಡುವ ಕಾಲದಲ್ಲಿ ಕೆಲವು ಅಧಿಕಾರಿಗಳಿಗೆ ಅನ್ಯಾಯವಾಗಿ ಆ ಅಧಿಕಾರಿಗಳಲ್ಲಿಯೇ ನೆಮ್ಮದಿಯಾಗಿ ಕೆಲಸ ಮಾಡುವ ಬಗ್ಗೆ ತುಂಬಾ ಗೊಂದಲವಿದ್ದಿದೆ ಎಂಬುದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಇಲ್ಲಿ ಒಂದು ಪ್ರಶ್ನೆಯನ್ನು ಕೇಳಬೇಕಾಗಿದೆ. ಒಬ್ಬ ಬಿ. ಇ. ಪರೀಕ್ಷೆ ಪಾಸ್ ಮಾಡಿ ಡೈರೆಕ್ಟ್ ರಿಕ್ರೂಟ್‌ಮೆಂಟಿನಿಂದ ಅಸಿಸ್ಟೆಂಟ್ ಇಂಜನಿಯರ್ ಆಗಿರತ್ತಾನೆ. ಅದೇ ಇಲಾಖೆಯಲ್ಲಿ ಇನ್ನೊಬ್ಬ ಸುಮಾರು 8 ವರ್ಷಗಳಿಂದಲೂ ಜೂನಿಯರ್ ಇಂಜಿನಿಯರ್ ಆಗಿರುತ್ತಾನೆ. ಈಗ ಡೈರೆಕ್ಟ್ ರೆಕ್ರೂಟ್‌ಮೆಂಟಿನಲ್ಲಿ ಅನೇಕ ರಾಜಕೀಯ ಒತ್ತಡಗಳಿರುತ್ತವೆ. ಆದರೆ ಇವನು ಹೊಸದಾಗಿ ಕಾಲೇಜಿನಿಂದ ಬಂದ ವಿದ್ಯಾರ್ಥಿ. ಸುಮಾರು 18 ವರ್ಷಗಳಿಂದಲೂ ಕೆಲಸಮಾಡಿರತಕ್ಕವನನ್ನು ಬಿಟ್ಟು ಈಗ ಹೊಸದಾಗಿ ಬಂದಿರುವವನಿಗೆ ಅಷ್ಟು ಜಾಗ್ರತೆ ಪ್ರೊಮೋಷನ್ ಕೊಟ್ಟರೆ ನಿಜವಾಗಿ ಸರ್ವಿಸ್ ಮಾಡಿದವನಿಗೆ ಅಸಮಾಧಾನವುಂಟಾಗುತ್ತದೆ. ಲಂಚರುಷುವತ್ತಿಗೆ ಅವಕಾಶವಾಗುತ್ತದೆ. ಆದ್ದರಿಂದ ಪರೋಕ್ಷವಾಗಿ ಅಂತಹವರಿಗೆ ಉತ್ತೇಜನ ಕೊಡುವುದಕ್ಕೆ ಕಾರಣವೇನು ? ಇದನ್ನು ಸರ್ಕಾರದವರು ಪುನರ್ವಿಮರ್ಶೆ ಮಾಡಬೇಕಾಗಿದೆ. ಈಗ ಎಗ್ಸಿಕ್ಯೂಟಿವ್ ಇಂಜನಿಯರ್ ಮತ್ತು ಸೂಪರಿಂಟೆಂಡಿಂಗ್ ಇಂಜನಿಯರ್ ಹುದ್ದೆಗಳಲ್ಲಿ ಸರ್ಕಾರ ಡೈರೆಕ್ಟ್ ರೆಕ್ರೂಟ್‌ಮೆಂಟ್ ಮಾಡುವ ಒಂದು ಪದ್ಧತಿಯನ್ನು ಹಾಕಿಕೊಂಡಿದ್ದಾರೆ. ಇದರಲ್ಲಿ ಅನ್ಯಾಯವಾಗುತ್ತದೆಯೆಂದು ನಮಗೆ ತಿಳಿದುಬರುತ್ತಿದೆ. ಎಲ್ಲಿ ಸೆಲೆಕ್ಷನ್ ಪೋಸ್ಟ್ ಎಂದು ಇಟ್ಟಿದ್ದಾರೋ ಅದರಲ್ಲಿ ಸ್ವಲ್ಪ ರಾಜಕೀಯ ಕೈವಾಡ ಇದೆಯೆಂದು

ಕಾಣುತ್ತಾ ಇದೆ. ಆದರೆ ನಾನು ಸರ್ಕಾರದವರ ಮೇಲೆ ಆಡರಲ್ಲೂ ವೈಯಕ್ತಿಕವಾಗಿ ಯಾರೊಬ್ಬರ ಮೇಲೆ ಆಪೋಪಣೆ ಮಾಡುತ್ತಾ ಇಲ್ಲ. ನಾನು ಸರ್ಕಾರದ ನೀತಿಯ ಬಗ್ಗೆ ವಿಚಾರ ಮಾಡುತ್ತೇನೆ. ಈ ಸೆಲೆಕ್ಷನ್ ಪೋಸ್ಟನ್ನು ಭರ್ತಿಮಾಡುವಾಗ ಕೆಲವು ರಾಜಕೀಯ ಮುಖಂಡರ ಬೆಂಬಲದಿಂದ ಮತ್ತು ರಾಜಕೀಯ ಒತ್ತಾಯದಿಂದ ಕೆಲವು ಅನ್ಯಾಯಗಳು ನಡೆಯುತ್ತಾ ಇದೆ. ಕೆಲವು ಸೀನಿಯರ್ ಅಧಿಕಾರಿಗಳಿಗೆ ಅದಲ್ಲದೆ ಕೆಲವು ಇಲಾಖೆಗಳಲ್ಲಿ ಒಳ್ಳೆಯ ಹೆಸರನ್ನು ಗಳಿಸಿರತಕ್ಕ ಅಧಿಕಾರಿಗಳ ಮನಸ್ಸಿಗೆ ಅಸಮಾಧಾನ ಇದೆ. ಇನ್ನು ಈ ಇಲಾಖೆಯಲ್ಲಿ ಏನು ಅವರಿಂದ ಕೆಲಸವನ್ನು ಎಗ್ಸಿಬಿಟ್ ಮಾಡುತ್ತಾರೋ, ಎಫಿಷಿಯನ್ಸಿ ಮೇಂಟೇನ್ ಮಾಡುವುದರಲ್ಲಿ ಪ್ರಯತ್ನ ಮಾಡುತ್ತಿದ್ದಾರೋ ಅವರ ಬಗ್ಗೆ ಬಹಳ ಕಳವಳ ಉಂಟುಮಾಡಿದೆ. ಇದರಿಂದ ಈ ಇಲಾಖೆ ಸಾರ್ವಜನಿಕ ಹಿತದೃಷ್ಟಿಯಿಂದ ಕೆಲಸ ಮಾಡುವ ಬಗ್ಗೆ ಸರ್ಕಾರವೇ ಕೊಡಲಿ ಪೆಟ್ಟು ಹಾಕುವ ನೀತಿಯನ್ನನುಸರಿಸುತ್ತಿದೆ ಎಂದು ನಾನು ಮಾನ್ಯ ಸಚಿವರಿಗೆ ತಿಳಿಸಬಚ್ಛಿಸುತ್ತೇನೆ.

ಸೀನಿಯಾರಿಟಿಯ ಬಗ್ಗೆ ಬಹಳ ತರಹದ ಅಭಿಪ್ರಾಯಗಳು ಕೇಳಿ ಬರುತ್ತಿವೆ. ಇದಕ್ಕೆ ಯಾರು ಕಾರಣರು ಎಂದು ಹೇಳುವುದಕ್ಕಾಗುವುದಿಲ್ಲ. ಏನೇ ಇದ್ದರೂ ಕೂಡ ಅದನ್ನು ಸರಿಪಡಿಸಬೇಕು. ಆ ಇಲಾಖೆಯ ಅಧಿಕಾರಿಗಳು ಬಹಳ ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅದರ ಬಗ್ಗೆ ಸರ್ಕಾರದ ಗಮನ ಹರಿಯಬೇಕು. ಟ್ರಾನ್ಸ್‌ಫರ್ ಮಾಡುವ ವಿಚಾರದಲ್ಲಿ ಹಳೆ ಮೈಸೂರಿನ ಅಧಿಕಾರಿಗಳಿಗೆ ಬಹಳ ಕಿರುಕುಳವಾಗುತ್ತಿದೆ. ಈ ಒಂದು ಕೂಗು ಅನೇಕ ಕಡೆ ಕೇಳಿಬರುತ್ತಿದೆ. ಆದ್ದರಿಂದ ಸರ್ಕಾರದವರು ಆ ಕಡೆ ಗಮನ ಕೊಟ್ಟು ಆ ರೀತಿಯಾದಂತಹ ತೊಂದರೆಗಳಾವವೂ ಆಗುವುದಕ್ಕೆ ಅವಕಾಶವನ್ನು ಕೊಡದಂತೆ ಅದನ್ನು ಸರಿಪಡಿಸಬೇಕೆಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ ಇವೊತ್ತಿನ ದಿವಸ ಈ ಸರ್ಕಾರದ ಒಂದು ನೀತಿ ಏನಿದೆ ಅದರಿಂದ ಈ ಇಲಾಖೆಯ ಅಧಿಕಾರಿಗಳು ಅಪ್ರತ್ಯಕ್ಷವಾಗಿ ಕಾನೂನನ್ನು ಮೀರಿದು ಕೆಲಸಮಾಡುವುದಕ್ಕೆ ಒಳಗಾಗ ತಕ್ಕಂಥಾದ್ದನ್ನು ನಾವು ನೋಡುತ್ತಿದ್ದೇವೆ. ಇದಕ್ಕೆ ಒಂದು ಉದಾಹರಣೆಯನ್ನು ನಾನು ಹೇಳುತ್ತೇನೆ. ಅದೇನೆಂದರೆ ಇವೊತ್ತು ಒಬ್ಬ ರೆವಿನ್ಯೂ ಇನ್‌ಸ್ಪೆಕ್ಟರಿಗೆ ಇಬ್ಬರು ಜವಾನರನ್ನು ಸರ್ಕಾರದವರು ಕೊಟ್ಟಿದ್ದಾರೆ. ಆದರೆ ಬಿ. ಇ. ಪರೀಕ್ಷೆಯನ್ನು ಪಾಸುಮಾಡಿಕೊಂಡು ಜೂನಿಯರ ಇಂಜಿನಿಯರ್ ಆಗಿರತಕ್ಕವರಿಗೆ ಒಬ್ಬ ಜವಾನನನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಮಾಡಿಲ್ಲ; ಅವರು ರೋಡು ಕೂಲಿಗಳನ್ನು ಜವಾನರ ಕೆಲಸಕ್ಕೆ ನೇಮಕಮಾಡಿಕೊಂಡು ಅವರು ಅವರ ಮನೆಯ ಕೆಲಸಗಳನ್ನು ಮಾಡಿಸಿ ಕೊಳ್ಳುತ್ತಿದ್ದಾರೆ. ಬಿ. ಇ. ಪದವೀದರರಾಗಿರತಕ್ಕವರು ಜೂನಿಯರ್ ಇಂಜನಿಯರ್ ಆಗಿ ಸೂಪರ್‌ವೈಸರ್ ಆಗಿ ಸರ್ಕಾರದ ಕೆಲಸಗಳನ್ನು ಮಾಡುತ್ತಿರುವಾಗ ಅವರಿಗೆ ಬೇಕಾದ ಸೌಲಭ್ಯಗಳನ್ನು ಸರ್ಕಾರದವರು ಒದಗಿಸದೇ ಹೋದರೆ ಅವರು ಹೇಗೆ ಕೆಲಸಮಾಡಬೇಕು? ಹೀಗಿರುವುದರಿಂದ ಅವರು ಟೆಂಪರರಿ ಎಸ್ಟಾಬ್ಲಿಷ್‌ಮೆಂಟ್ ನೇಮಕಮಾಡಿಕೊಂಡು ಅವರು ಅವರ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಅವರಿಗೆ ಏನು ಸೌಲಭ್ಯವನ್ನು ಮಾಡಬೇಕೋ ಏನು ವ್ಯವಸ್ಥೆಯನ್ನು ಮಾಡಬೇಕೋ ಅದನ್ನು ಮಾಡುವುದಕ್ಕೆ ಸರ್ಕಾರದವರು ಆದಷ್ಟು ಜಾಗ್ರತೆ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಇಲ್ಲದಿದ್ದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ ಎಂದು ನಾನು ಸ್ಪಷ್ಟವಾಗಿ ತಮ್ಮ ಮುಂದೆ ತಿಳಿಸುತ್ತೇನೆ. ಒಂದು ಹೋಬಳಿಯಲ್ಲಿ 10 ಕೆಲಸಗಳು ನಡೆಯುತ್ತಿದ್ದರೆ ಒಬ್ಬ ಸೂಪರ್‌ವೈಜರ್ ಅವನಿಗಿರತಕ್ಕ ಕಾಲದಲ್ಲಿ ಎಲ್ಲಾ ಕೆಲಸಗಳನ್ನು ಸೂಪರ್‌ವೈಸ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಏನೋ ಎರಡು ಮೂರು ಕೆಲಸಗಳನ್ನು ಅವನು ಸೂಪರ್‌ವೈಸ್ ಮಾಡಬಹುದು. ಆದ್ದರಿಂದ ಅವನು ಆದಷ್ಟು ಮಟ್ಟಿಗೆ ಅವನು ಎಲ್ಲಾ ಕೆಲಸಗಳನ್ನು ಸೂಪರ್‌ವೈಸ್ ಮಾಡುವುದಕ್ಕೆ ಅನುಕೂಲವಾಗುವಂತೆ ಅವನಿಗೆ ಸರ್ಕಾರದವರು ಸೌಕರ್ಯವನ್ನು ಒದಗಿಸಿಕೊಡಬೇಕು. ಮೊನ್ನೆ ಇಂಜಿನಿಯರುಗಳ ಅಸೋಸಿಯೇಷನ್ನಿನಿಂದ ಸರ್ಕಾರಕ್ಕೆ ಒಂದು ಮನವಿ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದರಲ್ಲಿ ಈ ಸೂಪರ್‌ವೈಜರ ಗಳಿಗೆ ಸರ್ಕಾರದವರು ಒಂದು ಮೋಟಾರ್ ಸೈಕಲ್ ಕೊಡಬೇಕೆಂದು ಅವರು ಮನವಿಮಾಡಿಕೊಂಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಇದರ ಬಗ್ಗೆ ಸರ್ಕಾರದವರು ಕೂಡಲೇ ಪರಿಶೀಲನೆ ಮಾಡಿ ಸರ್ಕಾರದವರು ಅವರಿಗೆ ಕೊಡತಕ್ಕ ಸವಲತ್ತುಗಳನ್ನು ಕೊಡುವುದರ ಬಗ್ಗೆ ತಮ್ಮ ಮನಸ್ಸನ್ನು ಹರಿಸಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಇಲಾಖೆಯಲ್ಲಿ ಟೆಂಪರರಿ ಎಸ್ಟಾಬ್ಲಿಷ್‌ಮೆಂಟ್ ಎಂದು ಏನು ನೇಮಕ ಮಾಡಿಕೊಂಡಿದ್ದಾರೋ ಅದರಲ್ಲಿರತಕ್ಕ ಅಧಿಕಾರಿಗಳನ್ನು ಆದಷ್ಟು ಜಾಗ್ರತೆ ಖಾಯಂ ಪಡಿಸುವ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ. ಸ್ಪೆಷಲ್ ಆಫೀಸರ್ ಎಂದು ಏನು ಸರ್ಕಾರದವರು ನೇಮಕಮಾಡಿಕೊಂಡಿದ್ದಾರೋ ಅವರನ್ನೂ ಸಹ ಖಾಯಂಗೊಳಿಸುವ ಕಡೆ ಸರ್ಕಾರ ತನ್ನ ಗಮನವನ್ನು ಹರಿಸಬೇಕು. 10—15—20 ವರ್ಷಗಳ ವರೆಗೆ ಟೆಂಪರರಿ ಎಸ್ಟಾಬ್ಲಿಷ್‌ಮೆಂಟಿನಲ್ಲಿ ಕೆಲಸಮಾಡತಕ್ಕ ಅಧಿಕಾರಿಗಳಿಗೆ ಸವಲತ್ತುಗಳನ್ನು ಕೊಡದೇ ಹೋದರೆ ಅವರಿಗೆ ಕೆಲಸಮಾಡುವುದಕ್ಕೆ ಉತ್ಸಾಹ ಬರುವುದಿಲ್ಲ. ಆದ್ದರಿಂದ ಅವರಿಗೆ

(ಶ್ರೀ ಎಚ್. ಡಿ. ದೇವೇಗೌಡ)

ಸರ್ಕಾರದವರು ಏನು ಸವಲತ್ತುಗಳನ್ನು ಕೊಡಬೇಕೋ ಅದನ್ನು ಕೊಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಈ ಇಲಾಖೆಯಲ್ಲಿರತಕ್ಕ ಕೆಲವು ಲೋಪದೋಷಗಳನ್ನು ಹೇಳುವುದಕ್ಕೆ ನಾನು ಇಚ್ಛೆ ಪಡುತ್ತೇನೆ. ದೊಡ್ಡ ದೊಡ್ಡ ಕಂಟ್ರಾಕ್ಟರುಗಳಿಗೆ ಸರ್ಕಾರದವರು ಪ್ರತ್ಯಕ್ಷವಾಗಿ ಪುರಸ್ಕಾರಮಾಡುತಿದ್ದಾರ ಸಹಾಯಮಾಡುತ್ತಿದ್ದಾರೆ ಎನ್ನುವುದು ಧಿನನಿತ್ಯದ ಟೀಕೆಗಳಲ್ಲಿ ಕೇಳಿಬರುತ್ತಿದೆ. ಈ ಹಿಂದೆ ಈ ಇಲಾಖೆಯಲ್ಲಿ ಮಂತ್ರಿಗಳಾಗಿದ್ದವರು ಕಂಟ್ರಾಕ್ಟರುಗಳಿಗೆ ರಿಜಿಸ್ಟ್ರೇಷನ್ ಪದ್ಧತಿಯನ್ನು ಜಾರಿಗೆ ತಂದರು. ಇದರಿಂದ ಒಂದು ಕಡೆ ಕೆಲವು ಅಡ್ವಾಂಟೇಜ್‌ಗಳು ಇವೆ. ಇನ್ನೊಂದು ಕಡೆ ಅಡ್ವೇಡಿಸ್ ಅಡ್ವಾಂಟೇಜ್ ಕೂಡ ಇವೆ. ಈಗ ಕ್ಲಾಸ್ (1) ಮತ್ತು ಕ್ಲಾಸ್ (2) ಎಂದು ಕಂಟ್ರಾಕ್ಟರುಗಳನ್ನು ಮಾಡಿದ್ದಾರೆ. ಈಗ ಅವರಿಗೆ ಸಹಾಯವನ್ನು ಮಾಡಿದಂತಾಗಿದೆ. ಅವರು ಯಾವ ಒಂದು ಮೊದಲನೆಯ ದರ್ಜೆಯ ಮತ್ತು ಎರಡನೆಯ ದರ್ಜೆಯ ಕೆಲಸಕ್ಕಾಗಲೀ ಟೆಂಡರ್ ಹಾಕುವುದಕ್ಕೆ ಕಾಂಪಿಟ್ ಮಾಡುವುದಕ್ಕೆ ಅನುಕೂಲವಾಗಿದೆ. ಆದರೆ ಮೂರನೆಯ ದರ್ಜೆಯ ಮತ್ತು ನಾಲ್ಕನೆಯ ದರ್ಜೆಯ ಕಂಟ್ರಾಕ್ಟರುಗಳು ಆ ಕೆಲಸಗಳಿಗೆ ಟೆಂಡರ್ ಹಾಕುವುದಕ್ಕೆ ಕಾಂಪಿಟ್ ಮಾಡುವುದಕ್ಕಾಗುವುದಿಲ್ಲ. ಈಗ ಕೆಲವು ದೊಡ್ಡ ದೊಡ್ಡ ಕೆಲಸಗಳನ್ನು ಮೊದಲನೆಯ ದರ್ಜೆಯ ಮತ್ತು ಎರಡನೆಯ ದರ್ಜೆಯ ಕಂಟ್ರಾಕ್ಟರುಗಳಿಗೆ ಕೊಟ್ಟರೆ ಅವರಲ್ಲಿ ಮಷನರಿಗೆ ಬೇಕಾದ ಬಂಡವಾಳ ಇರುತ್ತದೆ, ಅವರು ಕೆಲಸವನ್ನು ಚೆನ್ನಾಗಿ ಮಾಡುತ್ತಾರೆ, ಅವರು ಅದಷ್ಟು ಜಾಗ್ರತೆ ಡೆವಲಪ್‌ಮೆಂಟ್ ಕೆಲಸಗಳನ್ನು ಮುಗಿಸಬಹುದು, ಅದರಿಂದ ಜನತೆಗೆ ಬೇಗ ಸೌಲಭ್ಯ ದೊರೆಯುವುದಕ್ಕೆ ಅವಕಾಶವಾಗುತ್ತದೆ ಎನ್ನುವ ವಾದ ಇದೆ. ಒಂದು ವೇಳೆ ಈ ವಾದವನ್ನು ನಾವು ಒಪ್ಪಿದರೂ ಕೂಡ ಶರಾವತಿಯ ವರದಿಯನ್ನು ನೋಡಿದರೆ ವೇದ್ಯವಾಗುತ್ತದೆ. ಕ್ಲಾಸ್ (1) ಮತ್ತು ಕ್ಲಾಸ್ (2)ನೇ ಕಂಟ್ರಾಕ್ಟರುಗಳು ಇವೊತ್ತಿನ ದಿವಸ ಸರ್ಕಾರದವರ ಅಡ್ವಾನ್ಸಿನ ಸಹಾಯ ವಿಲ್ಲದೆ ಕೈಹಾಕಿ ಕೆಲಸಮಾಡುವುದಕ್ಕಾಗುವುದಿಲ್ಲ ಎನ್ನುವ ಒಂದು ನಿದರ್ಶನವನ್ನು ಶರಾವತಿಯ ವೈಟ್ ಪೇಪರನಲ್ಲಿ ನಾವು ನೋಡಬಹುದು. ಸರ್ಕಾರದವರು ಆ ರೀತಿ ಅವರಿಗೆ ಅಡ್ವಾನ್ಸ್ ಕೊಡದೇ ಹೋಗಿದ್ದ ಪಕ್ಷದಲ್ಲಿ ಕ್ಲಾಸ್(1)ಮತ್ತು ಕ್ಲಾಸ್(2)ನೇ ಕಂಟ್ರಾಕ್ಟರುಗಳಿಂದ ಕೆಲಸಗಳು ಇಷ್ಟು ಬೇಗ ಆಗುತ್ತಾ ಇರಲಿಲ್ಲ. ಆ ಕಾಂಟ್ರಾಕ್ಟರುಗಳು ಮೇಷನರಿಯನ್ನು ಕೊಂಡುಕೊಳ್ಳುವುದಕ್ಕೆ ಲಾರಿಯನ್ನು ಕೊಂಡುಕೊಳ್ಳುವುದಕ್ಕೆ ಸರ್ಕಾರದವರು ಅಡ್ವಾನ್ಸ್ ಅನ್ನು ಕೊಟ್ಟಿದ್ದಾರೆ. ಆ ಕೆಲಸಕ್ಕೆ ಕ್ಲಾಸ್ (1) ಮತ್ತು ಕ್ಲಾಸ್ (2)ನೇ ಕಂಟ್ರಾಕ್ಟರ ಗಳು ಟೆಂಡರನ್ನು ಹಾಕಬೇಕೆಂದು ನಿಯಮವನ್ನು ಹಾಕಿ ಅವರಿಗೆ ಲಾರಿಯನ್ನು ಕೊಂಡುಕೊಳ್ಳುವುದಕ್ಕೆ ಮತ್ತು ಮೇಷನರಿಗೆ ಸರ್ಕಾರದವರು ಅಡ್ವಾನ್ಸ್ ಕೊಟ್ಟಿದ್ದಾರೆ. ಅದೇ ರೀತಿ 3ನೇ ದರ್ಜೆ ಮತ್ತು 4ನೇ ದರ್ಜೆಯ ಕಂಟ್ರಾಕ್ಟರುಗಳಿಗೂ ಸಹ ಅಲ್ಲಿ ಕೆಲಸಮಾಡುವುದಕ್ಕೆ ಅವಕಾಶವನ್ನು ಕೊಟ್ಟು ಅವರಿಗೆ ಮೆಷನರಿ ಮತ್ತು ಲಾರಿಗಳನ್ನು ಕೊಂಡುಕೊಳ್ಳುವುದಕ್ಕೆ ಸರ್ಕಾರದವರು ಅಡ್ವಾನ್ಸ್ ಕೊಡಬಹುದಾಗಿತ್ತು. ಇವರು ಶರಾವತಿಯಲ್ಲಿ ಕಂಟ್ರಾಕ್ಟರುಗಳಿಗೆ ಹಾಗೂ ಮಷಿನರಿಗಳನ್ನು ಕೊಂಡ ಕೊಳ್ಳುವುದಕ್ಕೆ ಅಡ್ವಾನ್ಸ್‌ನ್ನು ಕೊಟ್ಟಿರುವುದನ್ನು ನೋಡಿದರೆ ರಿಜಿಸ್ಟ್ರೇಷನ್ ಪದ್ಧತಿಯಿಂದ ಪಾರಾಗುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಹಾಗೆ ಕಾಣುತ್ತದೆ. ಇದನ್ನು ನೋಡಿದರೆ ರಿಜಿಸ್ಟ್ರೇಷನ್ ಕಾನೂನು ಇಲ್ಲವೆಂಬುದನ್ನು ನಾವು ಯೋಚನೆ ಮಾಡಬಹುದು. ಶರಾವತಿಯಲ್ಲಿ ಭಾರಿ ಭಾರಿ ಕಂಟ್ರಾಕ್ಟರುಗಳಿಗೆ ಮಿಷನರಿಯನ್ನು ಮತ್ತು ಲಾರಿಯನ್ನು ಕೊಂಡುಕೊಳ್ಳುವುದಕ್ಕೆ ಸರ್ಕಾರದವರು ಅಡ್ವಾನ್ಸ್ ಕೊಡಬೇಕಾಗಿದ್ದರೆ ನೀವು ಯಾವ ರೀತಿ ನಿಯಮವನ್ನು ನಿಮ್ಮ ಪಾಲಿಸಿಯಲ್ಲಿ ಲೇಡೌನ್ ಮಾಡಿದ್ದೀರೆಂಬುದನ್ನು ಈ ಸಭೆಗೆ ತಿಳಿಸಬೇಕೆಂದು ನಾನು ಕೇಳುತ್ತೇನೆ. ಇವೊತ್ತು ಲೋಕೋಪಯೋಗಿ ಇಲಾಖೆಯ ಕೆಲಸಗಳಿಗೆ ಲಾರಿಯನ್ನು ಕೊಂಡುಕೊಳ್ಳಲು ಕಂಟ್ರಾಕ್ಟರುಗಳಿಗೆ ಅಡ್ವಾನ್ಸ್ ಕೊಟ್ಟಿರುವುದನ್ನು ಶರಾವತಿಯ ರಿಪೋರ್ಟಿನಲ್ಲಿ ವಿವರಿಸಲಾಗಿದೆ. ಈ ವಿಷಯದಲ್ಲಿ ಒಂದು ನಿರ್ದಿಷ್ಟವಾದ ಪಾಲಿಸಿಯನ್ನು ಹಾಕಿಕೊಳ್ಳತಕ್ಕದ್ದು ಸೂಕ್ತ. ಮತ್ತು ಎಲ್ಲಾ ತರಹ ಕಂಟ್ರಾಕ್ಟರುಗಳಿಗೂ ಲೋಕೋಪಯೋಗಿ ಇಲಾಖೆಯ ಕೆಲಸಗಳಿಗೆ ಲಾರಿ ಮತ್ತು ಮಿಷನರಿಯನ್ನು ಕೊಂಡುಕೊಳ್ಳುವುದಕ್ಕೆ ಸರ್ಕಾರದವರು ಅಡ್ವಾನ್ಸ್ ಕೊಡುವಹಾಗೆ ಏರ್ಪಾಡು ಮಾಡತಕ್ಕದ್ದು ಬಹಳ ಒಳ್ಳೆಯದು.

ಕ್ವಾಲಿಟಿ ಆಫ್ ದಿ ವರ್ಕಿನ ವಿಷಯದಲ್ಲಿ ಇಲ್ಲಿ ನಾನು ಅನೇಕ ಸಾರಿ ಪ್ರಸ್ತಾಪ ಮಾಡಿದ್ದೇನೆ. ನನಗೆ ಇರತಕ್ಕ ಸ್ವಂತ ಅನುಭವದಲ್ಲೇ ನಾನು ಹೇಳುವುದಾದರೆ ಕಂಟ್ರಾಕ್ಟರು ಮಾಡುವ ಕೆಲಸಕ್ಕೆ ಈ ಇಲಾಖೆಯ ಅಧಿಕಾರಿಗಳನ್ನು ಟೀಕೆಮಾಡತಕ್ಕದ್ದು ಸರಿಯಲ್ಲ. ಒಬ್ಬ ಅಧಿಕಾರಿಗೆ ಸುಮಾರು 10—20 ಕೆಲಸಗಳಿರುತ್ತವೆ. ಪ್ರಾಜೆಕ್ಟ್ ಕೆಲಸಗಳನ್ನು ಬಿಟ್ಟರೆ ಬೇರೆ ಕೆಲಸಗಳಲ್ಲಿ ಒಬ್ಬ ಸೂಪರ್‌ವೈಜರ್‌ಗೆ ಸಾಮಾನ್ಯವಾಗಿ 10-20 ಕೆಲಸಗಳಿರುತ್ತವೆ. ಆ ಒಬ್ಬ ಅಧಿಕಾರಿ ಆ ಕೆಲಸಗಳ ಹತ್ತಿರ

ಹೋಗಿ ಪ್ರತಿನಿತ್ಯ ಸೂಪರ್‌ವೈಸ್ ಮಾಡುವುದಕ್ಕೆ ಕಷ್ಟವಾಗುತ್ತದೆ. ಸಾಮಾನ್ಯವಾಗಿ ಕಂಟ್ರಾಕ್ಟರಲ್ಲಿ ನಂಬಿಕೆಯನ್ನು ಇಡಬೇಕಾಗುತ್ತದೆ. ಕಂಟ್ರಾಕ್ಟರುಗಳು ಪ್ರಾಮಾಣಿಕತೆಯಿಂದ ಇದ್ದರೆ ಮಾತ್ರ ಸರಿಯಾದ ಕ್ವಾಲಿಟಿ ಆಫ್ ದಿ ವರ್ಕನ್ನು ಮೇಂಟೆನ್ ಮಾಡುವುದಕ್ಕೆ ಸಾಧ್ಯ. ಇಲ್ಲದೇ ಹೋದರೆ ಯಾವ ಅಧಿಕಾರಿಯಿಂದಲೂ ಕೆಲಸದಲ್ಲಿ ಸರಿಯಾದ ಕ್ವಾಲಿಟಿಯನ್ನು ಮೇಂಟೇನ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ವಿಷಯದಲ್ಲಿ ಅಧಿಕಾರಿಗಳನ್ನು ಟೀಕೆ ಮಾಡುವುದಕ್ಕಾಗುವುದಿಲ್ಲ. ಇನ್ನು ಸರಿಪಡಿಸಬೇಕಾಗಿದ್ದರೆ ಈಗ ಕಂಟ್ರಾಕ್ಟರುಗಳಿಗೆ ರಿಜಿಸ್ಟ್ರೇಷನ್ ಪದ್ಧತಿಯನ್ನು ಹೇಗೆ ಸರ್ಕಾರದವರು ಇಂಟ್ರಡ್ಯೂಸ್ ಮಾಡಿದ್ದಾರೆಯೋ ಅದೇ ರೀತಿ ಕ್ವಲಿಟಿ ಆಫ್ ದಿ ವರ್ಕಿನ ವಿಷಯದಲ್ಲಿಯೂ ಸಹ ಅವರಿಗೆ ಜವಾಬ್ದಾರಿಯನ್ನು ಫಿಕ್ಸ್ ಮಾಡಬೇಕು. ಇಂಜಿನಿಯರುಗಳು ತಾಂತ್ರಿಕ ಅನುಭವವನ್ನು ಹೊಂದಿ ಒಂದು ಕೆಲಸವನ್ನು ಮಾಡಿದರೆ ನಡೆಯುತ್ತದೆ. ಆದರೆ ಯಾವ ಅನುಭವವೂ ಇಲ್ಲದೆ ಕೆಲಸವನ್ನು ಮಾಡಿಸತಕ್ಕ ಕಂಟ್ರಾಕ್ಟರ ಗಳಿಗೆ ಅವರು ಮಾಡಿಸಿದ ಕೆಲಸಕ್ಕೆ ಒಂದು ಮಿನಿಮಮ್ ಡ್ಯೂರೇಷನ್ 10 ವರ್ಷ ಅಥವಾ 5 ವರ್ಷ ಗೊತ್ತುಮಾಡಿ ಅವರಿಗೆ ಅದರ ಜವಾಬ್ದಾರಿಯನ್ನು ಫಿಕ್ಸ್ ಮಾಡಬೇಕು. ಆ ರೀತಿ ಕ್ವಾಲಿಟಿ ಆಫ್ ದಿ ವರ್ಕಿನ ವಿಷಯದಲ್ಲಿ ಕಂಟ್ರಾಕ್ಟರುಗಳಿಗೆ ಜವಾಬ್ದಾರಿಯನ್ನು ಫಿಕ್ಸ್ ಅಪ್ ಮಾಡಿದರೆ ಅವರು ಯಾರಿಗಾದರೂ ಸಹ ಸಂಭಾವನೆಯನ್ನು ಕೊಡುವುದಕ್ಕೆ ಹಿಂದೆಗೆಯುತ್ತಾರೆ. ಆ ರೀತಿ ಅವರು ಮಾಡಿಸಿದ ಒಂದು ಕೆಲಸಕ್ಕೆ ಡ್ಯೂರೇಷನ್ ಫಿಕ್ಸ್ ಮಾಡಿ ಒಂದು ವೇಳೆ ಆ ಡ್ಯೂರೇಷನ್ನಿನ ಒಳಗಡೆ ಆ ಕೆಲಸ ಡ್ಯಾಮೇಜ್ ಆದರೆ ನನ್ನ ಆಸ್ತಿಪಾಸ್ತಿಗಳಿಗೆ ತೊಂದರೆಯಾಗುತ್ತದೆ ಎನ್ನುವ ಭಾವನೆ ಆ ಕಂಟ್ರಾಕ್ಟರುಗಳಿಗೆ ಬರುತ್ತದೆ.

ಕಂಟ್ರಾಕ್ಟುದಾರರು ರಿಜಿಸ್ಟರು ಮಾಡಿಕೊಂಡಿರುವುದರಿಂದ ಅವರಿಗೆ ವಹಿಸುವ ಕೆಲಸಕ್ಕೆ ಅವರ ಮೇಲೆ ಜವಾಬ್ದಾರಿಯನ್ನು ಹೊರಿಸಬೇಕು. ಆಗ ಕಂಟ್ರಾಕ್ಟರಿಗೆ ಕೆಲಸ ಚೆನ್ನಾಗಿರಬೇಕು ಎನ್ನುವುದರ ಕಡೆ ಗಮನ ಹರಿಯುತ್ತದೆ. ಕಂಟ್ರಾಕ್ಟರುಗಳಿಗೆ ಬೇಕಾದ ಸವಲತ್ತುಗಳನ್ನು ಕೊಡಿ. ಆಗ ಕೆಲಸಗಳೂ ಚೆನ್ನಾಗಿ ನಡೆಯುತ್ತವೆ ಮತ್ತು ಭ್ರಷ್ಟಾಚಾರಗಳು ನಡೆಯುವುದಕ್ಕೂ ಅವಕಾಶ ಕಡಮೆಯಾಗುತ್ತದೆ.

ಅಧಿಕಾರಿಗಳು ಎಸ್ಟಿಮೇಟುಗಳನ್ನು ಸರಿಯಾಗಿ ಮಾಡದೆ ತೊಂದರೆಯಾಗುತ್ತಿದೆ. ಇದಕ್ಕಾಗಿ estimates and designs ಗೇ ಒಂದು ಸೆಕ್ಷನ್ ತೆರೆಯಬೇಕೆಂದಿರುವುದಾಗಿ ಹೇಳಿದ್ದಾರೆ. ಇದು ಶ್ಲಾಘನೀಯವಾದುದು. 50 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ಯಾವ ಅಂದಾಜುಗಳೂ ಪುನರ್ವಿಮರ್ಶೆಯಾಗದೆ ಕೆಲಸ ಪೂರ್ತಿಯಾಗಿಲ್ಲ. ನಮ್ಮ ರಾಜ್ಯದ ಇಂಜಿನಿಯರುಗಳು ಕೀರ್ತಿಯನ್ನು ಬೆಳೆಸಿದ್ದರು. ಅಂಥವರು ಈಗ ನಮ್ಮ ರಾಜ್ಯದಲ್ಲಿಲ್ಲವೇನು ? ಅಡಿಪಾಯ ಆಳವಾಗಿ ತೆಗೆಯಬೇಕಾದ್ದರಿಂದ ಜಾಸ್ತಿ ಹಣ ಖರ್ಚಾಯಿತು ಎಂದು ಹೇಳತಕ್ಕದ್ದು ಸರಿಯೋ ಇಲ್ಲವೇ ಎನ್ನುವುದರ ವಾದವಿವಾದಕ್ಕೆ ಹೋಗುವುದಿಲ್ಲ. ಒಂದು ಕೆಲಸಕ್ಕೆ ಅಂದಾಜನ್ನು ತಯಾರು ಮಾಡುವುದಕ್ಕೆ ಮುಂಚೆ ಸಾಧ್ಯವಾದ ವಿವರಗಳನ್ನೆಲ್ಲ ಪಡೆದು, ಪರೀಕ್ಷೆನಡೆಸಿ ತಯಾರುಮಾಡಬೇಕು. Designs and preparation of estimate ಬಗ್ಗೆ ಮೊದಲು ಆದ್ಯತೆಯನ್ನು ಕೊಡಬೇಕು ಹಾಗೆ ಮಾಡಿದರೆ ಕಂಟ್ರಾಕ್ಟರ ಮೇಲೆ quality control ಮಾಡುವುದಕ್ಕೆ ಸಾಧ್ಯವೆಂದು ಹೇಳುತ್ತೇನೆ.

ನಮ್ಮ ಇಂಜಿನಿಯರುಗಳಿಗೆ ಕೆಲವು ಬಾಬುಗಳಿಗೆ ಷೆಡ್ಯೂಲ್ ರೇಟ್ಸ್ ತಯಾರು ಮಾಡುವುದಕ್ಕೆ ಏನು ಅಡ್ಡಿ ಆತಂಕಗಳಿವೆ ಎಂದು ಕೇಳುತ್ತೇನೆ. ಕೆಲವು ಕೆಲಸಗಳಿಗೆ ಷೆಡ್ಯೂಲ್ ರೇಟ್ ಇವತ್ತಿಗೂ ಇಲ್ಲ. ಕಂಟ್ರಾಕ್ಟರುಗಳೂ ಕೆಲವು ಇಲಾಖಾಧಿಕಾರಿಗಳಿಗೂ ಜೊತೆಗೂಡಿ—ಎಲ್ಲ ಅಧಿಕಾರಿಗಳ ಬಗ್ಗೆಯೂ ಹೇಳುತ್ತಿಲ್ಲ—ಇಂಥ ಬಾಬುಗಳಲ್ಲಿ ಎಸ್ಟಿಮೇಟ್ ದರಗಳನ್ನೂ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡಿ ಟೆಂಡರ್ ರೇಟ್ ಹೆಚ್ಚು ಮಾಡಲು ಕೆಲವು ಸಂದರ್ಭಗಳಲ್ಲಿ ಅವಕಾಶವಾಗುತ್ತದೆ. ಇದರ ಬಗ್ಗೆಯೂ ಸರ್ಕಾರ ಗಮನ ಕೊಡಬೇಕು.

ಇಲಾಖೆಯಲ್ಲಿ 1 : 4 ಪ್ರಮಾಣದಲ್ಲಿ ಸಿಮೆಂಟ್ ಮಾರ್ಟರ್ ಉಪಯೋಗಿಸಿ ಸ್ಕ್ರೈಸ್‌ಸ್ಟೋನ್ ಕಟ್ಟಡಕ್ಕೆ ಷೆಡ್ಯೂಲ್ ರೇಟ್ ಇಲ್ಲ. ಅದಕ್ಕೆ ಷೆಡ್ಯೂಲ್ ರೇಟ್ ಮಾಡುವುದಕ್ಕೆ ಇವರಿಗೆ ಶಕ್ತಿ ಇಲ್ಲವೇ ? Non-schedule rate ಇರುವ ಪ್ರತಿಯೊಂದು ಬಾಬಿಗೂ ಸಹ ಸಾಧ್ಯವಾದ ಮಟ್ಟಿಗೂ schedule rate ತಯಾರ ಮಾಡುವುದು ಬಹಳ ಸೂಕ್ತ. ಇಲ್ಲದೆ ಹೋದರೆ underhand dealings ನಡೆಯಲು ನಾವೇ ಅವಕಾಶ ಕಲ್ಪಿಸಿ ಮಾಡಿಕೊಟ್ಟ ಹಾಗಾಗುತ್ತದೆ.

ಇಲಾಖೆಯಲ್ಲಿ ಕೆಲವು data work out ಮಾಡತಕ್ಕ ಕಾಲದಲ್ಲಿ ಸರ್ಕಾರದವರೂ, ಮಂತ್ರಿಗಳೂ ಕಣ್ಣುಮುಚ್ಚುವ ವ್ಯವಹಾರ ಮಾಡುತ್ತ ನಮ್ಮ ಇಂಜಿನಿಯರು ಇದ್ದಾರೆ ಎನ್ನುವುದು ಸರಿಯಲ್ಲ. ಅವರು ಇಲಾಖಾಧಿಕಾರಿಗಳ ಜೊತೆಯಲ್ಲಿ ಕುಳಿತುಕೊಂಡು ಚರ್ಚೆ ಮಾಡಿದರೆ ಕೆಲವು ಭ್ರಷ್ಟಾಚಾರಗಳು ನಡೆಯುವುದಕ್ಕೆ ಅವಕಾಶಕಡಮೆಯಾಗುತ್ತದೆ.

ಸಿವಿಲ್ ಇಂಜಿನಿಯರ್ ಡಿಪ್ಲೊಮಾ ಹೋಲ್ಡರುಗಳಿಗೆ ಕೆಲಸವಿಲ್ಲ ಎನ್ನುವುದು ನಿರ್ವಿವಾದ. ಇಂಥವರುಗಳಿಗೆ ಏಕೆ ಕಂಟ್ರಾಕ್ಟ್ ಕೆಲಸಮಾಡುವುದಕ್ಕೆ ಅವಕಾಶಕೊಡಬಾರದು ? ಅಣೆಕಟು

(ಶ್ರೀ ಎಚ್. ಡಿ. ದೇವೇಗೌಡ)

ಕೆಲಸ ಮುಂತಾದುವನ್ನು ಮಾಡುವ ದೊಡ್ಡ ದೊಡ್ಡ ಕಂಟ್ರಾಕ್ಟುದಾರರಿಗೆ ಯಂತ್ರೋಪಕರಣಗಳನ್ನು ಕೊಟ್ಟು, ಹಣವನ್ನು ಕೊಟ್ಟು ಸರ್ಕಾರ ಒಂದು ತರಹ ಪುರಸ್ಕಾರ ಮತ್ತು ಪ್ರೋತ್ಸಾಹವನ್ನು ಪರೋಕ್ಷವಾಗಿ ಕೊಡುತ್ತಿದ್ದಾರೆ. ಇದೇರೀತಿ ಸಿವಿಲ್ ಇಂಜಿನಿಯರಿಂಗ್ ಡಿಪ್ಲೊಮಾ ಹೊಂದಿರುವವರಿಗೆ ಸರ್ಕಾರದ ಕಾಮಗಾರಿಕೆ ಕೆಲಸಗಳನ್ನು ಮಾಡಿಸುವುದರಲ್ಲಿ ಪ್ರಥಮವಾಗಿ ಆದ್ಯತೆಯನ್ನು ಕೊಟ್ಟು ಕೆಲಸಮಾಡಿಸುವುದಕ್ಕೆ ಪ್ರಾರಂಭ ಮಾಡಿದರೆ ಅವನು technical man ಆಗಿರುವುದರಿಂದ ಕೆಲಸದ ಅನುಭವವೂ ಬರುತ್ತದೆ. ಅವನಲ್ಲಿರುವ ಹಣದ ಪರಿಮಿತಿಯನ್ನು ನೋಡಿ ಅದಕ್ಕೆ ತಕ್ಕಂಥ ಕೆಲಸಗಳನ್ನು ಮಾತ್ರ ವಹಿಸಬಹುದು. ಇದನ್ನು ಸರ್ಕಾರ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

Public Accounts Committee Report ಬಂದಾಗ ವಿವರವಾಗಿ ಹೇಳುತ್ತೇನೆ. ಈ ಇಲಾಖೆಯಲ್ಲಿ ಉಪಯೋಗಿಸುವ ಯಂತ್ರೋಪಕರಣಗಳನ್ನು ರಿಪೇರಿ ಮಾಡುವುದಕ್ಕೇ ಸಾಧ್ಯವಿಲ್ಲವೋ ಏನೋ ಎಂದು ಕಾಣುತ್ತದೆ. ಚಾಕೇನಹಳ್ಳಿ ಪ್ರಾಜೆಕ್ಟ್‌ಗೆ ಕಳಿಸಿರುವ ಯಂತ್ರಗಳನ್ನು ನಾನು ನೋಡಿದ್ದೇನೆ. ಇದನ್ನು ರಿಪೇರಿಮಾಡುವುದಕ್ಕೆ 30 40 ಸಾವಿರ ರೂಪಾಯಿ ಅಂದಾಜನ್ನು ಮದ್ರಾಸಿನ ಒಂದು ಕಂಪನಿ ಏನು ಕೊಟ್ಟಿದ್ದಾರೆ. ಭಾಕ್ರಾದಿಂದ ತಂದಿದ ಹಳೆಯ ಯಂತ್ರಗಳು ಇನ್ನಾಗಿವೆ. ಶ್ರೀ ಆಲೂರು ಹನುಮಂತಪ್ಪನವರು ಭಾಷಣ ಮಾಡುವಾಗಲೆಲ್ಲ ಪ್ರತಿಯೊಂದನ್ನೂ ತರಿಸಿದ್ದೇವೆ, ಯಂತ್ರಗಳನ್ನೂ ತರಿಸಿದ್ದೇವೆಂದು ಹೇಳುತ್ತಾರೆ, ಇವು ಎಷ್ಟರ ಮಟ್ಟಿಗೆ ಉಪಯೋಗಕ್ಕೆ ಬರುತ್ತವೆಂಬುದನ್ನು ಯೋಚನೆ ಮಾಡಬೇಕು. ಇವತ್ತು ಇರುವ ಯಂತ್ರೋಪಕರಣಗಳಲ್ಲಿ ಶೇಕಡ 60 condemn ಮಾಡಬಹುದು. ಆದುದರಿಂದ ರಿಪೇರಿಗೆ ಕೈ ಹಾಕುವುದಕ್ಕೆ ಮುಂಚೆ ರಿಪೇರಿಗಾಗಿ ಖರ್ಚು ಮಾಡುವಷ್ಟು ಹಣಕ್ಕೆ ಪ್ರತಿಫಲ ದೊರೆಯುತ್ತದೆಯೋ ಎಂಬುದನ್ನು ನೋಡಬೇಕು. ಇಲ್ಲದೆಹೋದರೆ ಬೇರೆ ಯಂತ್ರಗಳನ್ನು ತರಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

Stores ಚೆಕ್‌ಮಾಡುವ ವಿಚಾರದಲ್ಲಿ ಆರು ತಿಂಗಳಿಗೊಂದು ಸಲ ಚೆಕ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಎಕ್ಸಿಕ್ಯೂಟಿವ್ ಇಂಜಿನಿಯರ್ ಕಷ್ಟ ಗೊತ್ತಿದೆಯೇ ? ಅವರು ಹೇಗೆ ಕೆಲಸ ಮಾಡಬೇಕು ; ಈಗ ಇರತಕ್ಕ work load ಸುಧಾರಿಸಿಕೊಂಡು ಹೋಗುವುದಕ್ಕೆ ಕಷ್ಟವಾಗಿದೆ. ಅವರು ತಮಗೆ ಬಂದಿರುವ ಸಿಮೆಂಟ್ ಬೇರೆ ಹಂಚಬೇಕು. ಅದನ್ನು ಇನ್‌ವಾಯಿಸ್ ಮೇಲೆ ಕೊಡುತ್ತಿರುತ್ತಾರೆ. ಒಂದೊಂದು ದಿವಸವೇ ಎಷ್ಟೋ ಅನ್ಯಾಯಗಳನ್ನು ಸ್ಟೋರ್ ಕೀಪರ್ ಮಾಡುತ್ತಾರೆ. ಹೀಗೆ ಯಾರಾದರೂ ಅನೀತಿಗೆ ಒಳಪಟ್ಟಿರುವವರು ಅನ್ಯಾಯ ಮಾಡಿದರೆ ಅದಕ್ಕೆ ಜವಾಬ್ದಾರರು ಯಾರು ? ಅಧಿಕಾರಿಗಳ ಮೇಲೆ ಈ ಜವಾಬ್ದಾರಿಯನ್ನು fix ಮಾಡಬಹುದು. ಅದೊಂದೇ ಪರಿಹಾರವಲ್ಲ. ಅವರಿಗೆ ಇರತಕ್ಕ practical ಆಗಿ ಇರತಕ್ಕ ಕಷ್ಟದ ಬಗ್ಗೆ ನೋಡಬೇಕು. ಈ ವಿಚಾರವನ್ನು ಇಲಾಖಾ ಮುಖ್ಯಾಧಿಕಾರಿಗಳ ಜೊತೆಯಲ್ಲಿ ಪ್ರಸ್ತಾಪಮಾಡಿ ಅದಕ್ಕೆ ಸರಿಯಾದ ವ್ಯವಸ್ಥೆಮಾಡಬೇಕು. ನಮ್ಮ ಮುಂದಿರುವ ಬೇಡಿಕೆಗಳ ಬಗ್ಗೆ ನನ್ನ ಅನುಭವದಿಂದ general ಆಗಿ ಕೆಲವು ವಿಷಯಗಳ ಬಗ್ಗೆ ಹೇಳಿದ್ದೇನೆ.

ಇವತ್ತು ರೂರಲ್ ಕಮ್ಯೂನಿಕೇಷನ್‌ನಲ್ಲಿ 16 ಸಾವಿರ ಮೈಲಿ ರಸ್ತೆಮಾಡಬೇಕೆಂದು ಒಂದು ಯೋಜನೆಯನ್ನು ಹಾಕಿ ಕೊಂಡು ಕೆಲಸಮಾಡುವುದು ಬಹಳ ಸಂತೋಷ. ಹಳ್ಳಿಯ ಜನತೆ ಸಂಚಾರ ಸೌಲಭ್ಯವಿಲ್ಲದೆ ಕಂಗಾಲಾಗಿರುವಾಗ ಇಂಥ ಯೋಜನೆಯನ್ನು ಹಾಕಿಕೊಂಡಿರುವುದು ಬಹಳ ಶ್ಲಾಘನೀಯವಾದುದು. ಇದಕ್ಕಾಗಿ ಈಗಾಗಲೇ 600 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಆದರೆ ಈ ರಸ್ತೆಗಳು ಸರಿಯಾಗಿಲ್ಲ. ನಿಮ್ಮ ಅಧಿಕಾರಿಗಳನ್ನೂ ಕರೆದುಕೊಂಡು ಬನ್ನಿ. ಅವರೇ ನೋಡಿ ರಸ್ತೆ ಇಂಥಕಡೆ ಸರಿಯಾಗಿದೆ ಎಂದರೆ ಒಪ್ಪಿಕೊಳ್ಳುತ್ತೇನೆ. ನೀವು ಕೊಡುವ ದುಡ್ಡಿಗೆ ಸರಿಯಾಗಿ ಕೆಲಸ ಮಾಡಿಸಿದಾರೆಯೇ ?. ಇಂಥ ಕೆಲಸದಿಂದ ಯಾವುದಾದರೂ ಪುಣ್ಯ ಪುರುಷಾರ್ಥವಿದೆಯೇ ಎಂದು ಯೋಚನೆಮಾಡಿ. 600 ಲಕ್ಷ ರೂಪಾಯಿ ಖರ್ಚುಮಾಡಿ 9 ಸಾವಿರ ಮೈಲಿ earth work ಟ್ರ್ಯಾಕ್ ಮಾಡಿದೇವೆ ಎಂದು ಹೇಳಿದ್ದೀರಿ. ಆದರಿಂದ ಏನು ಉಪಯೋಗ ? ಇಂಥದನ್ನು ಏಕೆಮಾಡಬೇಕು. ಇದರಿಂದ 600 ಲಕ್ಷ ರೂಪಾಯಿಗಳನ್ನು ಕಳೆದುಕೊಂಡಂತಾಗಿದೆ. ಆರು ಕೋಟಿ ರೂಪಾಯಿ ಅನ್ಯಾಯವಾಗುವುದನ್ನು ಉಳಿಸಬೇಕಾದರೆ ಯಾವುವಾದರೂ resources ನಿಂದ ಇನ್ನೂ ಆರು ಕೋಟಿ ರೂಪಾಯಿ ಒದಗಿಸಿ, ಇಲ್ಲವೆ ಹೋದರೆ ನೀರಿನಲ್ಲಿ ಹೋಮಮಾಡಿದ ಹಾಗೆ ಆಗುತ್ತದೆ. ಈಗ ಖರ್ಚಾಗಿರುವ ದೇಶದ ಜನತೆಯ ದುಡ್ಡು ಅನ್ಯಾಯವಾಗದಿರುವಂತೆ ಇನ್ನೂ ಸ್ವಲ್ಪ ಹೆಚ್ಚು ಹಣವನ್ನು ಒದಗಿಸಿ ಪಕ್ಕಾರಸ್ತೆ ಮಾಡಬೇಕೆಂದು ಹೇಳುತ್ತೇನೆ. 50 ಲಕ್ಷ ರೂಪಾಯಿ ಈ ವರ್ಷ ಕೊಟ್ಟಿದೀರಿ. 200 ಜನ ಸದಸ್ಯರೂ ಹೋಗಿ ಕೇಳಿದರೆ, ಈ ಹಣವನ್ನು ಅವರು ಹೇಗೆ ಯಾವ ಯಾವ ಭಾಗಕ್ಕೆ ಹಂಚಬೇಕು ಎನ್ನುವುದು ಅರ್ಥವಾಗುವುದಿಲ್ಲ. Rural

communications maintenance, construction of culverts ಇವುಗಳಿಗೆ ಒದಗಿಸಿರುವ ಹಣ ಸಾಕಾಗುವುದಿಲ್ಲ. ಸಪ್ಲಿಮೆಂಟರಿ ಡಿಮ್ಯಾಂಡಿನಿಂದಾದರೂ ವ್ಯವಸ್ಥೆಮಾಡಿ ಹೆಚ್ಚಿನ ಹಣವನ್ನು ಒದಗಿಸುವುದು ಸೂಕ್ತ. ಇಲ್ಲದೆಹೋದರೆ ಈಗ ಮಾಡಿರುವ ಖರ್ಚು ಅನ್ಯಾಯವಾಗುತ್ತದೆಂದು ಸೂಚಿಸಲು ಇಷ್ಟಪಡುತ್ತೇನೆ.

11-00 A.M.

ಸ್ವಾಮಿ, ಅದುರು ಸಾಗಾಣಿಕೆ ರಸ್ತೆಯ ಬಗ್ಗೆ ಪ್ರಸ್ತಾಪ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ. ನಾಲ್ಕು ಕೋಟಿ ರೂಪಾಯಿಗಳನ್ನು ಅದುರು ಸಾಗಾಣಿಕೆ ರಸ್ತೆಗಳಿಗಾಗಿ ಖರ್ಚು ಮಾಡುತ್ತಿದ್ದಾರೆ. ಈ ಸಂಬಂಧವಾಗಿ ಅಧಿಕಾರಿಗಳ ಬಗ್ಗೆ ಯಾರ ಮೇಲೂ ಆರೋಪಣೆ ಮಾಡುವುದಿಲ್ಲ. ಆದರೆ ಇದನ್ನು ಎಚ್ಚರಿಕೆಯಿಂದ ಪರಿಶೀಲನೆ ಮಾಡಿ ಅಧಿಕಾರಿಗಳ ಬಗ್ಗೆ ಲೋಪದೋಷಗಳಿದ್ದರೆ ಅವನ್ನು ಪರಿಹರಿಸುವುದಕ್ಕೆ ಪ್ರಯತ್ನ ಮಾಡಬೇಕು. ನನಗೆ ತಿಳಿದಿರುವ ಹಾಗೆ ಸರಕಾರ ಇದನ್ನು ವಿಚಾರಣೆ ಮಾಡುವುದು ಸೂಕ್ತ. 1962-63 ರಲ್ಲಿ ಒಬ್ಬರು ಕಂಟ್ರ್ಯಾಕ್ಟ್ ಕೆಲಸವನ್ನು ಪ್ರಾರಂಭ ಮಾಡಿದವರು ಆರು ಲಕ್ಷ ರೂಪಾಯಿ ಸಂಪಾದನೆ ಮಾಡಿದ್ದಾರೆ. ಇದನ್ನು ನಂಬುವುದು ಕಷ್ಟ. ನಾನು ಕೂಡ ಇಂಜಿನಿಯರಿಂಗ್ ಡಿಪ್ಲೊಮಾ ಪಾಸುಮಾಡಿ ನಾಲ್ಕು ವರ್ಷ ಕೆಲಸ ಮಾಡಿದ್ದೇನೆ; ಅನುಭವವಿದೆ. ಒಂದು ವರ್ಷದಲ್ಲಿ ಆರು ಲಕ್ಷ ರೂಪಾಯಿ ಸಂಪಾದನೆ ಮಾಡಿ ಕಾರಿನಲ್ಲಿ ತಿರುಗುತ್ತಿದ್ದಾನೆಂದರೆ ನಿಜವಾಗಿಯೂ ಇದು ಆಶ್ಚರ್ಯದ ಸಂಗತಿ. ಈ ರಸ್ತೆ ಕೆಲಸಕ್ಕಾಗಿ ಖರ್ಚು ಮಾಡಿರುವ ನಾಲ್ಕು ಕೋಟಿ ರೂಪಾಯಿನಲ್ಲಿ 50-60 ಲಕ್ಷ ರೂಪಾಯಿಗಳಷ್ಟಾದರೂ ದುರುಪಯೋಗವಾಗಿವೆ. ಸಂಬಂಧಪಟ್ಟ ಹಿರಿಯ ಅಧಿಕಾರಿಗಳನ್ನು ಕರೆಸಿದರೆ ಅವರೊಡನೆ ಚರ್ಚೆ ಮಾಡುವುದಕ್ಕೆ ನಾನು ಸಿದ್ಧನಾಗಿದ್ದೇನೆ. ರೆಗ್ಯುಲರ್ ಡಿವಿಜನ್ನಿನಲ್ಲಿ ಒಂದು ಯೂನಿಟ್ಟಿಗೆ ಹತ್ತು ರೂಪಾಯಿ ಲೀಡ್ ಕೊಡುತ್ತಿದ್ದರೆ ಇಲ್ಲಿ 30-35 ರೂಪಾಯಿ ಲೀಡ್ ಕೊಡುತ್ತಿದ್ದಾರೆ. ದೇಶವನ್ನು ಕಟ್ಟುವುದು ಬರಿಯ ಮಂತ್ರಿಗಳು ಮತ್ತು ಅಸೆಂಬ್ಲಿ ಸದಸ್ಯರ ಕೈಯಲ್ಲಿ ಸಾಧ್ಯವಿಲ್ಲ. ಕಾಂಗ್ರೆಸ್ ಸರಕಾರ ಹೋಗಿ ಕಮ್ಯುನಿಸ್ಟ್ ಅಥವಾ ಪಿ. ಎಸ್. ಪಿ. ಸರಕಾರ ಬಂದರೆ ನಾವು ಮಾಡುತ್ತೇವೆ ಎಂದು ಹೇಳುತ್ತಾರೆ, ಅದೂ ಸಾಧ್ಯವಿಲ್ಲ. ಪ್ರತಿಯೊಬ್ಬ ಮಂತ್ರಿ ಅಧಿಕಾರಿ ಮತ್ತು ಶಾಸನಸಭಾ ಸದಸ್ಯರೂ ದೇಶಪ್ರೇಮದಿಂದ ಮನಃಪೂರ್ವಕವಾಗಿ ಕೆಲಸ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ. ಹೀಗೆ ಮೂಲಭೂತವಾಗಿ ಯೋಚನೆ ಮಾಡಬೇಕಾಗುತ್ತದೆ ಅಧಿಕಾರಿಗಳಿಗೂ ಮನಸ್ಸು ಬರಬೇಕು. ಕೆಲವು ಕಡೆ ಅಧಿಕಾರಿಗಳು ಖರ್ಚುಮಾಡುವ ಹಣದಲ್ಲಿ ಶೇಕಡ 75 ರಷ್ಟು ಹಣಕ್ಕೆ ಪ್ರತಿಫಲ ದೊರೆಕಿದರೂ ಸಾಕು; ಜನತೆಗೆ ಎಷ್ಟೋ ಸೌಲಭ್ಯ ದೊರಕುತ್ತದೆ. ಪಂಚವಾರ್ಷಿಕ ಯೋಜನೆಗಳಿಂದ ಜನರಿಗೆ ಏನು ಪ್ರಯೋಜನ ದೊರೆಯಬೇಕಾಗಿದೆಯೋ ಅದು ದೊರಕಬೇಕಾದರೆ ಅಧಿಕಾರಿಗಳ ಹಾಗೂ ಸಾರ್ವಜನಿಕರ ಮನಸ್ಸು ಶುದ್ಧವಾಗಬೇಕು, ಅವರು ಸತ್ಯದಿಂದ ನಡೆಯಬೇಕು. ನಾಲ್ಕು ಕೋಟಿ ರೂಪಾಯಿನ ಕೆಲಸದ 50-60 ಲಕ್ಷ ರೂಪಾಯಿ ದುರ್ವಿನಿಯೋಗವಾಗುತ್ತಿದೆಯೆಂದರೆ ಇದು ಬಹಳ ಕೆಟ್ಟದ್ದು. ಈ ಬಗ್ಗೆ ಬೇಕಾದರೆ ನಾನು ಅಧಿಕಾರಿಗಳೊಡನೆಯೂ ಸರಕಾರದೊಡನೆಯೂ ಚರ್ಚೆ ಮಾಡುವುದಕ್ಕೆ ಸಿದ್ಧನಾಗಿದ್ದೇನೆ. ಅಶೋಕ ಮೆಹತಾರವರ ಭಾಷಣವನ್ನು ಕೇಳಿದ್ದೇನೆ. ಇಂಜಿನಿಯರುಗಳು ನಾನಾ ಕೆಲಸಗಳಿಗೆ ಖರ್ಚು ಮಾಡುವ ಹಣದ ಬಗ್ಗೆ ಆರ್ಥಿಕವಾಗಿ ಏನು ಫಲ ದೊರಕುತ್ತಿದೆ ಎಂಬ ವಿಷಯದಲ್ಲಿ ಇಂಜಿನಿಯರುಗಳು ಗಮನ ಹರಿಸಬೇಕೆಂದು ಪ್ಲಾನಿಂಗ್ ಕಮಿಷನ್ನಿನ ಉಪಾಧ್ಯಕ್ಷರಾಗಿ ಅವರು ಹೇಳಿರುವುದನ್ನು ಅಧಿಕಾರಿಗಳಿಗೆ ತಿಳಿಸಲಿಚ್ಛಿಸುತ್ತೇನೆ. ನಾವು ಖರ್ಚು ಮಾಡುವ ಪ್ರತಿಯೊಂದು ಕಾಸಿಗೂ ಫಲ ದೊರಕಬೇಕು. ರಸ್ತೆಗಳನ್ನು ನೋಡಿದರೆ ನಮಗೆ ಹೊಟ್ಟೆ ಉರಿಯುತ್ತದೆ. ಅಲ್ಲಿ ಟಾರಿನ ಡಬ್ಬಗಳು ಬಿದ್ದು ಹಾಳಾಗುತ್ತಿವೆ. ಏನೋ ಬಡ ಬೋರೇಗೌಡನ ಹಣ ಅದು ಹೇಗಾದರೂ ಆಗಲಿ ಎಂಬ ಹೊಲಸು ಭಾವನೆ ಬರಬಾರದು. ಈ ಅಭಿವೃದ್ಧಿ ಕಾರ್ಯಗಳ ಫಲ ಜನರಿಗೆ ದೊರಕಬೇಕಾದರೆ ಎಲ್ಲರೂ ಸರಿಯಾಗಿ ಗಮನ ಕೊಡಬೇಕೆಂದು ತಿಳಿಸಬೇಕು. ಕೆಲವು ಅಧಿಕಾರಿಗಳಲ್ಲಿರುವ ಅತೃಪ್ತಿಯ ಬಗ್ಗೆ ಗಮನ ಕೊಡಬೇಕು. ಲೋಕೋಪಯೋಗಿ ಇಲಾಖೆ ಕೀರ್ತಿ ಗಳಿಸಬೇಕೆಂದರೆ ಹಿಂದಿನ ಮಂತ್ರಿ ಮಂಡಲದ ನೀತಿನಿಯಮಗಳನ್ನು ಪುನರ್ವಿಮರ್ಶಿಸಬೇಕು. ಅವರು ಮಾಡಿರುವುದು ಸರಿಯಲ್ಲ. ಸೆಲೆಕ್ಷನ್ ಪೋಸ್ಟ್ಸ್ ಮತ್ತು ಡೈರೆಕ್ಟ್ ರಿಕ್ರೂಟ್ ಮೆಂಟಿನಿಂದ ಅಧಿಕಾರಿಗಳ ಮನಸ್ಸು ನೊಂದಿದೆ. ಕೆಲವು ಮುಖ್ಯ ಅಧಿಕಾರಿಗಳ ಅಧಿಕಾರವನ್ನು ವಿಸ್ತರಿಸುವುದಕ್ಕೆ ಅಥವಾ ಅವರನ್ನು ಪುನರ್ನೇಮಕ ಮಾಡುವುದಕ್ಕೆ ಒಪ್ಪುವುದಿಲ್ಲ ಎಂಬುದನ್ನು ನಾನೂ ಒಪ್ಪುತ್ತೇನೆ. ಆದರೆ ಕೆಲವು ಸಂದರ್ಭಗಳಲ್ಲಿ ಲಾ ಗ್ರ್ಯಾಜುಯೇಟುಗಳಿಗೇಕೆ ಕೊಡುತ್ತಿದ್ದಾರೆ? ಯಾವ ಇಲಾಖೆಯಾದರೂ ಅಲ್ಲಿ ಪ್ರಾಮಾಣಿಕರಾದ ಅಧಿಕಾರಿಗಳಿದ್ದು ಅವರ ಸೇವೆ ಅಗತ್ಯವೆಂದು ಕಂಡುಬಂದರೆ ಅವರಿಗೆ ಅಧಿಕಾರ ವಿಸ್ತರಣೆ ಕೊಟ್ಟರೂ ಚಿಂತೆಯಿಲ್ಲ. ಹಾಗಿಲ್ಲದೆ ಯಾರಿಗೂ ಕೊಡಬಾರದೆಂಬ ಒಂದು ನಿಯಮವನ್ನು ಪಾಲನೆ ಮಾಡುತ್ತೇವೆಂದರೆ ಯಾರಿಗೂ

(ಶ್ರೀ ಎಚ್. ಡಿ. ದೇವೇಗೌಡ)

ಕೊಡಬಾರದು. ನಮ್ಮಲ್ಲಿ ಅಧಿಕಾರಿಗಳು ಕಡಿಮೆ ಸಂಖ್ಯೆಯಲ್ಲಿದ್ದಾರೆಂದರೆ ಅದನ್ನು ನಾನು ಒಪ್ಪುವುದಿಲ್ಲ. ಎಕ್ಸ್‌ಟೆನ್‌ಷನ್ ಮತ್ತು ರೀಎಂಪ್ಲಾಯ್‌ಮೆಂಟ್ ಒಬ್ಬರಿಗೆ ಕೊಡುವುದು ಇನ್ನೊಬ್ಬರಿಗೆ ಕೊಡುವುದಿಲ್ಲ ಎಂದರೆ ಅಧಿಕಾರಿಗಳಲ್ಲಿ ಅತೃಪ್ತಿ ಬರುತ್ತದೆ. ಅದು ನ್ಯಾಯವೂ ಅಲ್ಲ. ಹೀಗೆಯೇ ಡೈರೆಕ್ಟ್ ರಿಕ್ರೂಟ್‌ಮೆಂಟ್ ಮತ್ತು ಸೆಲೆಕ್ಷನ್ ಪ್ರೋಸೆಸ್ಸ್ ವಿಚಾರದಲ್ಲಿ ಸರಕಾರದ ನೀತಿನಿಯಮಗಳನ್ನು ಬದಲಾಯಿಸಬೇಕು. ಹಾಗೆ ಮಾಡದಿದ್ದರೆ, ಸರ್ವಿಸ್‌ನಲ್ಲಿ ಇರುವವರಲ್ಲಿ, ನಾನು ಬಿ. ಇ., ಪಾಸ್ ಮಾಡಿ ಕೆಲಸಕ್ಕೆ ಸೇರಿ ಹದಿನೆಂಟು ವರ್ಷ ಸರ್ವಿಸ್ ಮಾಡಿದರೂ ನನಗೆ ಸಂಬಳ ಹೆಚ್ಚಿಲ್ಲ ಪ್ರಮೋಷನ್ ದೊರಕಲಿಲ್ಲ, ಬೇರೆ ರೀತಿಯಲ್ಲಿ ಸಂಪಾದನೆ ಮಾಡುತ್ತೇನೆ ಎನ್ನುವ ಮನೋಭಾವ ಬರುತ್ತದೆ. ಆದುದರಿಂದ ಹಿಂದಿನ ಮಂತ್ರಿಮಂಡಲದ ತೀರ್ಮಾನವನ್ನು ಪುನರ್ವಿಮರ್ಶೆ ಮಾಡುವುದು ಸೂಕ್ತ. ಇಲ್ಲದಿದ್ದರೆ ಅಧಿಕಾರಿಗಳನ್ನು ಎಷ್ಟೇ ಕಂಟ್ರೋಲ್ ಮಾಡಿದರೂ ಸರಿಪಡಿಸುವುದು ಕಷ್ಟವಾಗುತ್ತದೆ. ಹಳೆಯ ಮೈಸೂರು, ಹೊಸಮೈಸೂರು ಎಂದು ವಾದಮಾಡಲು ನಾನು ಇಷ್ಟಪಡುವುದಿಲ್ಲ. ಇಲಾಖೆಯಲ್ಲಿರುವ ಪ್ರತಿಯೊಬ್ಬ ಅಧಿಕಾರಿಗೂ ನ್ಯಾಯ ದೊರಕಬೇಕು.

ನೀರಾವರಿಯಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ, ಏಕೆಂದರೆ ಅದಕ್ಕೆ ಸಂಬಂಧಪಟ್ಟ ಬೇಡಿಕೆ ಸಭೆಯ ಮುಂದೆ ಬರುತ್ತದೆ, ಆಗ ಮಾತನಾಡುತ್ತೇನೆ. ಈ ದಿವಸ ನಾನು ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ, ಮಂತ್ರಿಗಳು ನನ್ನ ಸಲಹೆಗಳ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎಸ್. ಪಿ. ಘಾಯದೆ (ಅಂಕೋಲ).—ಸ್ವಾಮಿ, ನಮ್ಮ ಮುಂದಿರುವ ಲೋಕೋಪಯೋಗಿ ಶಾಖೆಯ ಬೇಡಿಕೆಗಳನ್ನು ಸ್ವಾಗತಿಸುತ್ತೇನೆ. ನಾನು ಮಲೆನಾಡಿನಿಂದ ಬರುವವನಾದುದರಿಂದ ಆ ಪ್ರದೇಶದ ಬಗ್ಗೆ ಕೆಲವು ವಿಷಯಗಳನ್ನು ಸರ್ಕಾರಕ್ಕೆ ಹೇಳಲು ಬಯಸುತ್ತೇನೆ. ಮಲೆನಾಡಿನಲ್ಲಿ ಹೊಳೆಹಳ್ಳಗಳು ಬಹಳ ಇವೆ. ರಸ್ತೆಗಳ ನಡುವೆ ಬರುವ ಹಳ್ಳಗಳಿಗೆ ಪೂಲ್ ಇಲ್ಲದಿರುವುದರಿಂದ ಬಹಳ ತೊಂದರೆಯಾಗಿದೆ. ರೈತರು ತಮ್ಮ ದನಕರುಗಳನ್ನು ತೆಗೆದುಕೊಂಡು ಅಡವಿಗೆ ಹೋಗುತ್ತಾರೆ ಮತ್ತೆ ಅವರು ವಾಪಸ್ಸು ಮನೆಗೆ ಬರಬೇಕೆಂದರೆ ಹೊಳೆ ಅಥವಾ ಹಳ್ಳ ಮಳೆಯ ನೀರಿನಿಂದ ತುಂಬಿದರೆ ಆ ದನಕರುಗಳು ಹೊಳೆಯಲ್ಲಿ ತೇಲಿಹೋಗುತ್ತವೆನ್ನುವುದನ್ನು ಹೇಳಲು ವಿಷಾದಿಸುತ್ತೇನೆ. ನನ್ನದೊಂದು ಬೇಡಿಕೆ ಏನೆಂದರೆ, ರಸ್ತೆಗಳ ಅಭಿವೃದ್ಧಿಯನ್ನು ಹಣವಿದ್ದಾಗ ಮಾಡಲಿ ಆದರೆ ರಸ್ತೆಗಳ ಮೇಲೆ ಅಗತ್ಯವಾದ ಪೂಲ್‌ಗಳನ್ನು ಆದಷ್ಟು ಬೇಗವಾಡಿ ಜನಜಾನುವಾರುಗಳಿಗೆ ಆಗುತ್ತಿರುವ ತೊಂದರೆಯನ್ನು ನಿವಾರಣೆ ಮಾಡಬೇಕೆಂದು ಒತ್ತಿ ಹೇಳುತ್ತೇನೆ.

ರಸ್ತೆಗಳ ಬಗ್ಗೆ ಬಹಳ ಅಭಿವೃದ್ಧಿಯಾಗತಕ್ಕದ್ದಿದೆ. ಮಾನ್ಯ ಸಚಿವರು ಹೇಳುತ್ತಿದ್ದಾರೆ. ರೂರಲ್ ಕಮ್ಯೂನಿಕೇಷನ್ ರಸ್ತೆಗಳನ್ನು ತಾಲ್ಲೂಕಿಗೆ 50 ಮೈಲಿಯಾದರೂ ಮಾಡುತ್ತೇವೆಂದು. ಈ ಮಾತನ್ನು ಎರಡು ಮೂರು ವರ್ಷಗಳಿಂದ ಕೇಳುತ್ತಿದ್ದೇವೆ. ಆದರೆ ಒಂದೊಂದು ತಾಲ್ಲೂಕಿನಲ್ಲಿ ಇನ್ನೂರು ಮುನ್ನೂರು ಮೈಲಿ ಆಗುವುದು ಇನ್ನೊಂದು ಭಾಗದಲ್ಲಿ ಒಂದು ಮೈಲಿಯೂ ಇಲ್ಲ. ಇದು ಏಕೆಂದು ಕೇಳಿದರೆ, ಆದಷ್ಟು ತೀವ್ರ ಮಾಡುತ್ತೇವೆಂದು ಸಮಾಧಾನ ಮಾಡುತ್ತಿದ್ದಾರೆ. ಅವರು ಕೊಟ್ಟ ವಚನವನ್ನು ಮುಂದಿನ ವರ್ಷವಾದರೂ ಪಾಲಿಸುತ್ತಾರೆಂದು ಭಾವಿಸುತ್ತೇನೆ. ಲೋಕೋಪಯೋಗಿ ಇಲಾಖೆಯ ಹಣ ಖರ್ಚಾಗುವುದು ಎಲ್ಲರಿಗೂ ಉಪಯೋಗವಾಗಬೇಕು. ಒಂದು ಭಾಗಕ್ಕೆ ಉಂಟು ಇನ್ನೊಂದು ಭಾಗಕ್ಕೆ ಇಲ್ಲ ಎನ್ನುವ ಶಂಕೆ ಸಲ್ಲದು. ಆದುದರಿಂದ ಯಾವಭಾಗದಲ್ಲಿ ಆಗಬೇಕೆಂಬ ಬಗ್ಗೆ ನೋಡಿ ಪ್ರಾಶಸ್ತ್ಯವನ್ನು ಆ ಖಾತೆ ಗೊತ್ತುಮಾಡಬೇಕು. ಇಲ್ಲದಿದ್ದರೆ ಹಣ ಖರ್ಚು ಮಾಡುವಾಗ ಅದು ಅಧಿಕಾರಿಗಳಿಗೆ ಸಂಬಂಧಪಟ್ಟ ವಿಷಯವಾಗುತ್ತದೆ. ಕೆಲವು ಅಧಿಕಾರಿಗಳ ಕಾಲದಲ್ಲಿ ಒಂದು ಭಾಗದಲ್ಲಿ ಹಣ ಹೇರಳವಾಗಿ ಖರ್ಚಾಗುತ್ತದೆ, ಇನ್ನು ಕೆಲವರ ಕಾಲದಲ್ಲಿ ಒಂದು ನಯಾ ಪೈಸಕೂಡ ಖರ್ಚಾಗುವುದಿಲ್ಲ. ಇದಕ್ಕೆ ಕಾರಣ ಗೊತ್ತಾಗುವುದಿಲ್ಲ. ಈ ಎರಡು ರೀತಿಯನ್ನೂ ಮಲೆನಾಡಿನಲ್ಲಿ ನೋಡಿದ್ದೇನೆ. ನನಗೆ ಅನುಭವವಿದೆ, ನಾನೂ ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಕೆಲಸ ಮಾಡಿದ್ದೇನೆ. ಅಧಿಕಾರಿಗಳ ಸ್ವೀಟ್‌ವಿಲ್‌ಗೆ ಬಿಡಬಾರದು. ಯಾವ ಭಾಗದಲ್ಲಿ ಕೆಲಸ ಆಗಿಲ್ಲ ಎನ್ನುವುದನ್ನು ನೋಡಿ ಸರಿಪಡಿಸುವುದು ಸರಕಾರದ ಕರ್ತವ್ಯವೆಂದು ಹೇಳಬಯಸುತ್ತೇನೆ.

ಇನ್ನೊಂದು ಹೇಳಬೇಕಾದ ವಿಷಯವೇನೆಂದರೆ, ಈ ಭಾಗದಲ್ಲಿ ಟ್ರಾವಲರ್ಸ್ ಬಂಗಲೋ ಬಹಳ ಕಡಿಮೆ ಇವೆ. ಈ ಭಾಗದಲ್ಲಿ ಇನ್‌ಸ್ಪೆಕ್ಷನ್ ಬಂಗಲೋ ಕೂಡ ಇಲ್ಲ. ಇದರಿಂದ ಈ ಪ್ರದೇಶಕ್ಕೆ ಬರತಕ್ಕಂಥ ಜನರಿಗೆ ಬಹಳ ಅನಾನುಕೂಲವಾಗುತ್ತದೆ. ನಮ್ಮ ತಾಲ್ಲೂಕಿನಲ್ಲಿ ಟ್ರಾವಲರ್ಸ್ ಬಂಗಲೋ ಇರುವುದು ಬಹಳ ಅವಶ್ಯಕವಾಗಿದೆ ಎಂದು ಸರ್ಕಾರಕ್ಕೆ ಸೂಚಿಸುತ್ತೇನೆ. ಮಡಿಕೇರಿ ಬಹಳ ಅನುಕೂಲವಾದ ಸ್ಥಳವಾಗಿದೆ, ಇದು ಸಣ್ಣ ಹಳ್ಳಿಯಾದರೂ, ಎಲ್ಲ ಸೌಕರ್ಯ ಇದೆ. ಸುತ್ತ ಮುತ್ತ

ಲಿನ 58 ಹಳ್ಳಿಗೆ ಇದು ಒಂದು ಕೇಂದ್ರಸ್ಥಾನವಾಗಿದೆ. ಆದುದರಿಂದ ಇಲ್ಲಿ ಒಂದು ಟ್ರಾವೆಲರ್ಸ್ ಬಂಗಲೋ ಏರ್ಪಾಡು ಮಾಡುವುದು ಯೋಗ್ಯವಾಗಿದೆ. ಈ ಕೆಲಸ ಮಾಡಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಇರಿಗೇಷನ್ ಬಗ್ಗೆ ಹೇಳಬೇಕಾಗಿದೆ. ಮಾನ್ಯ ಮಂತ್ರಿಗಳಿಗೂ ಸಂಬಂಧಪಟ್ಟ ಅಧಿಕಾರಿಗಳಿಗೂ ನಾನು ವಿನಂತಿ ಮಾಡಿಕೊಂಡಿದ್ದೇನೆ.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ಪಾಯಿಂಟ್ ಆಫ್ ಆರ್ಡರ್, ಸ್ವಾಮಿ, ಈಗ ಸಭೆಯು ಮುಂದೆ ಚರ್ಚೆಗೆ ಇರಿಗೇಷನ್ ಡಿಮ್ಯಾಂಡ್ ಇರುವುದಿಲ್ಲ. ಅದರ ಬಗ್ಗೆ ಹೇಳುವುದು ಸರಿಯೇ?

ಶ್ರೀ ಪಾಯದೆ ಶಂಕರ ಪುಂಡಲೀಕಶೆಟ್ಟಿ.—ಅವರು ನನಗೆ ಸಕಾಲದಲ್ಲಿ ಎಚ್ಚರಿಕೆ ಕೊಟ್ಟಿದ್ದಾರೆ ಬಹಳ ಸಂತೋಷ. ನಮ್ಮ ಪ್ರದೇಶದ ಕಡೆ ಸರಕಾರ ಪೂರ್ತಿಗಮನ ಕೊಟ್ಟಿಲ್ಲ. ಸಂಚಾರಕ್ಕೆ ರಸ್ತೆ ಇದೆ. ಅದನ್ನು ಬಿಟ್ಟರೆ ರೈಲ್ವೆ ಇಲ್ಲವೇ ಇಲ್ಲ. ಕಾರವಾರ ಜಿಲ್ಲೆಯಲ್ಲಿ ರೈಲ್ವೆಮಾರ್ಗ ರಚನೆ ಕಾರ್ಯಗತವಾಗಲಿಲ್ಲ. ಕಾರವಾರ ಜಿಲ್ಲೆಯಲ್ಲಿ ಬೇಕಾದಷ್ಟು ಅರಣ್ಯ ಸಂಪತ್ತು ಇದೆ, ಮಿನರಲ್ಸ್ ದೊರೆಯುತ್ತದೆ ಕಾರವಾರ ಪೋರ್ಟ್ ಇದೆ, ಆದರೂ ಕೂಡ ಹುಬ್ಬಳ್ಳಿ–ಕಾರವಾರ ರೈಲ್ವೆಮಾರ್ಗ ರಚನೆಯಾಗಿಲ್ಲ. ಇದನ್ನು ಅಗತ್ಯವಾಗಿ ಮಾಡಬೇಕಾಗಿದೆ. ಅಳಣಾವರದಿಂದ ತಾಳಗುಪ್ಪಾವರೆಗೆ ಒಂದು ರೈಲ್ವೆ ಮಾರ್ಗ ಮಾಡುವುದು ಅವಶ್ಯಕವಾಗಿದೆ. ಆದುದರಿಂದ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ಈ ಭಾಗದಲ್ಲಿ ಈ ಕೆಲಸ ಮಾಡಿಸುವಂತೆ ಆಗಬೇಕು. ನಮ್ಮ ಜಿಲ್ಲೆಯಲ್ಲಿ ದಾಂಡೇಲಿವರೆಗೆ ಒಂದು ರೈಲ್ವೆಮಾರ್ಗ ಇದೆ. ಆದರೆ ಅದು ಕೆಟ್ಟು ಹೋಗಿದೆ. ಅದನ್ನು ಸುಧಾರಿಸ ಬೇಕಾಗಿದೆ. ಅಳಣಾವರದಿಂದ ವಾಯಾ ಹಳಿಯಾಳ ದಾಂಡೇಲಿವರೆಗೆ ರೈಲ್ವೆ ಮಾರ್ಗ ರಚನೆಯಾಗುವಂತೆ ಪ್ರಯತ್ನ ಮಾಡಬೇಕೆಂದು ಸರಕಾರಕ್ಕೆ ಕೇಳಿಕೊಳ್ಳುತ್ತೇನೆ. ಈಗ ಕಾಲಾವಕಾಶ ಮುಗಿದಿದೆ, ಹೆಚ್ಚುವೇಳೆ ತೆಗೆದುಕೊಳ್ಳುವುದಿಲ್ಲ. ಮಾತನಾಡಲು ಸಮಯ ಕೊಟ್ಟಿದ್ದಕ್ಕೆ ಅಧ್ಯಕ್ಷರನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

†ಶ್ರೀ ಹೆಚ್. ಆರ್. ಕೇಶವಮೂರ್ತಿ (ಗಂಡಸಿ).—ಮಾನ್ಯ ಅಧ್ಯಕ್ಷ ಮಹಾಶಯರೇ, ಈ ಪಿ. ಡಬ್ಲ್ಯು. ಡಿ. ಡಿಮ್ಯಾಂಡ್ ನೋಡಿದರೆ ವರ್ಷ ವರ್ಷೇ ಇದ್ದಹಾಗೆ ಇದೆ, ಇದು ಮಾಮೂಲಾಗಿ ಬಿಟ್ಟು ಅಡ್ಡದಾರಿ ಹಿಡಿದಿದೆ. ಸಾಮಾನ್ಯವಾಗಿ ಕೊಡಬೇಕಾದ ಡೀಟೇಲ್ಸ್ ಕೊಟ್ಟಿಲ್ಲ, ಎಷ್ಟು ಹಣ ಖರ್ಚಾಗಿದೆ ಎಂಬ ವಿವರ ಇಲ್ಲ ಈ ವರ್ಷ ಕೆಲವು ಐಟಮ್ಸ್ ಬಿಟ್ಟು ಬಿಟ್ಟಿದ್ದಾರೆ. ಒಂದು ಕಾಂಪ್ರೆಹೆನ್ಸೀವ್ ಪಿಕ್ಚರ್ ಈ ಬಡ್ಜೆಟ್ಟಿನಲ್ಲಿ ಇದುತ್ತಾ ಇಲ್ಲ. ಹಿಂದಿನ ಕೆಲಸಗಳು ಪೂರ್ತಿಯಾಗಿಲ್ಲ. ಇದಲ್ಲದೆ ಇನ್ನುಮುಂದೆ ತೆಗೆದುಕೊಳ್ಳುವ ಕೆಲಸಗಳ ಬಗ್ಗೆ ಒಂದು ಕಂಪ್ಲೀಟ್ ಪಿಕ್ಚರ್ ನಮ್ಮ ಮುಂದೆ ಇಡುವುದು ಅವಶ್ಯಕವಾಗಿದೆ. ಅಗತ್ಯವಿರುವ ಲಿಟರೇಚರ್ ಸಕಾಲದಲ್ಲಿ ಒದಗಿಸುವುದಿಲ್ಲ. ಈಗ ಅರ್ಧಗಂಟೆಯ ಹಿಂದೆ ನಮ್ಮ ಪಿಜನ್ ಹೋಲ್ಸನಲ್ಲಿ ರೋಡ್ ಡೆವಲಪ್‌ಮೆಂಟ್ ಇನ್ ಮೈಸೂರು ಸ್ಟೇಟ್ ಎಂಬ ಪುಸ್ತಕ ಇಟ್ಟಿದ್ದಾರೆ. ಇದನ್ನು ನಿನ್ನೆಯ ದಿನವೇ ನಮಗೆ ಕೊಟ್ಟಿದ್ದರೆ ಅದನ್ನು ಓದಿಕೊಂಡು ತಿಳಿದುಕೊಳ್ಳಬಹುದಾಗಿತ್ತು. ಅದನ್ನು ಚೆನ್ನಾಗಿ ಓದಿ ಅನೇಕ ವಿಷಯಗಳನ್ನು ಇಂದು ವಿಮರ್ಶೆ ಮಾಡಬಹುದಾಗಿತ್ತು. ನಾನು ಇಷ್ಟೇ ಹೇಳಲು ಬಯಸುತ್ತೇನೆ. ಒಟ್ಟಿನಲ್ಲಿ ಈ ವರ್ಷದ ಬಡ್ಜೆಟ್ಟು ಹೋಲಸಂ ಆಗಿಲ್ಲ. ಅನೇಕ ಕೆಲಸಗಳನ್ನು ಕೈಬಿಟ್ಟಿದ್ದೀರಿ. ಇದು ಬಹಳ ಅನ್ಯಾಯ. ಹಿಂದಕ್ಕೆ ಡಿಸ್ಟ್ರಿಕ್ ಲೆವೆಲ್ಲಿನಲ್ಲಿ ಒಂದು ಕಾನ್‌ಫರೆಸ್ ಮಾಡಿ ರಿಪ್ರೆಜೆಂಟೇಟಿವ್ಸ್ ಕರೆದು ಯಾವ ಯಾವ ಕ್ಷೇತ್ರದಲ್ಲಿ ಯಾವ ಯಾವ ಕೆಲಸಗಳು ಆಗಬೇಕು ಎಂಬುದನ್ನು ಕೇಳಿಕೊಂಡು ಅವರ ಸಲಹೆಪಡೆದು ಇಲಾಖಾ ಅಧಿಕಾರಿಗಳ ಸಲಹೆ ಪಡೆದು ಬಡ್ಜೆಟ್ ಎಸ್ಟಿಮೇಟ್ಸ್ ಫಿಗರ್ಸ್ ಒದಗಿಸುತ್ತಿದ್ದರಿ. ಆದರೆ ನಮ್ಮ ದುರ್ದೈವದಿಂದ ಇದನ್ನು 1962 ರಿಂದ ಮಾಮೂಲಾಗಿ ಬಿಡಲಾಗಿದೆ. ಆಫೀಸರುಗಳು ಸಹ ಯಾವುದನ್ನೂ ಕನ್ಸಿಡರ್ ಮಾಡದೆ ಮನಸ್ಸಿಗೆ ಬಂದ ಹಾಗೆ ಕೆಲಸ ಬಡ್ಜೆಟ್ಟಿನಲ್ಲಿ ಸೇರಿಸಿ ಕಳುಸುತ್ತಿದ್ದಾರೆ. We are not enjoying the benefits. We are not given full representation in the district level for expressing our views. ಇದನ್ನು ನಾನು ಬಹಳ ಸಂಕಟದಿಂದ ಸರ್ಕಾರದ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಪಿ. ಡಬ್ಲ್ಯು. ಡಿ. ಬಡ್ಜೆಟ್ಟಿನಲ್ಲಿ ಕೆಲಸ ಸೇರಿಸುವುದನ್ನು ನೋಡಿದರೆ ಎಲ್ಲ ಕಡೆ ಆಫೀಸರ್ಸ್ ಮತ್ತು ಕಂಟ್ರಾಕ್ಟರ್ಸ್‌ಗಳಿಗೆ ಬೇಕಾಗುವ ಹಾಗೆ ಮಾಡಿದ್ದಾರೆ. ಎಲ್ಲ ಪಕ್ಷಗಳ ರಾಜಕಾರಣಿಗಳ ಒಂದು ಹೊಂದಾಣಿಕೆ ಇದರಲ್ಲಿ ಇದೆ. ಕಂಟ್ರಾಕ್ಟದಾರರಿಗೆ ಯಾವ ಕೆಲಸ ಬೇಕೋ ಅದರ ಹೆಸರು ಬರುತ್ತದೆ ಆಫಿಸರ್ಸ್ ಟೂರ್ ಮೇಲೆ ಹೋದಾಗ್ಗೆ ಏನಾದರೂ ಪ್ರಾಮಿಸ್ ಮಾಡಿದ್ದರೆ ಆ ಕೆಲಸ ಸೇರುತ್ತದೆ. ಪ್ರಭಾವಶಾಲೀ ವ್ಯಕ್ತಿಗಳಿದ್ದು ಅವರಿಗೆ ಯಾವದಾದರೂ ಕೆಲಸ ಬೇಕಾಗಿದ್ದರೆ ಅದು ಬಡ್ಜೆಟ್ಟಿನಲ್ಲಿ ಸೇರುತ್ತದೆ. ಇದು ಈ ರೀತಿ ನಡೆದಿದೆ. ಸರಕಾರ ಶ್ರಮವಹಿಸಿ ನಿಗಾ ತೆಗೆದುಕೊಂಡು ಯೂನಿಫಾರ್ಮ್ ಡೆವಲಪ್‌ಮೆಂಟ್ ಮಾಡುವುದಕ್ಕಾಗಿ ದೇಶದ ಸರ್ವತೋಮುಖ ಅಭಿವೃದ್ಧಿಗಾಗಿ ಯಾವ ಯಾವ ಕೆಲಸ ತೆಗೆದುಕೊಳ್ಳಬೇಕು, ಯಾವುದಕ್ಕೆ ಪ್ರಿಫರೆನ್ಸ್ ಕೊಡಬೇಕು ಇದನ್ನು ಯೋಚನೆ

(ಶ್ರೀ ಎಚ್. ಆರ್. ಕೇಶವಮೂರ್ತಿ)

ಮಾಡಿ ಬಜೆಟ್ಟಿನಲ್ಲಿ ಸೇರಿಸಿದ್ದರೆ ಅದು ದೇಶದ ಹಿತ ದೃಷ್ಟಿಯಿಂದ ಒಳ್ಳೆಯದಾಗುತ್ತಿತ್ತು. ಆದರೆ ನಮ್ಮ ದೇಶದಲ್ಲಿ ಯಾವುದು ಮೊದಲಿನಿಂದಲೂ ಮಾಮೂಲಾಗಿ ಬರುತ್ತಾ ಇದೆಯೋ ಅದೇ ರೀತಿಯಲ್ಲಿಯೇ ಬರುತ್ತಾ ಇದೆ. ನಿಜವಾಗಿಯೂ ಇದು ಸರಿಯಾದ ದಾರಿಯಲ್ಲ. ಈ ಬಗ್ಗೆ ಹೆಚ್ಚು ನಿಗಾ ಕೊಟ್ಟು ಯಾವ ಕೆಲಸ ಮೊದಲು ತೆಗೆದುಕೊಳ್ಳಬೇಕು, ಯಾವುದಕ್ಕೆ ಅಗ್ರ ಮಾನ್ಯತೆ ಕೊಡಬೇಕು, ಯಾವುದಕ್ಕೆ ಫಂಡ್ಸ್ ಒದಗಿಸಬೇಕು ಎಂಬುದನ್ನು ಕೂಲಂಕಷವಾಗಿ ವಿಮರ್ಶೆಮಾಡಿ ಅದಕ್ಕೆ ಹೆಚ್ಚು ಗಮನಕೊಡುವುದು ಒಳ್ಳೆಯದು ಎಂದು ನಾನು ಸರಕಾರಕ್ಕೆ ಸಲಹೆ ಮಾಡುತ್ತೇನೆ.

ಅದಲ್ಲದೆ ಇನ್ನು ಕೆಲವು ಕೆಲಸಗಳನ್ನು ತೆಗೆದುಕೊಳ್ಳಬೇಕಾದರೆ ಮುಂದಿನ ಆಲೋಚನೆ ಇಲ್ಲದೆ ಪಿ. ಡಬ್ಲ್ಯು. ಡಿ. ಯವರು ಕಾನೂನಿಗೆ ವಿರೋಧವಾಗಿ ಹೋಗಿ ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿ ತಿಳುವಳಿಕೆ ಇಲ್ಲದ ರೈತರಿಗೆ ತಂಟಾ ತೊಂದರೆಗಳನ್ನು ಕೊಡುತ್ತಿದ್ದಾರೆ. ಉದಾಹರಣೆಯಾಗಿ ಒಂದು ವಿಷಯವನ್ನು ಮಾತ್ರ ಇಲ್ಲಿ ಹೇಳುತ್ತೇನೆ. ಬಾಣಸಂದ್ರ-ಹಾಸನ ರೋಡ್ 50 ಮೈಲಿ ದೂರ ಇದೆ. ಅಂಥಹಕಡೆ ಈ ಇಲಾಖೆಯವರು ಅನೇಕ ರೈತರ ಜಮೀನನ್ನು ಆಕಡೆ ಈ ಕಡೆ ಟ್ರೆಂಚ್ ಹೊಡೆದು ಸಾವಿರಾರು ಎಕರೆ ಜಮೀನನ್ನು ಅಕ್ವಿಸಿಷನ್ ರಿಕಾರ್ಡ್ ಇಲ್ಲದೆಯೇ ವಶಪಡಿಸಿಕೊಂಡು ಬಡ ರೈತರ ಕಣ್ಣಿಗೆ ಮಣ್ಣು ಎರಚುತ್ತಿದ್ದಾರೆ. ಆ ಇಲಾಖೆಯ ಅಧಿಕಾರಿಗಳು ಸ್ವಲ್ಪವೂ ದೂರಾಲೋಚನೆ ಇಲ್ಲದೆ ಈ ರೀತಿ ಅನ್ಯಾಯಮಾಡುವುದು ಒಳ್ಳೆಯದೇ ಎಂದು ನಾನು ಮಂತ್ರಿಗಳನ್ನು ಕೇಳುತ್ತೇನೆ. ಇಂಥಹ ಅಕ್ರಮಗಳು ದೇಶದಲ್ಲಿ ಮುಂದೆ ಆಗದಂತೆ ನೋಡಿಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಒಂದು ರಸ್ತೆಯ ದೂರ 100 ಮೈಲಿ ಇದೆ. ಅದು ಒಂದು ಸ್ಟ್ರೈಟ್ ಲೈನ್ ಇದ್ದ ಹಾಗೆ ಇದೆ. ಒಂದೇ ದೂರವಾಗಿ ರಸ್ತೆ ಮಾಡಿದ್ದಾರೆ. ಮಧ್ಯೆ ಮಧ್ಯೆ ಜಮೀನು ಒಡೆದು ರಸ್ತೆ ಮಾಡಿದ್ದಾರೆ. ಒಂದು ಕೊನೆಯಲ್ಲಿ ಕವರ್‌ಮಾಡುವ ರಸ್ತೆ ಮಾಡಿದ್ದಾರೆ. ಹೈವೇಸ್ ಒರ್ ಕ್ಯಾರೀಯಿಂಗ್ ರೋಡ್ಸನ್ನು ಕೊಟ್ಟು ಕೂಡಲೆ ಹಣವನ್ನು ವ್ಯಯಮಾಡಿ ಮಾಡುತ್ತೇವೆಂದು ಹೇಳಿದ್ದರು. ಆ ರಸ್ತೆಯನ್ನು ಸ್ಟ್ರೈಟ್ ಮಾಡಿದ್ದೀರಾ ಎಂದು ನಾನು ಕೇಳುತ್ತೇನೆ. ಒಂದೊಂದು ಫರ್ಲಾಂಗಿಗೆ ಒಂದು ಕರ್ವ್ ಇದೆ. ಕೋಟ್ಯಾನುಕೋಟಿ ರೂಪಾಯಿಗಳನ್ನು ಈ ಬಾಬಿಗೆ ಖರ್ಚುಮಾಡಿದ್ದಾರೆ. ಸೇತುವೆಗಳನ್ನು ಕಟ್ಟಿದ್ದಾರೆ. ಆದರೂ ಅಷ್ಟಾಗಿ ಪ್ರಯೋಜನವಾಗುತ್ತಾ ಇಲ್ಲ. ದೇಶದ ಹಿತದೃಷ್ಟಿಯಿಂದ ನೇರವಾದರೂ ಬಹಳ ವೇಗವಾಗಿ ಈ ಕೆಲಸಗಳು ಆಗುತ್ತಿಲ್ಲ. ವಾಹನಗಳೇನೋ ಜಾಸ್ತಿಯಾಗುತ್ತಿವೆ. ಹೈವೆ ರಸ್ತೆಗಳಕಡೆ ಸ್ಟ್ರೈಟ್ ಹೈವೆ ಕೊಡದಿದ್ದರೆ ಹೆಗ್ಗೆ ಸಾಧ್ಯ ರಸ್ತೆಗಳನ್ನು ಮಾಡುತ್ತೇವೆಂದು ಒಂದಕ್ಕೆ ನಾಲ್ಕರಷ್ಟು ಖರ್ಚುಮಾಡುತ್ತಾರೆ. ಇಂಥಹ ಹೈವೇಗಳನ್ನು ಮಾಡುವಾಗ ಹಣ ಪೋಲಾಗದಂತೆ ನೋಡಿಕೊಳ್ಳಬೇಕು. ಇನ್ನು ಮುಂದೆ ಹೈವೇಸ್ ಮಾಡಬೇಕಾದರೆ ಎಷ್ಟು ಖರ್ಚಾದರೂ ಜಮೀನುಗಳನ್ನು ಅಕ್ವೈರು ಮಾಡಿಕೊಂಡು ಒಳ್ಳೆಯ ರೀತಿಯಲ್ಲಿ ಸ್ಟ್ರೈಟ್‌ವೇ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ರಸ್ತೆಗಳ ವಿಷಯ ಹೊಸದಾಗಿ ಈಗ ರಸ್ತೆಗಳನ್ನು ಮಾಡುವುದಕ್ಕಿಂತ ಇರತಕ್ಕ ರಸ್ತೆಗಳನ್ನು ಸರಿಯಾದ ರೀತಿಯಲ್ಲಿ maintain ಮಾಡಿಕೊಂಡು ಹೋಗುವುದು ಬಹಳ ಮುಖ್ಯ. ಸರಕಾರದವರ ವರದಿಪ್ರಕಾರ ಇಲ್ಲಿ ಒಟ್ಟು 39 ಸಾವಿರ ಮೈಲಿಗಳ ರಸ್ತೆ ಇದೆಯೆಂದು ನಾನು ಹೇಳುತ್ತೇನೆ. ಇವತ್ತಿನ ದಿವಸ ಸಾಮಾನ್ಯವಾಗಿ ಒಂದು ರಸ್ತೆಯನ್ನು ಈ ರಾಜ್ಯದೊಳಗೆ ಎಲ್ಲಿಯಾದರೂ ನಿರ್ಮಾಣ ಮಾಡಬೇಕೆಂದರೆ ಒಂದು ಮೈಲಿ ರಸ್ತೆಗೆ ಕನಿಷ್ಠಪಕ್ಷ 2 ಸಾವಿರ ರೂಪಾಯಿಗಳಾದರೂ ಬೇಕು. ಅಂದಮೇಲೆ ಸುಮಾರು 30-36 ಮೈಲಿಗಳ ರಸ್ತೆನಿರ್ಮಾಣಕ್ಕೆ 6 ಕೋಟಿ ರೂಪಾಯಿಗಳಾದರೂ ವರ್ಷೇ ವರ್ಷೇ ಬೇಕಾಗುತ್ತದೆ. ನಿಜವಾಗಿ ಈ ಇಲಾಖೆಯವರು ಈ ರಸ್ತೆ ಬಾಬಿಗೆ ಇಷ್ಟು ಖರ್ಚು ಮಾಡುತ್ತಾರೆಯೋ? ಇಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಶೇ 43ರಷ್ಟು ಆದರೆ ಕೇವಲ 13 ಸಾವಿರ ಮೈಲಿಗಳ ರಸ್ತೆಯನ್ನು ಸಹ ಮುಗಿಸುವುದರಲ್ಲಿ ಇವರು neglect ಮಾಡಿದ್ದಾರೆ. ಅದರಲ್ಲೂ ಕೇವಲ ನೂರಾರು ಮೈಲಿಗಳಷ್ಟು ರಸ್ತೆಯನ್ನು ಮಾತ್ರ ನಿರ್ಮಿಸಿದ್ದಾರೆ. They are not fit for traffic ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲ. ಈ ತರಹ ರಸ್ತೆಗಳನ್ನು ಮಾಡಿ ಕೊನೆಯಲ್ಲಿ ರಸ್ತೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ಇಲ್ಲದಂತೆ ಆಗಲು ಇದಕ್ಕೊದಗಿಸಿದ ಹಣವನ್ನು ದುರ್ವ್ಯಯಮಾಡಿ ಕಳೆಯುವುದರಿಂದ ದೇಶದ ದುಡ್ಡು ಪೋಲುಮಾಡಿದಂತಾಗುವುದಲ್ಲವೆ?

ಇನ್ನು ಹೈವೇಸ್ ವಿಷಯದಲ್ಲಿ ಹೇಳಬೇಕಾದರೆ, ಹೈವೇ ನಂಬರ್ 4 ಮತ್ತು 13 ಈ ಎರಡನ್ನು ಮಾಡಿದ್ದಾರೆ. ಇದರಿಂದ ಕೇವಲ ಕೆಲವು ಜಿಲ್ಲೆಗಳಿಗೆ ಮಾತ್ರ ಕೈಗಾರಿಕೆಗಳಿಗೆ ಅನುಕೂಲವಾಗುತ್ತದೆ. ಮುಖ್ಯವಾಗಿ ಹೈವೇಯಿಂದ ಮಂಗಳೂರಿಗೆ ಹೆಚ್ಚಿನ ಅನುಕೂಲವಿದೆ. ಬೆಂಗಳೂರಿನಿಂದ ಮಂಗಳೂರಿಗೆ ನೇರವಾದ ಲಿಂಕ್ ಇರುವುದು ಅಗತ್ಯವಾದುದು. ಆದ್ದರಿಂದ ಬೆಂಗಳೂರಿನಿಂದ

ಮಂಗಳೂರಿಗೆ ಒಂದು ನೇರವಾದ ಹೈವೇ ಇರುವುದಕ್ಕೆ ಒಂದೇ ಒಂದು ಸ್ಟ್ರೈಟ್‌ವೇ ಇರಬೇಕು. ಆಗ ಬೆಂಗಳೂರು ತುಂಬಾ ಅಭಿವೃದ್ಧಿಗೆ ಬರುತ್ತದೆ. ನಮ್ಮ ದೇಶದ ಸಾಮಾನುಗಳನ್ನು ಮಂಗಳೂರು ಬಂದರಿಗೆ ಸುಲಭವಾಗಿ ಸಾಗಿಸುವುದಕ್ಕೆ ಅನುಕೂಲವಾಗುತ್ತದೆ ಬೆಂಗಳೂರಿಗೂ ಮತ್ತು ಮಂಗಳೂರಿಗೂ ನೇರವಾಗಿ ಹಾಸನದ ಮುಖಾಂತರ ಹೋಗುವುದಕ್ಕೆ ಒಂದು ಹೈವೇ ರಸ್ತೆಯನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಗ್ರಾಂಟುಗಳನ್ನು ಹಂಚುವ ವಿಷಯ ಬಜೆಟ್ಟಿಗೆ ವರ್ಕ್ಸ್‌ನ್ನು ಸೇರಿಸಬೇಕಾದರೆ ಹಿಂದೆ ಒಂದು ಅನಾಲಜಿ ಕೊಟ್ಟೆ. ಸರ್ಕಾರ ಇದರಲ್ಲಿ ಒಂದು ದೊಡ್ಡ ವೃಕ್ಷದಲ್ಲಿ ಬುಡ ಇದ್ದ ಹಾಗೆ, stem ಇದ್ದ ಹಾಗೆ, ಬೇರುಗಳು ಭೂಮಿಯ ಸಾರ ಹೀರುವ ಹಾಗೆ, ರೈತರ ದುಡ್ಡನ್ನು ತೆರಿಗೆ ರೂಪವಾಗಿ ಸರ್ಕಾರದವರು ತೆಗೆದುಕೊಳ್ಳುತ್ತಿದ್ದಾರೆ. ದೇಶಾದ್ಯಂತ ಗ್ರಾಂಟನ್ನು ಕ್ರಮವಾಗಿ ಹಂಚಬೇಕಾದದು ಸರ್ಕಾರದವರ ಕರ್ತವ್ಯ. ಹಳೆಯ ಪ್ರದೇಶಗಳು ಎಲ್ಲಿವೆಯೋ ಅಲ್ಲೆಲ್ಲಾ ತಮಗೆ ಮನಸ್ಸು ಬರುತ್ತದೆ. ಎಲ್ಲಿ ಜನಗಳು ಹಿಂಸೆಮಾಡುತ್ತಾರೋ ಅಂತಹ ಸ್ಥಳಗಳಲ್ಲಿ ಮಾತ್ರ ಗ್ರಾಂಟನ್ನು ಕೊಡುತ್ತಿದ್ದೀರಿ. ನಾನು ಹೇಳುತ್ತೇನೆ. ತಲೆ ನಿಮ್ಮದು; ಬುದ್ಧಿ ಹಾಗಲ್ಲ. you are subject to external influence ಕೈ ನಿಮ್ಮದು ಬರವಣಿಗೆ ನಿಮ್ಮದಲ್ಲ.

ಶ್ರೀ ಜಿ. ಹೆಚ್. ಮಹಮದೀನ್ (ವಿದ್ಯುಚ್ಛಕ್ತಿ ಶಾಖೆಯ ಉಪಮಂತ್ರಿಗಳು).—ನಾಲಗೆ ನಿಮ್ಮದು; ಮಾತು ನಿಮ್ಮದಲ್ಲವೆಂದು ಕಾಣುತ್ತದೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ನಿಮ್ಮ ಆರ್ಡರ್ ಸರಿಯೇ? ಇಂಪೋರ್ಟೆಡ್ ಐಡಿಯಾಸನ್ನು ದೂರವಿಡಿ. ಅವರ ತಲೆಯಲ್ಲಿರತಕ್ಕ ಐಡಿಯಾಗಳನ್ನು ಮತ್ತು ಲೆಫ್ಟಿನೆಂಟ್ ಸ್ಟೇಟ್ ಆಫೀಸರುಗಳ ಐಡಿಯಾಗಳನ್ನು ಕ್ರೋಢೀಕರಿಸಿ ದೇಶವನ್ನು ಉನ್ನತ ಸ್ಥಾನಕ್ಕೆ ತರುವುದಕ್ಕೆ ಏನೇನು ಬೇಕೋ ಅವನ್ನು ಮಾಡಿ.

ಶ್ರೀ ಬಿ. ಡಿ. ಜತ್ತಿ.—ನಮ್ಮ ಬುದ್ಧಿ ಎಷ್ಟೇ ಉಪಯೋಗಿಸಿದರೂ ಅಸಿಸ್ಟೆಂಟ್ ಆಫೀಸರುಗಳ ಬುದ್ಧಿ ಉಪಯೋಗ ಮಾಡದಿದ್ದರೆ ಅದಕ್ಕೆ ನಿಮ್ಮ ಆಕ್ಷೇಪಣೆ ಇದೆಯೇ?

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಅವರಿವರ ಹೇಳಿಕೆ ಮಾತು ಕೇಳಿ ದೇಶವನ್ನು ಹಾಳು ಮಾಡಬೇಡಿ. ದೇಶದ ದುಡ್ಡು ಪೋಲುಮಾಡಬೇಡಿ ಎಂಬುದಾಗಿ ನಾನು ಹೇಳುತ್ತೇನೆ. ನಾನು, ಹೀಗೆ ಹೇಳಿದರೆ ಅವರಿಗೆ ಸಿಟ್ಟು ಬರುತ್ತದೆಂದು ಕಾಣುತ್ತದೆ. ಪಿ.ಡಬ್ಲ್ಯು.ಡಿ. ಇಲಾಖೆಯಾಗಲೀ ಅಥವಾ ಯಾವುದೇ ಇಲಾಖೆಯಾಗಲೀ ಎಲ್ಲಾ ಒಂದೇ ತರಹವೆಂದು ಹೇಳಬಹುದು. ಹಾಸನ ಜಿಲ್ಲೆಯಲ್ಲಿ Ore Carrying division ಎಂದು ಇದೆ. Regular division ಒಂದು ಇದೆ. ಇವೆರಡಕ್ಕೂ ರೇಟ್ಸ್ ಎಷ್ಟು ಕೊಡಬೇಕು, ಯಾವುದು ಲೀಡ್ ತೋರಿಸುತ್ತದೋ ಅದಕ್ಕೆ ಕೊಡುತ್ತಾರೆ. ಆದರೆ ಒಂದಕ್ಕೊಂದಕ್ಕೆ ವ್ಯತ್ಯಾಸ ಮಾಡಿದರೆ ಕಂಟ್ರಾಕ್ಟ್ ಮಾಡುವ ಜನಗಳಿಗೆ ಒಬ್ಬರನ್ನೊಬ್ಬರು ದೂರುತ್ತಾರೆ. ಅದರಲ್ಲಿ ಏನೂ ಅನುಮಾನವಿಲ್ಲ. ಇದರಿಂದ ಅಧಿಕಾರಿಗಳು ಬೇಕಾದಷ್ಟು ಲಂಚ ಹೊಡೆಯುತ್ತಾರೆ. ಜಾಸ್ತಿ ರೇಟ್ ಕೊಡಬೇಕೆಂದರೆ ಕಂಟ್ರಾಕ್ಟ್ ಕೊಡುವುದೇ ಇಲ್ಲ. ಕಂಟ್ರಾಕ್ಟ್‌ದಾರರು ಇಬ್ಬರು ಮೂವರು ತೆಗೆದುಕೊಂಡು ಈ ಇಲಾಖೆಯೊಳಗೆ ಬಂದು ಸೇರಿಕೊಂಡು ಬೇಕಾದಷ್ಟು ಲಂಚ ಕೊಡುವುದರಿಂದ ಅನೇಕರು ಲಕ್ಷಾಧೀಶ್ವರರು, ಕೋಟ್ಯಾಧೀಶ್ವರರಾದರು. ದೇಶದ ದುಡ್ಡು ಮಾತ್ರ ಪೋಲಾಯಿತು. ಇದರಲ್ಲಿ ಕಾಂಗ್ರೆಸ್ಸರ ಕೈವಾಡವಿದೆಯೆಂಬುದು ಚೆನ್ನಾಗಿ ಗೊತ್ತಾಗುತ್ತದೆ. ಅಧಿಕಾರಿಗಳ ಕೈವಾಡವೂ ಇದೆಯೆಂದು ಕಾಣುತ್ತದೆ. ಅದೂ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟೇ, ಇದೂ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟೇ, ಅದೂ ಸರ್ಕಾರವೇ, ಇದೂ ಸರ್ಕಾರವೇ, ಒಂದೇ ಪ್ರದೇಶದಲ್ಲಿ ಕೆಲಸ ನಡೆಯುತ್ತದೆ. ರೇಟ್ಸ್‌ನಲ್ಲಿ ವ್ಯತ್ಯಾಸ ಏತಕ್ಕೆ ಬರಬೇಕು? ಈಗ ಈ ರೀತಿ ಕೊಟ್ಟಿದ್ದ ಪಕ್ಷದಲ್ಲಿ ಮುಂದಾದರೂ ರೇಟ್ ಕೊಡುವ ರೀತಿಯಲ್ಲಿ ಸರಿಪಡಿಸಿ. ಒಂದು ಪ್ರದೇಶದಲ್ಲಿ ಸರ್ಕಾರದ ಕೆಲಸ ನಡೆಯುವಾಗ ರೇಟ್ಸ್ ಒಂದೇ ಇರಬೇಕು. ಇಲ್ಲಾ ಇವರಿಗೆ ಜಾಸ್ತಿ ಮಾಡಿ, ಇಲ್ಲಾ ಅವರಿಗೆ ಕಡಿಮೆ ಮಾಡಿ. ಅಷ್ಟೇ ನಾವು ಕೇಳುತ್ತ ಇರುವುದು. ಈಗ Ore carrying roads ನ್ನು ಅಬಾಲಿಷ್ ಮಾಡುತ್ತಾ ಇದ್ದಾರೆ ಇದು ಬಹಳ ಅನ್ಯಾಯ. ಏತಕ್ಕೆಂದರೆ Ore ಸಿಗಬೇಕಾದರೆ ಯಾವುದೋ ಒಂದು ರಸ್ತೆ ಹಾಕಬೇಕೆಂದಿದ್ದಾರೆ. ಅದನ್ನು ಏತಕ್ಕೆ ಮಾಡಿದ್ದಾರೆಂಬುದೂ ಸಹ ಗೊತ್ತಿದೆ. ಕೇಂದ್ರದಿಂದ ಜಾಸ್ತಿ ದುಡ್ಡು ತೆಗೆದುಕೊಂಡು ಓರನ್ನು ಹೆಚ್ಚಿಗೆ ಕೊಂಡುಕೊಳ್ಳಬೇಕು, ಅದೂ ಅಲ್ಲದೆ ಈಗಿರತಕ್ಕ ಇಲಾಖೆಯನ್ನು ಅಬಾಲಿಷ್ ಮಾಡಿದರೆ ಮುಂದೆ ಹೊಸವಾಗಿ ಇನ್ನೊಂದು ಇಲಾಖೆಯನ್ನು ಸೃಷ್ಟಿಮಾಡಿ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ಇನ್ನಷ್ಟು ಹೆಚ್ಚಿಗೆ ದುಡ್ಡು ತೆಗೆದುಕೊಂಡು ಓರ್ ಕೊಂಡುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

11-30 A.M

ಇನ್ನು ರೂರಲ್ ಕಮ್ಯುನಿಕೇಷನ್ ವಿಷಯ—ಇದರಲ್ಲಿ ತುಂಬಾ ಅನ್ಯಾಯವಾಗುತ್ತಾ ಇದೆ. ಮೊದಲೇ ಹೇಳಿದ್ದೆ a stich in time saves nine ಅಂತ. ಈಗ ಎಲ್ಲಾ ರಸ್ತೆಗಳು ಫಾರಂನಲ್ಲಿ ಇವೆ. ಫಾರಂನಲ್ಲಿರುವಾಗ ವರ್ಷೇ ವರ್ಷೇ ರೂರಲ್ ಕಮ್ಯುನಿಕೇಷನ್ ರಸ್ತೆಗಳನ್ನು ರಿಪೇರಿ ಮಾಡಿ ತಾವು ಹೇಳುವ ಹಾಗೆ ಫೇರ್ ಸ್ಟೇಜ್‌ಗೆ ತೆಗೆದುಕೊಂಡುಬಂದು ಟ್ರಾಫಿಗ್‌ಗೆ ಅನುಕೂಲ ಮಾಡಿ ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಹಾಗೆ ಮಾಡದೇ ಬಿಟ್ಟರೆ, ನೆಗ್ಲೆಕ್ಟ್ ಮಾಡಿದರೆ ತಾವು ಖರ್ಚುಮಾಡಿದ ಹಣ ಎಲ್ಲಾ ವ್ಯರ್ಥವಾಗಿ ಹೋಗುತ್ತದೆ. ಆದ್ದರಿಂದ ರೂರಲ್ ಕಮ್ಯುನಿಕೇಷನ್ ರಸ್ತೆಗಳಿಗೆ ಇನ್ನು 10 ಕೋಟಿ ರೂಪಾಯಿ ಖರ್ಚಾದರೂ ಪರವಾಗಿಲ್ಲ ಅವನ್ನು ಪೂರ್ತಿ ಮಾಡಿ ಮುಗಿಸಿ. ಮತ್ತು ಮುಂದೆ ಅವುಗಳನ್ನು ಸರಿಯಾದ ರೀತಿಯಲ್ಲಿ ಇಡುವುದಕ್ಕೆ ತಕ್ಕ ವ್ಯವಸ್ಥೆಯನ್ನೂ ಕೂಡ ಈಗಲೇ ಮಾಡಿ ಎಂದು ಹೇಳುತ್ತೇನೆ.

ಹಾಸನ ಡಿವಿಜನ್ನಿನಲ್ಲಿ ಮೊದಲಿನಿಂದಲೂ ಹೇಳುತ್ತಾ ಇದ್ದೇನೆ. ಒಂದು ಡಿವಿಜನಿಂದ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಅಲ್ಲಿಗೆ ಇನ್ನೊಂದು ಡಿವಿಜನ್ ಕೊಡಬೇಕು. ಕೊಡದಿದ್ದರೆ, ಕೆಲಸ ಕಾರ್ಯ ಯಾವುದೂ ನಡೆಯುವುದಿಲ್ಲ. ಅದು ಬಹಳ ದೊಡ್ಡ ಡಿವಿಜನ್ ಆದ್ದರಿಂದ ಆದಷ್ಟು ಜಾಗ್ರತೆ ಅಲ್ಲಿ ಎರಡು ಡಿವಿಜನ್ ಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಕಟ್ಟಡಗಳ ವಿಷಯ—ತಾವು ಸಾಮಾನ್ಯವಾಗಿ ತಾಲ್ಲೂಕ್ ಹೆಡ್ ಕ್ವಾರ್ಟರ್, ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರು ಮತ್ತು ಸಿಟಿ ಇವುಗಳಲ್ಲಿ ಮಾತ್ರ ಇದಕ್ಕೆ ಹೆಚ್ಚು ಗಮನ ಕೊಡುತ್ತಿದ್ದೀರಿ. ಇದು ಬಹಳ ಅನ್ಯಾಯ. ಹೋಬಳಿ ಹೆಡ್ ಕ್ವಾರ್ಟರು ಮತ್ತು ಇನ್ನು ಸಣ್ಣ ಸಣ್ಣ ಪ್ರದೇಶಗಳಲ್ಲೂ ಕೂಡ ಹೆಚ್ಚಾಗಿ ಕಟ್ಟಡಗಳನ್ನು ಕಟ್ಟಿಸ ಬೇಕು. ಈಗ ತಾವು ಹಾಗೆ ಮಾಡುತ್ತಾ ಇಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಹೋಬಳಿ ಹೆಡ್ ಕ್ವಾರ್ಟರ್‌ನಲ್ಲಿ ನಾವು ಯಾವ ಕಟ್ಟಡ ಕಟ್ಟಿಸ ಬೇಕು ?

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಮಿಡ್ಲ್‌ಸ್ಕೂಲು, ಹೈಸ್ಕೂಲು, ಪ್ರೈಮರಿ ಸ್ಕೂಲು ಕಟ್ಟಡ ಕಟ್ಟಿಸಬಹುದು.

ಶ್ರೀ ವೀರೇಂದ್ರ ಪಾಟೀಲ್.—ಅದನ್ನು ಆಯಾ ಡಿಪಾರ್ಟ್‌ಮೆಂಟಿನವರು ಮಾಡಬೇಕು. We are only the agency.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ತಾವು ಏನು ಬೇಕಾದರೂ ಮಾಡಬಹುದು. ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇದೆ ನಾವೇ ಕಟ್ಟುತ್ತೇವೆ ಹಣ ಕೊಡಿ ಎಂದರೆ ಕೊಡುತ್ತಾರೆ. ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಹೊರಗಡೆಯಿಂದ ಬಂದವರು ಆ ಹಳ್ಳಿಗಳ ಕಡೆ ನೋಡಿದರೆ ಅಲ್ಲಿ ಏನೇನೂ ಇಲ್ಲ complete darkness ಇದೆ. ಅದಕ್ಕೆ ಅವಕಾಶ ಕೊಡಬೇಡಿ. ಅಲ್ಪಸ್ವಲ್ಪವಾದರೂ ಕಾನೂನು ರೀತ್ಯಾ ಗ್ರಾಮಾಂತರ ಪ್ರದೇಶದ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳಿ ಎಂದು ಹೇಳು ತ್ತೇನೆ.

ಇನ್ನೊಂದು ಸಲಹೆ: ನಮ್ಮ ಮೈಸೂರುದೇಶ ಇಡೀ ಪ್ರಪಂಚದಲ್ಲೇ ಬೇಲೂರು, ಹಳೇಬೀಡು ಶ್ರವಣಬೆಳಗೊಳಕ್ಕೆ ಹೆಸರುವಾಸಿಯಾದ ದೇಶ. ಹಾಗಿರುವಾಗ ಈ ಮುಖ್ಯವಾದ ದೇವಾಲಯ ಗಳನ್ನು ಬೇರೆ ಒಂದು ಡಿಪಾರ್ಟ್‌ಮೆಂಟಿಗೆ ವಹಿಸಿಕೊಡಿ. ಇವತ್ತಿನ ದಿವಸ ಮೈಸೂರು ಸರಕಾರದಲ್ಲಿ ಡಿಪಾರ್ಟ್‌ಮೆಂಟ್ ಆಫ್ ಆರ್ಕಿಯಾಲಜಿ ಇದ್ದೂಕೂಡ ಅದು ಇಲ್ಲದ ಹಾಗೆ ಆಗಿದೆ. ಇದು ಯಾವ ಮಿನಿಸ್ಟರ್‌ಗೆ ಸೇರಿದೆ ಎಂದರೆ ನಮಗೆ ಸೇರಿಲ್ಲ ಎಂದು ಎಜ್ಯುಕೇಷನ್ ಮಿನಿಸ್ಟರು ಹೇಳುತ್ತಾರೆ. ನಮಗೆ ಸೇರಿಲ್ಲ ಎಂದು ಹೋಂ ಮಿನಿಸ್ಟರು ಹೇಳುತ್ತಾರೆ. ಆದ್ದರಿಂದ ಇದನ್ನು ತಾವೇ ವಹಿಸಿಕೊಳ್ಳಿ. ಈ ಮೂರು ಪ್ರದೇಶಗಳಿಗೂ ಕೂಡ ತಾವು ಹೆಚ್ಚು ನಿಗಾ ಕೊಡಬೇಕು. ಹಾಸನದಲ್ಲಿ ಟೂರಿಸ್ಟ್ಸ್‌ಗೆ ಎಂದು ಹೇಳಿ ಒಂದು ಬಂಗಲೆ ಕಟ್ಟಿದ್ದಾರೆ. 3-4 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ ಎಲ್ಲಾ ಪೂರ್ತಿಯಾಗಿದೆ. ಸುಮಾರು ಒಂದು ವರ್ಷದಿಂದ ಅದು ಖಾಲಿ ಬಿದ್ದು ಅಲ್ಲಿ ಕತ್ತೆ, ಕುದುರೆಗಳು ಬಂದು ಮಲಗುತ್ತಾ ಇವೆ. ಹೀಗೆ ಆಗುವುದಕ್ಕೆ ಅವಕಾಶ ಕೊಡಬೇಡಿ. ಅಲ್ಲಿ ಜನಗಳಿಗೆ ಅನುಕೂಲ ಮಾಡಿ ಕೊಟ್ಟಿಲ್ಲ. ಇದನ್ನು ಯಾರು ಮಾಡಬೇಕು ? ಹೀಗಾಗುವುದಕ್ಕೆ ಅವಕಾಶ ಕೊಡದೇ, ಶ್ರವಣಬೆಳಗೊಳ, ಬೇಲೂರು, ಹಳೇಬೀಡು ಅಂತಹ ಸ್ಥಳಗಳಲ್ಲಿ ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಿಸಿ ಅಲ್ಲಿಗೆ ಬರತಕ್ಕ ಜನರು ಅಲ್ಲಿ ಇಳಿದುಕೊಳ್ಳುವುದಕ್ಕೆ ಅನುಕೂಲ ಮಾಡಿಕೊಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಶರಣಪ್ಪ (ದೇವದುರ್ಗ).—ಮಾನ್ಯ ಸಭಾಪತಿಗಳೇ, ಈ ದಿನ ನಮ್ಮ ರಾಜ್ಯದ ಲೋಕೋಪಯೋಗಿ ಶಾಖೆಯ ಸಚಿವರಾದ ಶ್ರೀಮಾನ್ ವೀರೇಂದ್ರ ಪಾಟೀಲ್ ಅವರು ಸಭೆಯ ಮುಂದೆ

ಇಟ್ಟಂಥ ಈ ಡಿಮ್ಯಾಂಡನ್ನು ನಾನು ಅನುಮೋದಿಸುತ್ತಾ ಅವರಿಗೆ ನಾನು ಈ ವಿಷಯದ ಬಗ್ಗೆ ಧನ್ಯವಾದಗಳನ್ನು ಅರ್ಪಿಸುತ್ತಾ ಇದ್ದೇನೆ. ಹೋದ ವರ್ಷ ಈ ಡಿಮ್ಯಾಂಡಿನಲ್ಲಿ 20 ಕೋಟಿ ಕೆಲವೊಂದು ಲಕ್ಷ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದರು. ಈ ವರ್ಷ ಈ ಒಂದು ತುರ್ತುಪರಿಸ್ಥಿತಿಯಲ್ಲಿ ಅನೇಕ ತೊಂದರೆಗಳು ನಮ್ಮ ದೇಶಕ್ಕೆ ಬಂದರೂಕೂಡ ಸುಮಾರು ಒಂದು ಕೋಟಿ ರೂಪಾಯಿಗಳನ್ನು ಹೋದ ವರ್ಷಕ್ಕಿಂತ ಹೆಚ್ಚಾಗಿ ಇಟ್ಟಿದ್ದಕ್ಕಾಗಿ ಅವರಿಗೆ ನಾನು ಹೃತ್ಪೂರ್ವಕವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಒಂದು ಸಂದರ್ಭದಲ್ಲಿ ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡದೇ ಇರಲಾರೆ ಎಂದು ಈ ಸಭೆಯಲ್ಲಿ ಹೇಳುತ್ತಾ ಇದ್ದೇನೆ. ಹೋದ ವರ್ಷ ನಾನು ಈ ಒಂದು ಡಿಮ್ಯಾಂಡುಗಳ ಮೇಲೆ ಮಾತನಾಡುತ್ತಾ ಇರುವಾಗ ಪಿ.ಡಬ್ಲ್ಯು.ಡಿ. ನಲ್ಲಿ ಎಲ್ಲೆಲ್ಲಿ ಹೆಚ್ಚು ಕೆಲಸ ಆಗುತ್ತಿದೆ ಅಲ್ಲಿಯೇ ಹೆಚ್ಚಾಗಿ ಕೆಲಸಗಳನ್ನು ತೆಗೆದುಕೊಂಡು ಅಲ್ಲೇ ಹೆಚ್ಚು ಅಭಿವೃದ್ಧಿಕಾರ್ಯ ಆಗುತ್ತಾ ಇದೆ, ರಸ್ತೆ, ಅಣೆಕಟ್ಟು, ಸೇತುವೆ, ಬಾವಿ, ಕೆರೆಗಳು ಇಂತಹ ಅನೇಕ ಕಾರ್ಯಗಳು ಆಗುತ್ತಾ ಇವೆ. ನಮ್ಮ ಮೈಸೂರು ದೇಶದಲ್ಲಿ ಯಾವ ಒಂದು ಹಿಂದುಳಿದ ಭಾಗಗಳು ಇವೆ, ಇಂತಹ ಸೌಕರ್ಯಗಳು ಹಿಂದಿನ ಕಾಲದಿಂದಲೂ ಅಲ್ಲಿ ಇಲ್ಲಿ ಅಂತಹ ಭಾಗಗಳಿಗೆ ಹೆಚ್ಚು ಪ್ರಧಾನ್ಯತೆ ಮತ್ತು ಪ್ರಶಸ್ತ್ಯ ಕೊಟ್ಟು ಅಲ್ಲಿ ಹೆಚ್ಚು ಹಣ ವಿನಿಯೋಗ ಮಾಡತಕ್ಕ ಕಾರ್ಯ ಹಾಕಿಕೊಳ್ಳಬೇಕು ಎಂದು ಅಂಕಿ ಅಂಶಗಳಿಂದ ಅತಿ ವಿಸ್ತಾರವಾಗಿ ನಾನು ಕೆಲವೊಂದು ಮಾತುಗಳನ್ನು ಈ ಮಾನ್ಯ ಸಭೆಯ ಮುಂದೆ ಹೇಳಿದ್ದೆ. ಆದರೆ ಆ ಒಂದು ವಿಷಯವನ್ನು ನೋಡಲಾಗಿ ಈ ವರ್ಷದ ಬಡ್ಜೆಟ್‌ನಲ್ಲಿ ಕೂಡ ಹಿಂದುಳಿದ ಪ್ರದೇಶಕ್ಕೆ ಸಂಭಂಧಪಟ್ಟಂತೆ ಹೆಚ್ಚು ಕಾರ್ಯಗಳನ್ನು ತೆಗೆದುಕೊಂಡಿಲ್ಲ ಎಂದು ಹೇಳಲು ನನಗೆ ಸ್ವಲ್ಪ ವಿಷಾದವಾಗುತ್ತದೆ. ಏಕೆಂದರೆ ಈ 19 ಜಿಲ್ಲೆಗಳ ಅಂಕಿ ಅಂಶವನ್ನು ನಾವು ಸ್ವಲ್ಪ ಸೂಕ್ಷ್ಮದೃಷ್ಟಿಯಿಂದ ನೋಡಿದರೆ ಹೈದರಾಬಾದ್ ಜಿಲ್ಲೆಯ ಕೆಲವೊಂದು ಭಾಗಗಳಲ್ಲಿ 12 ಮೈಲು, 18 ಮೈಲು, ಕೆಲವೊಂದು ತಾಲ್ಲೂಕುಗಳಲ್ಲಿ 9 ಮೈಲು, ಕೆಲವೊಂದು ತಾಲ್ಲೂಕುಗಳಲ್ಲಿ 4 ಮೈಲು ಈ ರೀತಿಯಾಗಿ ರಸ್ತೆಗಳು ಇದ್ದುದನ್ನು ನೋಡಿದರೆ ಕರ್ನಾಟಕದ ಆ ಭಾಗದ ಮೂರು ಜಿಲ್ಲೆಗಳಲ್ಲೂ ಕೂಡ ರಸ್ತೆಗಳ ಯೋಜನೆಯನ್ನು ಸರಿಯಾಗಿ ತೆಗೆದುಕೊಂಡಿಲ್ಲ ಎಂದು ಹೇಳಲು ಬಯಸುತ್ತೇನೆ. ಏಕೆ ಇದನ್ನು ಹೇಳುತ್ತೇನೆ ಎಂದರೆ ಯಾವ ಒಂದು ಕ್ಷೇತ್ರಕ್ಕೂ ಯಾವ ಒಂದು ಭಾಗಕ್ಕೂ ಹೆಚ್ಚು ಪ್ರಾಧಾನ್ಯತೆ ಕೊಡಬಾರದು ಎಂದು ವಿರೋಧಪಕ್ಷದ ಸದಸ್ಯರು ಹೇಳಿದರು. ಅದು ಪ್ರತಿಯೊಬ್ಬರೂ ಒಪ್ಪತಕ್ಕ ಮಾತೇ. ಆದರೂಕೂಡ ಹಿಂದುಳಿದ ಭಾಗಗಳಿಗೆ ಸ್ವಲ್ಪ ಹೆಚ್ಚಿನ ಗಮನ ಕೊಡಬೇಕಾಗುತ್ತದೆ. ಆ ದೃಷ್ಟಿಯಿಂದ ನಮ್ಮಲ್ಲಿ ಹಿಂದುಳಿದ ಭಾಗ ಎಂದರೆ ಹೈದರಾಬಾದ್ ಕರ್ನಾಟಕಕ್ಕೆ ಸಂಬಂಧಪಟ್ಟ ಮೂರು ಜಿಲ್ಲೆಗಳು ಮತ್ತು ಉತ್ತರ ಕರ್ನಾಟಕಕ್ಕೆ ಸಂಬಂಧಪಟ್ಟ ಮೂರು ಜಿಲ್ಲೆಗಳು ಆಗಿವೆ. ಅದರಲ್ಲೂ ಬಿಜಾಪುರ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಈ ರಸ್ತೆಯ ಅಭಾವ ಬಹಳವಾಗಿದೆ. ನಮ್ಮ ಭಾಗದಲ್ಲಿ ಕೆಲವೊಂದು ಕಡೆ ತಾಲ್ಲೂಕಿನಿಂದ ತಾಲ್ಲೂಕಿಗೆ ಹೋಗಲು ಮಾರ್ಗ ಸೌಕರ್ಯ ಇಲ್ಲದಂತಾಗಿದೆ. ಒಂದು ಉದಾಹರಣೆ ಹೇಳಬೇಕಾದರೆ ದೇವದುರ್ಗ ತಾಲ್ಲೂಕಿನಲ್ಲಿ ಕೇವಲ 18 ಮೈಲಿ ರಸ್ತೆ ಇದೆ. ಅದೂಕೂಡ ರಾಯಚೂರಿನಿಂದ ದೇವದುರ್ಗಕ್ಕೆ ಹೋಗಬೇಕು.

ಈ ಒಂದು ಪರಿಸ್ಥಿತಿಯಲ್ಲಿದ್ದಾಗ ಆ ಭಾಗದ ಜನರ ಅಭಿವೃದ್ಧಿಗೆ ಬೇಕಾದ ಸಂಪರ್ಕ ಸೌಲಭ್ಯ ಕಲ್ಪಿಸಬೇಕು ; ಬೇರೆ ತಾಲ್ಲೂಕಿನಿಂದ, ಜಿಲ್ಲೆಯಿಂದ ಅನುಕೂಲದೃಷ್ಟಿಯಿಂದ ಸಂಪರ್ಕ ಬೆಳೆಸದಿದ್ದರೆ ನಮ್ಮ ಅಭಿವೃದ್ಧಿ ಯಾವ ರೀತಿ ಆಗಬೇಕು ಎಂಬುದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಿಗೆ ಸಂಬಂಧ ಕಲ್ಪಿಸುವ ಷಾಪುರ ಮತ್ತು ದೇವದುರ್ಗ ರಸ್ತೆಗೆ ಸಂಬಂಧ ಕಲ್ಪಿಸುವ ಷಾಪುರ-ದೇವದುರ್ಗ ರಸ್ತೆ ಮುಖ್ಯವಾದ ಮಾರ್ಗ ಎಂದು ಅನೇಕಸಲ ಗಮನಕ್ಕೆ ತಂದೆ. ತಿಂತಿಣಿ ಸೇತುವೆಯಾದಮೇಲೆ ಸೋರಾಪುರದಿಂದ ಷಾಪುರಕ್ಕೆ ಸಂಪರ್ಕ ಮಾಡಿದರೆ ಗುಲ್ಬರ್ಗ ಜಿಲ್ಲೆಗೆ ಹೋಗುವ ಮುಖ್ಯವಾದ ಮಾರ್ಗವಾಗಿ ಜನರಿಗೆ ಸೌಲಭ್ಯವಾಗುವುದಲ್ಲದೆ ಅವರ ಹಣ ಉಳಿಸಲು ಅವಕಾಶ ಕೂಡ ಸರ್ಕಾರ ಕಲ್ಪಿಸಿದಂತಾಗುತ್ತದೆ. ಇದನ್ನು ಹಿಂದೆಯೇ ತಿಳಿಸಿದ್ದರೂ ಈ ವರ್ಷದ ಬಡ್ಜೆಟ್ಟಿನಲ್ಲಿ ಅದಕ್ಕೆ ಅವಕಾಶ ಮಾಡಿರುವಂತೆ ಕಂಡು ಬರಲಿಲ್ಲ. ತಿಂತಿಣಿ ಸೇತುವೆಯಿಂದ ದೇವದುರ್ಗಕ್ಕೆ ಸಂಪರ್ಕ ಕಲ್ಪಿಸಬೇಕಾದರೆ ಬಲಹಳ್ಳಿ ಸೇತುವೆ ಮತ್ತು ಇನ್ನು ಕೆಲವು ಸೇತುವೆಗಳನ್ನು ನಿರ್ಮಿಸಬೇಕಾದ ಆವಶ್ಯಕತೆಯಿದೆ. ದೇವದುರ್ಗ ಲಿಂಗಸುಗೂರು-ಹೊಸಹಳ್ಳಿ ರಸ್ತೆಗೆ ಬಡ್ಜೆಟ್ಟಿನಲ್ಲಿ ಹಣ ಒದಗಿಸಿಲ್ಲ. ಇಂಥ ಮುಖ್ಯವಾದ ರಸ್ತೆ ಕೆಲಸ ತೆಗೆದುಕೊಳ್ಳಲು ಏನೂ ಪ್ರಯತ್ನ ಮಾಡಿಲ್ಲ. ಇದರಿಂದ ಬಹಳ ಜನರಿಗೆ ಅಸಂತೋಷವಾಗಿದೆ. ಇದೇ ರೀತಿಯಾಗಿ ಗುಲ್ಬರ್ಗ ಮತ್ತು ಬಿದರೆಯಲ್ಲಿ ಮುಖ್ಯವಾದ ರಸ್ತೆಗಳು ಮತ್ತು ಅಣೆಕಟ್ಟುಗಳನ್ನು ಮಾಡುವುದಿದೆ. ಗುಲ್ಬರ್ಗದಲ್ಲಿ ಅನೇಕ ಮುಖ್ಯ ರಸ್ತೆಗಳಿದ್ದು ಅವು ಅಪೂರ್ಣವಾಗಿರುವಾಗ ಅವನ್ನು ತೆಗೆದುಕೊಳ್ಳುವ ಸುಯೋಗ ದೊರೆತಿಲ್ಲ. ಬಿದರೆ ಜಿಲ್ಲೆಯಲ್ಲಿ ಸಂತಾಪುರ ಮತ್ತು ಕೆಲವೊಂದು ತಾಲ್ಲೂಕುಗಳಿಂದ ಬೇರೆ ಗ್ರಾಮಗಳಿಗೆ ಹೋಗಲು ಇಪ್ಪತ್ತನೆಯ ಶತಮಾನದ ಇಂಥ ಆಧುನಿಕ ಕಾಲದಲ್ಲೂ ಅವಕಾಶ ಕಲ್ಪಿಸಿ ಕೊಡದಿದ್ದರೆ ಜನರನ್ನು ಮುಂದುವರಿಸುವ ಮಾರ್ಗ

(ಶ್ರೀ ಶರಣಪ್ಪ)

ಯಾವುದು ಎಂದು ವಿಚಾರ ಮಾಡುವುದಿದೆ. ಇನ್ನೊಂದು ಮುಖ್ಯವಾದ ರಸ್ತೆ ಸುರಪುರ ರಸ್ತೆ. ಅದು ಇಡೀ ರಾಯಚೂರಿನ ಅನೇಕ ತಾಲ್ಲೂಕುಗಳಿಗೆ ಸಂಬಂಧಪಟ್ಟಿದೆ. ರಸ್ತೆ ಅಭಿವೃದ್ಧಿಗೆ ಆದಷ್ಟು ಪ್ರಯತ್ನ ಮಾಡುವುದಾಗಿ ಆಶ್ವಾಸನೆ ಕೊಟ್ಟಿದ್ದರೂ ಸುರಪುರ ರಸ್ತೆಗೆ ಬಡ್ಜೆಟ್ಟಿನಲ್ಲಿ ಅವಕಾಶ ಮಾಡಿಲ್ಲ. ಆ ರಸ್ತೆಯ ಅಭಿವೃದ್ಧಿಗಾಗಲಿ ಅಥವಾ ಇಂಪ್ರೂವ್‌ಮೆಂಟಿಗಾಗಲಿ ಅಥವಾ ಮೆಟಲಿಂಗಿಗಾಗಲಿ ಯಾವ ರೀತಿಯಲ್ಲೂ ಅವಕಾಶ ಮಾಡಿಲ್ಲ. ಈಗ ಅನೇಕ ದೃಷ್ಟಿಯಿಂದ ಅನೇಕ ಮಾನ್ಯ ಸದಸ್ಯರು ತಮ್ಮ ತಮ್ಮ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಆದರೆ ನಾನು ಹೇಳುವುದಿಷ್ಟು: ಒಂದು ತಾಲ್ಲೂಕು ಅಥವಾ ಒಂದು ಜಿಲ್ಲೆಯ ಅಭಿವೃದ್ಧಿಗಾಗಿ ಈ ಶಾಖೆ ಕಾರ್ಯಕ್ರಮದ ಅಂದಾಜು ಮಾಡುವಾಗ ಆ ಭಾಗದಲ್ಲಿ ಯಾವ ಕಾರ್ಯವನ್ನು ಮಾಡಬೇಕೋ ಅಂಥ ಕಾರ್ಯವನ್ನು ಪ್ರತಿವರ್ಷ ಶೇಕಡ ಒಂದು ಭಾಗದಲ್ಲಿ ಇಷ್ಟು ಕೈಗೊಳ್ಳುವಂತೆ ನಿಗದಿ ಮಾಡಿ ಮಾಡಿದರೆ ಒಂದು ಸಮತಾ ಭಾವನೆಯಿಂದ ಮಾಡಿದಂತಾಗುತ್ತದೆ. ಆ ದೃಷ್ಟಿಯಿಂದ ಪ್ರತಿವರ್ಷ ಯಾವ ಯಾವ ಭಾಗದಲ್ಲಿ ಸ್ಟೇಟ್ ಫಂಡ್ ರಸ್ತೆ, ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆ, ನ್ಯಾಷನಲ್ ಹೈವೇ, ಯಾವುದನ್ನು ತೆಗೆದುಕೊಳ್ಳಬೇಕೆಂಬುದನ್ನು ವಿಚಾರಮಾಡಿ, ಅಸ್ಫಾಲ್ಟಿಂಗ್ ಅಥವಾ ಮೆಟಲಿಂಗ್ ಮಾಡಿ ಜನರಿಗೆ ಸೌಕರ್ಯ ಕಲ್ಪಿಸಿದರೆ ಪ್ರತಿಯೊಂದು ಜಿಲ್ಲೆಯಲ್ಲೂ ಒಂದೇ ರೀತಿಯ ಅವಕಾಶ ಸರ್ಕಾರ ಕಲ್ಪಿಸುತ್ತಿದೆ ಎಂಬ ಭಾವನೆ ಜನರಲ್ಲಿ ಮೂಡುತ್ತದೆ. ಹಾಗೆ ಮಾಡಬೇಕು ಎಂದು ಕೇಳಿಕೊಂಡು ಇಷ್ಟು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ಮಾನ್ಯ ಮಂತ್ರಿಗಳು ಒದಗಿಸಿರುವ ಇಪ್ಪತ್ತೊಂದು ಕೋಟಿ ರೂಪಾಯಿಗಳನ್ನು, ಕೆಲವೊಂದು ಲಂಪ್‌ಸಂ ಮೊತ್ತವನ್ನು, ಮುಖ್ಯವಾದ ಕಾರ್ಯಗಳನ್ನು ಮುಂದುವರಿಸಲು ಉಪಯೋಗಿಸಬೇಕೆಂದು ಪ್ರಾರ್ಥಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ). —ಅಧ್ಯಕ್ಷರೇ, ಲೋಕೋಪಯೋಗಿ ಶಾಖೆಯನ್ನು ಸೇತುವೆಗಳು, ಕಟ್ಟಡಗಳು ಮತ್ತು ರಸ್ತೆಗಳು ಎಂದು ಒಂದು ಭಾಗ, ಮೈನರ್ ಇರಿಗೇಷನ್ ಒಂದು ಭಾಗ ಮತ್ತು ಮೇಜರ್ ಇರಿಗೇಷನ್ ಒಂದು ಭಾಗ ಎಂದು ಹೀಗೆ ಮೂರು ಭಾಗಗಳಾಗಿ ವಿಂಗಡಿಸಿ ಬೇರೆ ಬೇರೆ ಚೀಫ್ ಇಂಜನಿಯರುಗಳಿಗೆ ವಹಿಸಿದ್ದಾರೆ. ಈ ದಿವಸ ರಸ್ತೆ, ಕಟ್ಟಡ ಮತ್ತು ಸೇತುವೆ ಈ ಮೂರು ವಿಷಯಗಳ ಮೇಲೆ ನಮ್ಮ ಅಭಿಪ್ರಾಯ ಕೇಳಿ, ಬೇಕಾಗಿರುವ ಹಣಕ್ಕೆ ಅಂಗೀಕಾರ ನೀಡಬೇಕೆಂದು ಸೂಚಿಸಿದ್ದಾರೆ. ಇದರ ಮೇಲೆ ನಾವು ಚರ್ಚೆ ಮಾಡುತ್ತಿದ್ದೇವೆ.

ಸ್ವಾಮಿ, ದಿನೇ ದಿನೇ ಈ ಖಾತೆಯಿಂದ ನಡೆಯತಕ್ಕ ಕೆಲಸ ಕಾರ್ಯಗಳನ್ನೆಲ್ಲಾ ವೀಕ್ಷಣೆ ಮಾಡಿದರೆ ರಸ್ತೆ, ಬಂಗಲೆಗಳು, ಕಟ್ಟಡ ಮತ್ತು ಸೇತುವೆಗಳು ಎಲ್ಲೆಲ್ಲಿ ನಿರ್ಮಾಣವಾಗುತ್ತಿರುವುದು ಕಂಡು ಬರುತ್ತದೆ. ಈ ಮೈಸೂರು ರಾಜ್ಯ 1956ನೆಯ ಇಸವಿ ನವೆಂಬರ್ ಒಂದನೆಯ ತಾರೀಖು ವಿಶಾಲವಾದ ಮೇಲೆ ಹಿಂದಿನ ಮಂತ್ರಿಗಳನ್ನು ಕೇಳಿದಾಗ, ರಸ್ತೆಗಳಿಗೆ, ಸೇತುವೆ ಮತ್ತು ಕಟ್ಟಡಗಳಿಗೆ ಹಳೆಯ ಮೈಸೂರಿನಲ್ಲಿ ಎಷ್ಟು ಹಣ ಖರ್ಚಾಯಿತೆಂದು ಕೇಳಿದಾಗ, ಹೈದರಾಬಾದ್ ಕರ್ಣಾಟಕ, ಮುಂಬಯಿ ಕರ್ಣಾಟಕ ಮತ್ತು ಮದ್ರಾಸ್ ಕರ್ಣಾಟಕದ ಭಾಗಗಳಿಗೆ ಎಷ್ಟು ಖರ್ಚಾಯಿತು ಎಂದು ಕೇಳಿದಾಗ ಮಂತ್ರಿಗಳು ಒಂದು ಉದ್ದವಾದ ಪಟ್ಟಿಯನ್ನು ಕೊಟ್ಟು, ಯಾರನ್ನು ಡಿಸ್ಕ್ರಿಮಿನೇಟ್ ಮಾಡಿಲ್ಲ, ಒಂದೇ ದೃಷ್ಟಿಯಿಂದ ಎಲ್ಲರನ್ನೂ ಕಾಣುತ್ತೇವೆ, ಹಿಂದುಳಿದ ಪ್ರದೇಶಗಳೇನು ನಮ್ಮ ಜೊತೆಯಲ್ಲಿ ಬಂದಿವೆ ಅವಕ್ಕೆ ಸ್ವಲ್ಪ ಹೆಚ್ಚು ಸಿಗಾ ಕೊಟ್ಟಿದ್ದೇವೆ ಎಂದು ಹೇಳಿದರು. 1956 ರಿಂದೀಚೆಗೆ ಈ ದೇಶ ವಿಶಾಲವಾಗುವುದಕ್ಕೆ ಮುಂಚೆ ಹಳೆಯ ಮೈಸೂರಿನ ಭಾಗದಲ್ಲಿ ಎಷ್ಟು ಅಭಿವೃದ್ಧಿಯಾಗಿತ್ತು ಈಗ ಎಷ್ಟು ಅಭಿವೃದ್ಧಿಯಾಗಿದೆ ಎನ್ನುವುದನ್ನು ನೋಡಿಬಿಟ್ಟರೆ ಒಂದು ಇಂಚು ಕೂಡ ಈ ರಾಜ್ಯ ಮುಂದಕ್ಕೆ ಹೋಗಿಲ್ಲ ಎನ್ನುವುದು ಈ ಮೇಲೆ ಹೇಳಿದ ಮೂರು ವಿಷಯಗಳಲ್ಲಿ ಆಗಿಲ್ಲ ಎಂದು ಹೇಳಿದರೆ ಅದು ತಪ್ಪಾಗುವುದಿಲ್ಲ. ರಾಜ್ಯದಲ್ಲಿ ಎಲ್ಲಿಯೂ ಹಳೆಯ ಮೈಸೂರಿನಲ್ಲಿ ಒಂದು ಹೊಸ ರಸ್ತೆಯಾಗಲಿ, ಒಂದು ಹೊಸ ಸೇತುವೆ ನಿರ್ಮಾಣವಾಗಲೀ ಒಂದು ಹೊಸ ಕಟ್ಟಡವಾಗಲೀ ಆಗಿಲ್ಲ. ಏನೋ ಅಲ್ಲೊಂದು ಇಲ್ಲೊಂದು ಪ್ರೈಮರಿ ಶಾಲೆ ಬಿಲ್ಡಿಂಗು ಅಥವಾ ಒಂದು ಎಕ್ಸ್‌ಟೆನ್‌ಷನ್ ಬ್ಲಾಕು ಕಟ್ಟಡ ಆಗಿರಬಹುದು. ಆದರೆ ಇಲ್ಲಿ ಮಾತ್ರ ದೊಡ್ಡದಾಗಿ ಹೇಳುತ್ತಾರೆ ಎಜುಕೇಷನ್ನಿನಲ್ಲಿ ಬ್ಯಾಕ್‌ವರ್ಡ್, ಪಿ. ಡಬ್ಲ್ಯು. ಡಿ. ನಲ್ಲಿ ಬ್ಯಾಕ್‌ವರ್ಡ್, ಇಂಡಸ್ಟ್ರೀಯಲ್ಲಿ ಬ್ಯಾಕ್‌ವರ್ಡ್, ಇರಿಗೇಷನ್ನಿನಲ್ಲಿ ಬ್ಯಾಕ್‌ವರ್ಡ್, ಸೋಷಿಯಲ್ ವೆಲ್‌ಫೇರಿನಲ್ಲಿ ಬ್ಯಾಕ್‌ವರ್ಡ್ ಹೀಗೆ ಇನ್ನು ಯಾವುದರಲ್ಲಿ ತೆಗೆದುಕೊಂಡಿರೂ ಕೂಡ ಬ್ಯಾಕ್‌ವರ್ಡ್ ಅನ್ನುತ್ತೀರಿ. ಹಳೆಯ ಮೈಸೂರಿನಲ್ಲಿ ಏನಾದರೂ ಒಂದು ಕಟ್ಟಡ ಅಥವಾ ಸೇತುವೆಯನ್ನು ಎಲ್ಲಿ ಕಟ್ಟುವುದಕ್ಕೆ ಯೋಚನೆ ಮಾಡಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಆದರೆ ತಾವು ಇಲ್ಲಿಯವರೆಗೆ ಕಟ್ಟಡಗಳಿಗಾಗಿ ಹಾಕಿರುವ ಅಡಿಗಲ್ಲುಗಳನ್ನು ಹಾಕಿರುವ ಕಡೆಗಳಲ್ಲಿ, ಸೇತುವೆಗಾಗಿ ಹಾಕಿರುವ ಕಡೆಗಳಲ್ಲಿ ಏನಾದರೂ ಪೂರ್ತಿ ಮಾಡಿದ್ದೀರಾ ಎಂದರೆ ಇಲ್ಲ. ಆದರೆ ಇಲ್ಲಿ ದೊಡ್ಡದಾಗಿ ಇಷ್ಟು ರಸ್ತೆ ಮಾಡಿದ್ದೇವೆ ಇಷ್ಟು ಇಂಟರ್‌ನ್ಯಾಷನಲ್ ಹೈವೇಸುಗಳನ್ನು

ಮಾಡಿದ್ದೇವೆ ಮತ್ತು ಇಷ್ಟು ಕೋಟಿ ಹಣವನ್ನು ಖರ್ಚು ಮಾಡಿದ್ದೇವೆ ಎಂದು ಹೇಳುತ್ತಾರೆ. ಎಲ್ಲಿ ಖರ್ಚು ಮಾಡಿದ್ದೇವೆ ಎನ್ನುವುದಕ್ಕೆ ಇಲ್ಲಿ ತಾವು ಸಮಾಧಾನ ಹೇಳಿಬಿಟ್ಟಿದ್ದರೆ ನಾನು ನಿಮ್ಮಲ್ಲಿ ಹೆಚ್ಚಾಗಿ ಹೇಳುವುದಕ್ಕೆ ಹೋಗುತ್ತಿರಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ನಾನು ತಮೆಲ್ಲರಿಗೂ ರೋಡ್ ಡೆವೆಲಪ್‌ಮೆಂಟ್ ಇನ್ ಮೈಸೂರ್ ಸ್ಟೇಟ್ ಎನ್ನುವ ಒಂದು ಪ್ರಕಟಣೆಯನ್ನು ತಯಾರು ಮಾಡಿಸಿ ಸರಕಾರದ ಮುದ್ರಣಾಲಯದಿಂದ ಪ್ರಿಂಟುಮಾಡಿಸಿ ಅದನ್ನು ನನ್ನ ಬಾಬತ್ತು ಬೇಡಿಕೆಗಳು ಇಲ್ಲಿ ಬರುವುದಕ್ಕೆ ಮುಂಚೆ ತಮಗೆಲ್ಲಾ ಹಂಚಬೇಕೆಂದು ಎಷ್ಟೋ ಪ್ರಯತ್ನ ಮಾಡಿದೆ. ಅದು ನಿನ್ನೆ ಸಂಜೆ ಮಾತ್ರ ನನಗೆ ಬಂದು ತಲಪಿತು. ಅದನ್ನು ಇಂದು ಮಾನ್ಯ ಸದಸ್ಯರೆಲ್ಲರಿಗೂ ಹಂಚಲಾಗಿದೆ ಎಂದು ತಿಳಿದುಕೊಂಡಿದ್ದೇನೆ. ರೋಡುಗಳು, ಸೇತುವೆಗಳ ಮತ್ತು ಇನ್ನಿತರ ಕಾರ್ಯಕ್ರಮಗಳನ್ನು 1956 ರಿಂದೀಚೆಗೆ ಇಲ್ಲಿಯವರೆಗೆ ಏನೇನು ತೆಗೆದುಕೊಂಡಿದ್ದೇವೆ ಮತ್ತು ಇಲ್ಲಿಯವರೆಗೆ ಪ್ರತಿಯೊಂದು ತಾಲ್ಲೂಕಿನಲ್ಲೂ ಏನೇನು ಖರ್ಚು ಮಾಡಲಾಗಿವೆ, ಎಲ್ಲಿ ಕಟ್ಟಡಗಳನ್ನು ಕಟ್ಟಿದ್ದೇವೆ ಎನ್ನುವ ವಿವರಗಳನ್ನೆಲ್ಲಾ ಅದರಲ್ಲಿ ಒದಗಿಸಿದೆ. ಮಾನ್ಯ ಸದಸ್ಯರು ಅದನ್ನು ಪೂರ್ತಿಯಾಗಿ ಓದಿ ನೋಡಿಕೊಂಡಿದ್ದರೆ ಇಷ್ಟು ಟೀಕೆ ಮಾಡಲು ಅವಕಾಶ ಇರುತ್ತಿರಲಿಲ್ಲವೇನೋ ಎಂದು ನನಗನಿಸುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಪಿ. ಡಬ್ಲ್ಯೂ. ಡಿ. ಮಂತ್ರಿಗಳ ವಿಷಯದಲ್ಲಿ ಹೇಳಬೇಕಾದರೆ, ನಾನೂ ಅವರೂ ಸ್ನೇಹಿತರು. ನನ್ನ ವಿಷಯದಲ್ಲಿ ಅವರೂ ಗೌರವವನ್ನಿಟ್ಟುಕೊಂಡಿದ್ದಾರೆ. ಹಾಗೆ ನಾನೂ ಅವರ ವಿಷಯದಲ್ಲಿ ಗೌರವವನ್ನು ಇಟ್ಟುಕೊಂಡಿದ್ದೇನೆ. ಮಾನ್ಯ ಮಂತ್ರಿಗಳು ಹೇಳಿದಂತಹ ಪುಸ್ತಕ ನನ್ನಲ್ಲೂ ಇದೆ. ಆದರೆ ಮಾನ್ಯ ಮಂತ್ರಿಗಳು ವಹಿಸಿಕೊಂಡಿರುವ ಖಾತೆಯ ಬಗ್ಗೆ ಮಾತ್ರ ಇಲ್ಲಿ ಹೇಳುತ್ತಿದ್ದೇನೆ. ಎಷ್ಟು ರಸ್ತೆಗಳಿಗಾಗಿ, ಎಷ್ಟು ಸೇತುವೆಗಳಿಗಾಗಿ ಹಣವನ್ನು ಒದಗಿಸಿದೀರಿ ಹೇಗೆ ಕೊಟ್ಟಿದ್ದೀರಿ ಎನ್ನುವುದು ನೋಡಿದರೆ ತಮಗೇ ಇದರಲ್ಲಿ ಗೊತ್ತಾಗುತ್ತದೆ. ಇದರಲ್ಲಿ ರುವ ಸ್ಟ್ಯಾಟಿಸ್ಟಿಕ್ಸ್ ಏನೆ 56 ರಿಂದೀಚೆಗೆ ಏನು ಮಾಡಿದ್ದೀರಿ ಎನ್ನುವುದನ್ನು ನೋಡಿದರೆ ನಿಮ್ಮ ಪಿ. ಡಬ್ಲ್ಯೂ. ಡಿ. ಭಾಗದಲ್ಲಾಗಲೀ, ಎಜುಕೇಷನ್ ಭಾಗದಲ್ಲಾಗಲೀ ಅಥವಾ ಬೇರೆ ಯಾವ ಭಾಗದಲ್ಲಾಗಲೀ ಹಳೆಯ ಮೈಸೂರಿನ ಭಾಗದಲ್ಲಿ ಬೇರೆ ಭಾಗದಲ್ಲಿ ಮಾಡಿರುವುದರಲ್ಲಿ ಕಾಲು ಪಾಲಿನಷ್ಟು ಮಾಡಿದ್ದೀರಾ? ಅಥವಾ ಅಂತಹ ಕೆಲಸಗಳನ್ನು ತೆಗೆದುಕೊಂಡಿದ್ದೀರಾ? ಅದು ಹೇಗೆ ಇದೆ? ರೋಡುಗಳು, ಬಿಲ್ಡಿಂಗುಗಳು ಮತ್ತು ಸೇತುವೆಗಳು ಎನ್ನುವುದರಲ್ಲಿ ನೋಡಿದರೆ ಏನೇನೂ ಮಾಡಿಲ್ಲ. ಆದುದರಿಂದ ನಾನು ಇಲ್ಲಿ ತಮ್ಮನ್ನು ಕೇಳುತ್ತಿರುವುದು ಹಳೆಯ ಮೈಸೂರಿನ ಭಾಗಕ್ಕಾಗಿ ಎಷ್ಟು ಕಟ್ಟಡಗಳಿಗಾಗಿ, ಎಷ್ಟು ರಸ್ತೆಗಳಿಗಾಗಿ ಖರ್ಚು ಮಾಡಿದ್ದೀರಿ, ಎಂದು ಕೇಳುತ್ತಿದ್ದೇನೆ. ಸುಮಾರು ಮೂರು ಕೋಟಿ ರೂಪಾಯಿಗಳಷ್ಟು ಬೆಳಗಾವಿಯಲ್ಲಿ ಹುಬ್ಬಳ್ಳಿಯಲ್ಲಿ ವಿಧಾನ ಸೌಧದಂತಹ ಒಂದು ದೊಡ್ಡ ಮೆಡಿಕಲ್ ಕಾಲೇಜು ಬಿಲ್ಡಿಂಗಿಗಾಗಿ ಖರ್ಚು ಮಾಡುತ್ತಿದ್ದಾರೆ. ಇದು ಸೆಂಟ್ರಲ್ ಗೌರ್ನಮೆಂಟಿನಿಂದ ಹಣ ಖರ್ಚು ಮಾಡಲೀ, ರಾಜ್ಯ ಸರ್ಕಾರದ ಮೂಲಕ ಖರ್ಚು ಮಾಡಲೀ ಅದು ಮುಖ್ಯವಲ್ಲ. ಅದು ನಮಗೆ ಗೊತ್ತಾಗಿರುವಂತೆ ನಮ್ಮ ರಾಜ್ಯದಲ್ಲಿ ಆಗುತ್ತಿದೆ ಮತ್ತು ಈ ಕಟ್ಟಡಕ್ಕಾಗಿ ಎಷ್ಟೋ ಹಣವನ್ನು ಕೊಡುತ್ತಿದ್ದೀರಿ. ಅದೇನು ದುರ್ದೈವವೋ ಏನೋ ನಮ್ಮ ರಾಜ್ಯದಲ್ಲಿ ಹಳೆಯ ಮೈಸೂರಿನ ಮಂತ್ರಿಗಳು ಮಂತ್ರಿ ಮಂಡಲದಲ್ಲಿದ್ದುಕೊಂಡು ಮೂಕರಾಗಿಬಿಟ್ಟಿದ್ದಾರೆ. ಪಿ. ಡಬ್ಲ್ಯೂ. ಡಿ. ಮಂತ್ರಿಗಳು ಬೇರೆ ಭಾಗದವರು, ಇಂಡಸ್ಟ್ರಿ ಮಂತ್ರಿಗಳು ಇನ್ನೊಂದು ಭಾಗದವರು, ಹಣಕಾಸಿನ ಮಂತ್ರಿಗಳು ಬೇರೆಯ ಭಾಗದ ಕಡೆಯಿಂದ ಬಂದವರು ಹೀಗೆ ಹೊರಗಿನ ಭಾಗಗಳಿಂದ ಬಂದವರು ಇದ್ದು ಹಳೆಯ ಮೈಸೂರಿನ ಭಾಗದಿಂದ ಮಂತ್ರಿಗಳಾಗಿ ಬಂದಿರುವ ಸುಮಾರು 7-8 ಜನರು ಇದ್ದೂ ಹಳೆಯ ಮೈಸೂರಿನ ಏಳಿಗೆಗಾಗಿ ಅವರಿಂದ ಏನೂ ಮಾಡುವುದಕ್ಕಾಗದುದರಿಂದ ಅವರುಗಳು ಪೂರ್ತಿಯಾಗಿ ನಾಳೆ ಮಧ್ಯಾಹ್ನದ ಹೊತ್ತಿಗೆ ರಾಜೀನಾಮೆ ಕೊಟ್ಟು ಹೊರಬರಬೇಕು. ಹಳೆಯ ಮೈಸೂರಿನ ಸ್ಥಿತಿ ನೋಡಿ ಕಣ್ಣು ನೀರು ಬರುತ್ತಿದೆ.

Sri ALUR HANUMANTHAPPA (Deputy Minister for Minor Irrigation).—The Hon'ble Member is referring to the old Mysore State Ministers and new Mysore State Ministers. There cannot be any difference. It is the responsibility of the entire State.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ವೈಯುಕ್ತಿಕವಾಗಿ ಮಂತ್ರಿಗಳನ್ನು ಟೀಕಿಸುತ್ತಿಲ್ಲ. I have nothing to do with the formation of the Ministry. Let the Mysore Congress people go to dogs; I am not bothered.

ಶ್ರೀ ಬಿ. ಡಿ. ಜತ್ತಿ.—Dogs ಎಂದು ಹೇಳಬೇಡಿ. (ನಗು)

Sri C. J. MUCKANNAPPA.—All right, let them go to Lions. Let my friend Sri Jatti go to an elephant. ಹಳೆಯ ಮೈಸೂರಿನ ಮಂತ್ರಿಗಳಾಗಿ ಸರಕಾರದಲ್ಲಿದ್ದುಕೊಂಡು ನೀವು ಏನು ಮಾಡಿದ್ದೀರಿ ಎಂದು ಇಲ್ಲಿ ಕೇಳುತ್ತಿದ್ದೇನೆ? ನಮ್ಮ ಹಳೆಯ ಮೈಸೂರಿನ ಭಾಗದಲ್ಲಿ ಇರಿಗೇಷನ್ನು ಬಾಗದಲ್ಲಿಯಾಗಲೀ, ಪ್ರಾಜೆಕ್ಟುಗಳ ಭಾಗದಲ್ಲಾಗಲೀ, ರೋಡುಗಳ ಭಾಗದಲ್ಲಾಗಲೀ ಮಾತನಾಡುತ್ತ ನಮ್ಮ ಸ್ನೇಹಿತರು ಇಲ್ಲಿ ಏನನ್ನೂ ಹೇಳಲಿಲ್ಲ. ಆದರೆ ಬೇರೆ ಭಾಗಗಳಿಂದ ಬಂದವರು ಬಹಳ ಹಿಂದೆ ಇದ್ದಾರೆ ಎಂದು ಇಲ್ಲಿಗೆ ಇಷ್ಟು ರಸ್ತೆ ಸೇರಿಸಿದ್ದೇವೆ, ಇಷ್ಟು ಕಟ್ಟಡಗಳನ್ನು ಮಾಡಿದ್ದೇವೆ ಎಂದು ಹೇಳಿದರೇ ಹೊರತು ಹಳೆಯ ಮೈಸೂರಿನ ಒಳಭಾಗದ ವಿಚಾರದಲ್ಲಿ ಏನೂ ಹೇಳದೆ ಇಲ್ಲಿ ನಮ್ಮ ಮಾನ್ಯ ಉಪಮಂತ್ರಿಗಳಾದ ಶ್ರೀಮಾನ್ ಆಲೂರು ಹನುಮಂತಪ್ಪನವರು ಬುಗ್ಗೆಯಲ್ಲಿ ನೀರು ಮೇಲಕ್ಕೇಳುವಂತೆ ಇಲ್ಲಿ ಎದ್ದುನಿಂತುಕೊಂಡು ನಮ್ಮ ಮಂತ್ರಿಗಳಲ್ಲಿ ಭೇದಭಾಗಗಳೇನೂ ಇಲ್ಲ ಎಂದು ಹೇಳುತ್ತಾರೆ. ಸುಮ್ಮ ಸುಮ್ಮನೆ ಇಲ್ಲೇಕೆ ಕುಳಿತುಕೊಂಡು ಮಾತನಾಡುತ್ತೀರಿ? ನಮಗೂ ಎಲ್ಲ ವಿಚಾರಗಳು ಗೊತ್ತಿದೆ. ನಾನು ಇದನ್ನು ಇಲ್ಲೇಕೆ ಹೇಳುತ್ತೇನೆಂದರೆ ಇವೊತ್ತಿನ ದಿನ ಮೂರು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಹುಬ್ಬಳ್ಳಿಯಲ್ಲಿ ಮೆಡಿಕಲ್ ಕಾಲೇಜು ಕಟ್ಟಡ ಕಟ್ಟಿದಿರಿ. ಈಗತಾನೇ ನಮ್ಮ ಮಾನ್ಯ ಸದಸ್ಯರಾದ ಶ್ರೀಮತಿ ನಾಗರತ್ನಮ್ಮ ಅವರು ಒಂದು ಪ್ರಶ್ನೆ ಸಂದರ್ಭದಲ್ಲಿ ಹೇಳಿದ ಹಾಗೆ ನೀವು ಕಟ್ಟಿಸುತ್ತಿರುವಂತಹ ದೊಡ್ಡ ಸೌಧಗಳು ಹೇಗಿದೆಯೆಂದರೆ ಮೊದಲನೇ ಫ್ಲೋರಿನಲ್ಲಿ ನೀರು ಹಾಕಿದರೆ ಕೆಳಗಿನ ಅಂತಸ್ತುಗಳಿಗೆ ನೀರು ಸೋರುತ್ತಾ ಬರುತ್ತದೆ. ಹೀಗೆ ರೂಫಿಂಗು ಕೆಲಸ ಮಾಡಿದರೆ ಚೆನ್ನಾಗಿರುತ್ತದೆಯೇ? ಹೀಗೇಕೆ ಆಗುತ್ತಿದೆ ಎನ್ನುವುದನ್ನು ಪರಿಶೀಲಿಸಲು ಒಬ್ಬರು ರಿಟೈರ್ಡ್ ಜಡ್ಜರನ್ನು ಎನ್‌ಕ್ವೈರಿ ಮಾಡಲು ಹಾಕುತ್ತೀರೇನು? ಹಳೆಯ ಮೈಸೂರಿನ ಜನ ಇವೊತ್ತು ಏನು ಹೇಳುತ್ತಾರೆ ಎನ್ನುವುದನ್ನು ಕೇಳಿದರೆ ನಮ್ಮ ಹಣಕಾಸಿನ ಮಂತ್ರಿಗಳಾದ ಜತ್ತಿಯವರು ಅವರಿಗೆ ಬೇಕಾದವರಿಗೆ ಮಾತ್ರ ಹಣ ಕೊಡುತ್ತಾರೆ, ಹಳೆಯ ಮೈಸೂರಿನ ಭಾಗದ ಕೆಲಸವಾಗಿದ್ದರೆ, ಅದಕ್ಕೆ ಕಾಸು ಇಲ್ಲ ಎಂದು ಹೇಳುತ್ತಾರೆ. ಆದರೆ ಈ ಮೊದಲು ನಮ್ಮಲ್ಲಿ ಎಮೋಷನಲ್ ಇಂಟೆಗ್ರೇಷನ್ನು ಆಗಬೇಕೆಂದು ನೀವು ನಾವು ಎಲ್ಲರೂ ಹೇಳುತ್ತ ಒಂದಾಗಿಬಿಟ್ಟು ಸರಿಯಾದ ಒಂದು ಬುನಾದಿಯ ಮೇಲೆ ನಿಲ್ಲಬೇಕು ಎಂದು ಹೇಳತಕ್ಕ ಜನ ಈ ರೀತಿ ಏಕೆ ಡಿಸ್ಕ್ರಿಮಿನೇಷನ್ನು ಮಾಡುವುದಕ್ಕೇ ಹೊರಟಿದ್ದೀರಿ? ಹಿಂದೆ ರೀ ಆರ್ಗನೈಸೇಷನ್ನು ಆದಾಗ ಹೈದರಾಬಾದು ದೇಶದಲ್ಲಿ ಬ್ಯಾಕ್‌ವರ್ಡು ಆಗಿದ್ದ ಭಾಗ ತೆಲಂಗಾಣ ಏರಿಯಾಕ್ಕೆ ಬೇಕಾದ ಅನುಕೂಲಗಳನ್ನು ಮಾಡಿಕೊಳ್ಳಲು ಕೇಂದ್ರ ಸರಕಾರದವರು ಹಣ ಕೊಟ್ಟಿದ್ದಾರೆ. ಅದರಂತೆ ಅವರಿಗೆ ಬೇಕಾದ ಅನುಕೂಲತೆಗಳನ್ನು ಮಾಡುತ್ತಿದ್ದಾರೆ. ಅದೇ ರೀತಿ ಇಲ್ಲಿಯೂ ಬ್ಯಾಕ್‌ವರ್ಡ್ ಏರಿಯಾಗಳಿಗಾಗಿ ಖರ್ಚು ಮಾಡುವುದಕ್ಕೆ ಎಲ್ಲಿ ಹಣವನ್ನು ತರಿಸಿಕೊಂಡಿದ್ದೀರಿ? ಸುಮ್ಮನೆ ಇಲ್ಲಿ ಸೇತುವೆ ಮಾಡುತ್ತೇವೆ, ರೋಡುಗಳು ಮಾಡುತ್ತೇವೆ ಎಂದು ಚನ್ನಪಟ್ಟಣದ ಆಟದ ಸಾಮಾನುಗಳನ್ನು ತೋರಿಸುವಂತೆ ಬಾಯಿಯಲ್ಲಿ ಹೇಳುತ್ತೀರಿ. ಅದಕ್ಕಾಗಿಯೇ ಹಿಂದೆ ಈ ರಾಜ್ಯ ಬೇರೆ ಭಾಗದವರೊಂದಿಗೆ ಸೇರಬೇಕು ಎನ್ನುವ ವಿಚಾರ ಬಂದಾಗ ನಾವುಗಳು ಎರಡು ಕರ್ನಾಟಕವಾಗಬೇಕೆಂದು ಹೇಳಿದವರು. ಆದರೆ ಈಗ ಒಂದ ದ ಮೇಲೆ ಹಳೆಯ ಮೈಸೂರಿನ ಸ್ಥಿತಿ ಹೇಗಿದೆ ಎಂದರೆ ಜಲ್ಲಿ ಹಾಗೂ ಮಣ್ಣು ರಸ್ತೆಯಲ್ಲಿ ತುಂಬಿದುದು ಇನ್ನು ಎಷ್ಟು ವರ್ಷಗಳಲ್ಲಿ ಅಲ್ಲಿನ ಕೆಲಸಗಳು ಮುಗಿಯುತ್ತೋ ನಾವು ಹೇಳುವುದಕ್ಕೆ ಆಗುತ್ತಿಲ್ಲ. ಹರಿದು ಹಂಚಿ ಹೋಗಿರುವ ನಾಡನ್ನು ಒಂದು ಮಾಡುತ್ತೇವೆ ಎಂದು ಹೇಳಿದಂದೆ ರಾಜ್ಯವನ್ನು ವಿಶಾಲ ಮಾಡಿದ ಮೇಲೆ ಇವೊತ್ತಿನ ಸ್ಥಿತಿಗತಿಗಳು ಹೇಗೆ ಹರಿಯುತ್ತಿವೆ ಎನ್ನುವುದನ್ನು ನೀವು ಇಲ್ಲಿ ನಮಗೆ ಒದಗಿಸಿರುವ ಬಡ್ಜೆಟ್ಟಿನಿಂದಲೇ ಚೆನ್ನಾಗಿ ಗೊತ್ತಾಗುತ್ತದೆ. ಹಳೆಯ ಮೈಸೂರಿನಲ್ಲಿ ಎಷ್ಟು ರಸ್ತೆಗಳಾಗಿವೆ, ಎಷ್ಟು ಸೇತುವೆಗಳಾಗಿವೆ ಅಥವಾ ಹಳೆಯ ಮೈಸೂರಿನಲ್ಲಿ ಹಾಕಿರುವ ಅಡಿಗಲ್ಲುಗಳ ಕೆಲಸಗಳನ್ನಾದರೂ ಪೂರ್ತಿ ಮಾಡಿದ್ದೀರಾ? ಯಾವ ಕೆಲಸಗಳನ್ನೂ ಮಾಡಿಲ್ಲ. ಅಲ್ಲದೆ ಇಲ್ಲಿ ಆಶ್ವಾಸನೆ ಮಾಡಿದ ಕೆಲಸಗಳನ್ನಾದರೂ ಪೂರೈಸಿದ್ದೀರಾ ಎಂದರೆ ಅದೂ ಕೂಡ ಇಲ್ಲ. ಇದು ನನ್ನ ಅಭಿಪ್ರಾಯವಲ್ಲ. ನಾನೂ ಕೂಡ ಹಿಂದೆ ಈ ದೇಶವನ್ನು ಹರಿದು ಹಂಚುವಾಗ ಒಂದು ಕರ್ನಾಟಕ ಬೇಡ ಎರಡು ಕರ್ನಾಟಕವಾಗಬೇಕು ಎಂದು ಹೇಳಿದವರಲ್ಲಿ ಒಬ್ಬ. ಹಾಗೆ ಎರಡು ರಾಜ್ಯಗಳಾಗಬೇಕು ಎಂದು ನಾನು ಹಿಂದೆ ಹೇಳುತ್ತಿದ್ದುದಕ್ಕೆ, ಇವೊತ್ತು ಪುಷ್ಟೀಕರಣ ಈ ಸಭೆಯಲ್ಲಿ ಮತ್ತು ಹೊರಗೇ ಸಾಕಾದಷ್ಟು ಕೇಳಿ ಬರುತ್ತಿದೆ. ಜನ ನಿಮ್ಮಲ್ಲೇ ನಂಬಿಕೆ ಇಟ್ಟುಕೊಂಡು ಅನುಕೂಲ ಮಾಡುತ್ತಾರೆ ಎನ್ನುವ ನಂಬಿಕೆಯನ್ನಿಟ್ಟವರಿಗೆ ಸಾಕ್ಷಿಯಾಗಿ ನೀವೇನು ಮಾಡುತ್ತಿದ್ದೀರಿ ಎಂದರೆ ಅಪಾಯಿಂಟುಮೆಂಟುಗಳನ್ನು ಕೊಡುವುದರಲ್ಲಿ, ಪ್ರೊಮೋಷನ್ನು ಕೊಡುವುದಲ್ಲಿ, ಸ್ಕೂಲುಗಳಿಗೆ ಗ್ರ್ಯಾಂಟುಗಳನ್ನು ಕೊಡುವುದರಲ್ಲಿ, ಬಿಲ್ಡಿಂಗುಗಳನ್ನು ಕೊಡುವುದರಲ್ಲಿ ಮತ್ತು ಮಂತ್ರಿಮಂಡಲದೊಳಗೆ ಏನು ಮಾಡಿದ್ದೀರಿ?

[*Interruption*]

ಈ ರೀತಿಯಾಗಿ ತಾವು ಮಾಡಬಾರದು ಎಂದು ಅದಕ್ಕಾಗಿ ಇಲ್ಲಿ ಹೇಳುತ್ತಿದ್ದೇನೆ.

12-00 noon

ನಾನು ಒಂದು ವಿಷಯವನ್ನು ನಮ್ಮ ಮಾನ್ಯ ಸಚಿವರಾದ ವೀರೇಂದ್ರ ಪಾಟೀಲರಿಗೆ ಕೇಳುತ್ತೇನೆ. ಅವರು ಇಷ್ಟು ಜನರಿಗೆ ಬಡ್ತಿ ಕೊಡುವಾಗ ಯಾರ್ಯಾರಿಗೆ ಏನೇನು ಮಾಡಿದ್ದಾರೆ? ಈ ವಿಚಾರದಲ್ಲಿ ನಾನೇನಾದರೂ ಹೇಳಿದರೆ ಅವರಿಗೆ ಕೋಪ ಬರುತ್ತದೆ, ಇವನು ಯಾವಾಗಲೂ ಜಾತೀ ವಿಚಾರವನ್ನೇ ಎತ್ತಿಹಿಡಿದು ಮಾತನಾಡುತ್ತಿದ್ದಾನೆ ಎಂದು ಅವರ ಮನಸ್ಸಿನಲ್ಲಿ ಒಂದು ಭಾವನೆ ಬರಬಹುದು. ನಾನು ಯಾವ ವಿಷಯವನ್ನೇ ಆಗಲಿ ಸುಮ್ಮನೆ ಮನಸ್ಸಿನಲ್ಲಿಟ್ಟುಕೊಂಡು ಹುಳ ಹತ್ತಿದ ಹಣ್ಣು ಕೊಳೆಯುವಂತೆ ಕುಳಿತುಕೊಳ್ಳತಕ್ಕವನಲ್ಲ. ಮನಸ್ಸಿನಲ್ಲಿರತಕ್ಕ ವಿಚಾರಗಳನ್ನು ಆಗಿಂದಾಗ್ಗೆ ಅಲ್ಲೇ ಬಾಯಿಬಿಚ್ಚಿ ಹೇಳತಕ್ಕದ್ದು ನನ್ನ ಸ್ವಭಾವ. ನಾನು ಈಗ ಅವರ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ಒಬ್ಬ ಆನರರಿ ಅಸಿಸ್ಟೆಂಟ್ ಇಂಜಿನಿಯರಿಗೆ ಎಗ್ಜಿಕ್ಯುಟೀವ್ ಇಂಜಿನಿಯರ ಬಡ್ತಿ ಕೊಡಲು ಇವರು ಎಷ್ಟು ಜನರಿಗೆ ಅನ್ಯಾಯಮಾಡಿದ್ದಾರೆ ಹೇಳಲಿ. ಎಗ್ಜಿಕ್ಯುಟೀವ್ ಇಂಜಿನಿಯರಾಗತಕ್ಕ ಅವಕಾಶವಿದ್ದ ಅನೇಕ ಜನ ಸೀನಿಯರ್ ಹ್ಯಾಂಡ್ಸ್‌ಗಳಿಗೆ ಅನ್ಯಾಯಮಾಡಿ ಒಬ್ಬ ಅಸಿಸ್ಟೆಂಟ್ ಇಂಜಿನಿಯರು ಶ್ರೀಮಾನ್ ಜತ್ತಿಯವರ ಮನೆಯನ್ನು ಕಟ್ಟಿಸುವಾಗ ಅಲ್ಲಿ ಸೂಪರ್‌ವಿಜನ್ ಮಾಡಿದರೆಂಬ ನೆಪದಲ್ಲಿ ಅವರಿಗೆ ಈಗ ಪ್ರಮೋಷನ್ ಕೊಟ್ಟಿಲ್ಲವೇ? ಶ್ರೀಮಾನ್ ಜತ್ತಿಯವರೇ ಹೇಳಲಿ, ಅವರಿಲ್ಲಿದ್ದಾರೆ.

ಶ್ರೀ ಬಿ. ಡಿ. ಜತ್ತಿ.—ನನ್ನ ಮನೆಯನ್ನು ಯಾರೂ ಸೂಪರ್‌ವೈಜ್ ಮಾಡಲಿಲ್ಲ. ನನ್ನ ಮನೆಯ ಸೂಪರ್‌ವಿಜನ್ನನ್ನು ನಾನೂ ಮತ್ತು ನನ್ನ ಹೆಂಡತಿ ಇಬ್ಬರೇ ಮಾಡಿದ್ದೇವೆ. ಶ್ರೀಮಾನ್ ಮುಕ್ಕಣ್ಣಪ್ಪನವರೇ ಅಲ್ಲಿಗೆ ಬಂದು ನೋಡಿದರೆ ನಮ್ಮ ಮನೆಯನ್ನು ಯಾವ ಇಂಜಿನಿಯರೂ ಸೂಪರ್‌ವೈಜ್‌ಮಾಡಿಲ್ಲ ಎಂಬುದು ಅವರಿಗೇ ಗೊತ್ತಾಗುತ್ತದೆ. ಅವರಿಂದ ಸೂಪರ್‌ವೈಜ್ ಮಾಡಿಸಿದ್ದರೆ ಈಗ ಆಗಿರತಕ್ಕ ಖರ್ಚಿಗಿಂತ ಇನ್ನೂ 10 ಪಟ್ಟು ಜಾಸ್ತಿಯಾಗುತ್ತಿತ್ತು ನಾನೊಂದು ದಿವಸ ಅವರನ್ನು ನನ್ನ ಮನೆಗೆ ಊಟಕ್ಕೆ ಕರೆಯುತ್ತೇನೆ. ಅವರು ಬಂದು ಆಗಲಾದರೂ ನೋಡಿ ಅವರು ಹೇಳಿದ್ದೆಲ್ಲಾ ಸರಿಯಲ್ಲ ಎಂಬುದನ್ನು ಅವರೇ ತಿಳಿದು ಕೊಳ್ಳಲಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರು ಸುಮ್ಮನೆ ಹೇಳುತ್ತಿದ್ದಾರೆ. ನನ್ನನ್ನು ಒಂದು ದಿವಸವಾದರೂ ಅವರ ಮನೆಗೆ ಊಟಕ್ಕೆ ಕರೆಯಲಿಲ್ಲ. ಅಂತೂ ಒಬ್ಬ ಆನರೆರಿ ಅಸಿಸ್ಟೆಂಟ್ ಇಂಜಿನಿಯರನ್ನು ಎಗ್ಜಿಕ್ಯುಟೀವ್ ಇಂಜಿನಿಯರನ್ನಾಗಿ ಮಾಡಿ ಮುಂದೆ ಆತನನ್ನು ಸೂಪರಿಂಟೆಂಡಿಂಗ್ ಇಂಜಿನಿಯರನ್ನಾಗಿ ಮಾಡಬೇಕೆಂದು ಪ್ರಯತ್ನಗಳನ್ನು ಮಾಡುತ್ತಿದ್ದುದರಿಂದ ಈಗ ನಮ್ಮ ಹೈಕೋರ್ಟಿನಲ್ಲಿ ನಾಲ್ಕು ಜನರು ರಿಟ್ ಕೇಸುಗಳನ್ನು ಹಾಕಿದ್ದಾರೆ. ಕೊಡಗಿನವರೊಬ್ಬರಿಗೆ ಈ ರೀತಿ ಬಡ್ತಿ ಕೊಟ್ಟಿದ್ದಾರೆ. ಹೀಗೆಲ್ಲಾ ಮಾಡುತ್ತಿದ್ದರೆ ಈ ಇಲಾಖೆಯಲ್ಲಿ ಕೆಲಸಮಾಡತಕ್ಕವರಿಗೆ ಇನ್ನೆಲ್ಲಿ ತೃಪ್ತಿಯಿರುತ್ತದೆ? ಇನ್ನೆಲ್ಲಿ ಸಮಾಧಾನವಿರುತ್ತದೆ? ಇದ್ದ ವಿಚಾರವನ್ನು ಇದ್ದಹಾಗೇ ಹೇಳಿದರೆ ನಾನು ಫ್ರಸ್ಟ್ರೇಟಾಗಿ ಮಾತನಾಡುತ್ತಿದ್ದಾನೆ ಎನ್ನುತ್ತಾರೆ. ಸರ್ಕಾರದವರು ಮಾಡತಕ್ಕ ಆರ್ಡರುಗಳೂ, ಅವರು ಅನುಸರಿಸತಕ್ಕ ನೀತಿಗಳೂ, ಅವರ ಧೋರಣೆಗಳೂ ಜನರನ್ನು ಫ್ರಸ್ಟ್ರೇಟ್ ಮಾಡುತ್ತಿವೆ. ನಾನು ಹೇಳಿದಂಥ ವ್ಯಕ್ತಿಯನ್ನು ಮೊದಲು ಹಾಸನಜಿಲ್ಲೆಗೆ ಎಗ್ಜಿಕ್ಯುಟೀವ್ ಇಂಜಿನಿಯರನ್ನಾಗಿ ಮಾಡಿದರು. ಈಗ ಹಾಲಿ ಅವರು ಓರ್‌ಕ್ಯಾರಿಂಗ್ ರೋಡಿನ ಸೂಪರ್‌ವಿಷನಲ್ಲಿದ್ದಾರೆ. ನಾನು ಮಾತನಾಡುತ್ತಿದ್ದರೆ ನಮ್ಮ ಅರಣ್ಯ ಮಂತ್ರಿಗಳು ಹೇಳಿ ಹೇಳಿ ಎನ್ನುತ್ತಿದ್ದಾರೆ. ಆದರೆ ನಾನೇನೂ ಇಲ್ಲಿಗೆ ಹರಿಕಥೆ ಮಾಡುವುದಕ್ಕೆ ಬಂದಿಲ್ಲ. ಅವರೇನು ಈ ದಿವಸ ಒಂದು ಸ್ಥಾನದಲ್ಲಿ ಕುಳಿತಿದ್ದಾರೋ ಆ ಸ್ಥಾನಕ್ಕೆ ಒಂದು ಬೆಲೆ ಇದೆ. ರವಿಯಾಕಾಶಕೆ ಭೂಷಣಂ ರಜನಿಗಂ ಚಂದ್ರಂ ಮಹಾಭೂಷಣಂ, ಕವಿಯಾಸ್ಥಾನಕ್ಕೆ ಭೂಷಣಂ, ಎಂಬುದಾಗಿ ಹೇಳಿದ್ದಾರೆ. ಹಾಗೆ ನೀವೇನು ಈ ದಿವಸ ಅಲ್ಲಿ ಕುಳಿತಿದ್ದೀರಿ, ಆ ಸ್ಥಾನಕ್ಕೆ ನೀವು ಭೂಷಣರಾಗಿರಬೇಕು, ನಾವಿಲ್ಲಿ ಮಾತನಾಡತಕ್ಕ ಸ್ಥಾನಕ್ಕೂ ಹಾಗೇ. ಈ ಸಭೆಯಲ್ಲಿ ನೀವೂ ನಾವೂ ಭೂಷಣರಾಗಿದ್ದರೆ, ಅದು ದೇಶಕ್ಕೆ, ರಾಜ್ಯಕ್ಕೆ ಭೂಷಣ. ಹಾಗಿಲ್ಲದೆ ಹೋದರೆ ಜನರು ಕಲ್ಲಿನಿಂದ ಹೊಡೆದು ನಮ್ಮನ್ನು ಇಲ್ಲಿಂದ ಓಡಿಸುತ್ತಾರೆ. ಆದ್ದರಿಂದ ಮಂತ್ರಿಗಳು ಇಲ್ಲಿ ಏನೇ ವಿಚಾರ ಹೇಳಿದರೂ ಅದು ದೇಶದ ಏಳಿಗೆಗೆ ಅನುಕೂಲವಾಗುವಂತಿರಬೇಕು. ಆ ರೀತಿಯಾಗಿ ನೀವೂ ನಾವೂ ಇಲ್ಲಿ ದುಡಿಯಬೇಕು. ನಾಲ್ಕಾರು ಖಾತೆಗಳ ಆಡಳಿತ ಭದ್ರವಾಗಿದ್ದರೆ ಆಗ ರಾಜ್ಯವೂ ಸುಭಿಕ್ಷವಾಗಿರುತ್ತದೆ. ಆದರೆ ಇಲ್ಲಿ ಹಾಗಿಲ್ಲ. ಈ ರಾಜ್ಯ ಈ ವಿಚಾರದಲ್ಲಿ ದುರ್ದೈವಿ. ನಾನು ಈಗ ತಮ್ಮಲ್ಲಿ ಏನು ಕೇಳಿಕೊಳ್ಳುತ್ತಿದ್ದೇನೆಂದರೆ—ಈ ರಾಜ್ಯ ಎರಡಾಗಬೇಕು ಎನ್ನುವ ಒಂದು ಪರಿಸ್ಥಿತಿಯೇನಿದೆ ಅದು ಬಾರದಿರುವಂತೆ ಆಗಬೇಕೆಂಬುದಾಗಿದ್ದರೆ ತಾವು ಎಲ್ಲಾ ಪ್ರದೇಶಗಳನ್ನೂ ಒಂದೇ ಸಮನಾಗಿ ನೋಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಜಿ. ದೊಡ್ಡಮೇಟಿ (ರೋಣ).—ನಿಮಗೆ ಮನಸ್ಸಿಗೆ ಬಂದುದನ್ನು ನೀವು ಹೇಳುತ್ತಿದ್ದೀರಿ. ಹೇಳಿ, ಹೇಳಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶ್ರೀಮಾನ್ ದೊಡ್ಡಮೇಟಿಯವರು ರಾಜ್ಯ ಒಂದೇ ಇರಬೇಕೆಂದು ಹೇಳುತ್ತಿದ್ದರೆ, ಮುಕ್ಕಣ್ಣಪ್ಪ ರಾಜ್ಯವನ್ನು ಎರಡಾಗಬೇಕೆಂದು ಹೇಳುತ್ತಿದ್ದಾನೆ ಎಂದು ಹೇಳುತ್ತೇನೆ...

ಶ್ರೀ ಎ. ಕೃಷ್ಣಶೆಟ್ಟಿ (ಮಂಗಳೂರು-2).—ಅಧ್ಯಕ್ಷರೇ ನಾವು ಮೊದಲನೆಯಬಾರಿಗೆ ಇಲ್ಲಿಗೆ ಬಂದು ಪ್ರಮಾಣವಚನವನ್ನು ಸ್ವೀಕರಿಸುವ ಕಾಲಕ್ಕೆ ನಾವು ರಾಜ್ಯಾಂಗಕ್ಕೆ ವಿರುದ್ಧವಾದ ಯಾವ ಕಾರ್ಯವನ್ನೂ ಮಾಡುವುದಿಲ್ಲವೆಂದು ಪ್ರಮಾಣವಚನವನ್ನು ಸ್ವೀಕರಿಸಿದ ನಂತರ ಈ ದಿವಸ ಈಗ ಮಾತನಾಡುತ್ತಿರುವ ಮಾನ್ಯ ಸದಸ್ಯರು ಈ ರಾಜ್ಯವನ್ನು ಎರಡು ಮಾಡಬೇಕೆಂದು ಹೇಳುವುದು ಸರಿಯೇ ?

Sri SANJEEVANATH AIKAL.—I want to support the point of order, I wish to speak a few words.

ಈ ರಾಜ್ಯವನ್ನು ಶ್ರೀ ಮುಕ್ಕಣ್ಣಪ್ಪನವರು ಹಳೇ ಮೈಸೂರು, ಹೊಸ ಮೈಸೂರು, ಎಂದು ಎರಡು ಭಾಗಮಾಡಬೇಕೆಂದು ಹೇಳುತ್ತಿದ್ದಾರೆ. ಇದು ರಾಜ್ಯಾಂಗಕ್ಕೆ, ನಾವು ತೆಗೆದುಕೊಂಡಿರತಕ್ಕ ಪ್ರಮಾಣವಚನಕ್ಕೆ ವಿರುದ್ಧವಾಗಿಲ್ಲವೇ ?

...that means under the presumption that there is going to be two States old Mysore State and new Mysore State—that goes against the oath we have taken as pointed out by Sri Krishna Setty. We have taken the oath that Mysore State is one. We have not thought of dividing the State into two. The words expressed by the Hon'ble Member Sri Muckannappa goes against the oath of allegiance taken in this House. Whether it is in order to say that, is the point.

Mr. SPEAKER.—I will examine that position and give a ruling. Sri Muckannappa has already taken 18 minutes.

Sri C. J. MUCKANNAPPA.—Sir, out of that four minutes were taken by interruptions from Treasury Benches and other Hon'ble Members behind me. If you can give me those four minutes, I will conclude, Sir.

Mr. SPEAKER.—To a large extent the member himself invited those interruptions. I heard every word of what he said. He asked the Minister for Finance with regard to the employment of an engineer. I found it so interesting that I thought that I should not deny myself the pleasure of seeing him also talk like that. Anyway I will give the member two minutes more and he should close.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಇಲ್ಲಿಯವರೆಗೇನು ಹೇಳಿದ್ದೇನೋ ಅದಕ್ಕೆಲ್ಲಾ ನನ್ನಲ್ಲಿ ಅಂಕಿ ಅಂಶಗಳಿವೆ. ನಾನು ಹೇಳಿರತಕ್ಕದ್ದೆಲ್ಲಾ ಸರಿ ಎಂಬುದಾಗಿ ನಾನು ಸಾಬೀತುಮಾಡಿ ಕೊಡುತ್ತೇನೆ. ಇಲ್ಲವಾದರೆ ನಾನು ಈ ವಿಚಾರದಲ್ಲಿ ಇಷ್ಟು ಖಚಿತವಾಗಿ ಮಾತನಾಡುತ್ತಿರಲಿಲ್ಲ. ಈ ದಿವಸ ಸರ್ಕಾರದವರು ನಮ್ಮ ಕೈಗೆ ಕೊಟ್ಟಿರತಕ್ಕ ಈ ಆಯವ್ಯಯ ಪಟ್ಟಿಯೇನಿದೆ ಇದರಲ್ಲಿ ಹಳೇ ಮೈಸೂರು ಭಾಗಕ್ಕೆ ಇದರ ಅಭಿವೃದ್ಧಿಗಾಗಿ ಇಂತಿಷ್ಟು ಹಣವನ್ನು ತೆಗೆದಿಡಲಾಗಿದೆ ಎಂದು ಈ ನಮ್ಮ ಸ್ನೇಹಿತರುಗಳ್ಯಾರಾದರೂ ತೋರಿಸಿ ಕೊಟ್ಟರೆ ಇಲ್ಲಿಯವರೆಗೂ ನಾನು ಹೇಳಿದ್ದನ್ನೆಲ್ಲಾ ತಪ್ಪೆಂದು ಒಪ್ಪಿಕೊಂಡು ಅವರೆಲ್ಲರಿಗೂ ನಾನು ತಲೆಬಾಗುತ್ತೇನೆ. ಈಗ ನನಗೆ ಈ ಬಗ್ಗೆ ಉಂಟಾಗಿರತಕ್ಕ ಅನುಮಾನ ಸಂದೇಹಗಳನ್ನು ನಿವಾರಣೆಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆದರೆ ನಾನೇನು ಆ ಡಿ. ಎಂ. ಕೆ. ಪಾರ್ಟಿಯ ಹಾಗೆ ಅಥವಾ ದ್ರಾವಿಡ ಖಜಗಂ ಹಿಂದೂಸ್ಥಾನವನ್ನು ಒಡೆಯಬೇಕೆಂದು ಹೇಳತಕ್ಕವನಲ್ಲ. ಆದರೆ ನಾನು ಹೇಳುತ್ತಿರುವುದು ಈ ಕನ್ನಡ ಮಾತನಾಡತಕ್ಕ ಜನರಲ್ಲ ಅವರು ಅಲ್ಲಿರಲಿ, ನಾವು ಇಲ್ಲಿರುತ್ತೇವೆ ಎಂದಿಷ್ಟು ಹೇಳುತ್ತೇನೆ. ನಾನೀದಿವಸ ನಮ್ಮ ರಾಜ್ಯಾಂಗಕ್ಕೆ ವಿರೋಧವಾಗಿ ವರ್ತಿಸಬೇಕೆಂದಿಲ್ಲ. ರಾಜ್ಯಾಂಗದಲ್ಲಿ ಏನು ಒಂದು ನಿಲುವಿದೆಯೋ ಅದಕ್ಕೆ ನಾನು ತಲೆಬಾಗಿ ನಡೆಯುತ್ತೇನೆ. ಹಿಂದೂ ದೇಶವನ್ನು ಇಬ್ಭಾಗಮಾಡಬೇಕೆಂಬ ಆಸೆ ನನಗಿಲ್ಲ. ಈ ಬಗ್ಗೆ ಯಾರೂ ನನ್ನ ಬಗ್ಗೆ ತಪ್ಪು ಅರ್ಥಮಾಡಿಕೊಳ್ಳಬಾರದು. ಇನ್ನಾದರೂ ಹಳೇ

ಮೈಸೂರಿನ ಅಧಿಕಾರಿಗಳಿಗೆ ಅನ್ಯಾಯವಾಗದಂತೆ ಸರಿಯಾದ ರೀತಿಯಲ್ಲಿ ಕೆಲಸಗಳನ್ನು ನಡೆಸ ಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡ ವುದಕ್ಕೆ ಅವಕಾಶಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆ ಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎ. ಜಿ. ದೊಡ್ಡ ಮೇಟಿ (ರೋಣ್).—ಸ್ವಾಮಿ ಈಗ ನಮ್ಮ ಮುಂದೆ ಇರತಕ್ಕ ಲೋಕೋಪಯೋಗಿ ಶಾಖೆಯ ಬೇಡಿಕೆಗಳನ್ನು ಸಮರ್ಥನೆಮಾಡುವ ಮುನ್ನ ಈಗ ಈ ಬೇಡಿಕೆಗಳಿ ಗೇನು ದುಡ್ಡನ್ನು ಕೇಳಿದ್ದಾರೆ ಅದರ ಬಗ್ಗೆ ಈಗ ನಮ್ಮ ಎದುರಿಗಿರತಕ್ಕ ಪುಸ್ತಕದಲ್ಲಿ ಒಂದು ವಿಚಾರ ಹೇಳಿದ್ದಾರೆ. ಇದನ್ನು ನೋಡಿದರೆ ಪ್ರತಿಯೊಂದು ವರ್ಷವೂ ಈ ಇಲಾಖೆಗೊಂದು ರೋಗ ಹತ್ತಿ ದಂತೆ ಕಾಣುತ್ತಿದೆ. 1961-62 ರಿಂದ ಇಲ್ಲಿಯವರೆಗೂ ಅಂದರೆ ಈ ಕಳೆದ ಮೂರು ವರ್ಷಗಳಲ್ಲೂ ಪ್ರತಿ ಸಾಲಿನ ಬಡ್ಜೆಟ್ಟಿನ ಬೇಡಿಕೆಗಳಲ್ಲೂ ಹಣ ವರ್ಷೆವರ್ಷೇ ಬಹಳ ಕಡಿಮೆಯಾಗಿ ಹೋಗುತ್ತಿದೆ. ಆದರೆ ಒಟ್ಟಿನಲ್ಲಿ ಈ ಬಡ್ಜೆಟ್ಟಿನಲ್ಲಿ ಸಾಕಷ್ಟು ಹಣವನ್ನೊದಗಿಸಿಲ್ಲ ಎಂದು ನಾನು ಬಹಳ ಚಿಂತಾಜನಕ ದಿಂದ ಹೇಳಬೇಕಾಗಿದೆ. ಈ ವಿಚಾರದಲ್ಲಿ ನಮ್ಮ ಹಣಕಾಸಿನ ಮಂತ್ರಿಗಳು ಇಷ್ಟೇಕೆ ಕಂಜೂಸ್ ಆದರೆಂಬುದು ಗೊತ್ತಿಲ್ಲ.

ಅಧ್ಯಕ್ಷರು.—ತಾವು ಏನು ಪದ ಬಳೆಸಿದ್ದು?

ಶ್ರೀ ಎ. ಜೆ. ದೊಡ್ಡ ಮೇಟಿ.—ಈ ಒಂದು ದೃಷ್ಟಿಯಿಂದ ಈ ಬಾಬಿಗಿನ್ನೂ ಹೆಚ್ಚು ಹಣವನ್ನೊದ ಗಿಸಬೇಕೆಂದು ಕೇಳುತ್ತೇನೆ. ದುಡ್ಡೇ ಇಲ್ಲವೆಂದರೆ ಕೆಲಸಗಳನ್ನು ಹೇಗೆ ಮಾಡಬೇಕು ? ಧಾರವಾಡದ ಜನರು ಅನೇಕ ಬೇಡಿಕೆಗಳನ್ನು ತಮ್ಮ ಮುಂದಿಟ್ಟಿದ್ದಾರೆ. ಅವರಿಗೆ ಬಹಳ ಅನ್ಯಾಯವಾಗಿದೆ.... ಇನ್ನೂ ಗ್ರಾಮಾಂತರ ಪ್ರದೇಶಗಳಲ್ಲಿ ಬಹಳ ಕೆಲಸಗಳು ಆಗಬೇಕಾಗುತ್ತದೆ. ಮಾರ್ಗ ಸೌಕರ್ಯ ಗಳು ಹೆಚ್ಚಾಗಬೇಕು. ರೈತರ ಕಲ್ಯಾಣ, ಒಕ್ಕಲಿಗರ ಹಿತರಕ್ಷಣೆಯಾಗಬೇಕು ನಿಶ್ಚಯವಾಗಿ ಅವರು ಬೆಳೆದಂತಹ ಬೆಳೆಗಳಿಗೆ ತಕ್ಕ ಒಳ್ಳೆಯ ಬೆಲೆ ಬರಬೇಕು ಎಂಬುದಾಗಿ ನಾನು ಹೇಳುತ್ತೇನೆ. ಒಟ್ಟಿನಲ್ಲಿ ಗ್ರಾಮಾಂತರ ಪ್ರದೇಶಗಳು ಉತ್ತಮಗೊಳ್ಳಬೇಕು. ಇವರು ಕೊಟ್ಟಿರತಕ್ಕ ಅಂಕಿಅಂಶ ಗಳನ್ನು ನೋಡಿದರೆ ಸುಮಾರು 60-70 ಮೈಲಿಗಳಷ್ಟು ಹೊಸ ಮಾರ್ಗಗಳನ್ನು ತೆಗೆದುಕೊಂಡಿ ದ್ದಾರೆಂಬುದಾಗಿ ಗೊತ್ತಾಗುತ್ತದೆ. ಆದರೆ ಆ ರೀತಿ ಅವರು ತೆಗೆದುಕೊಂಡು ಮಾಡಿರತಕ್ಕ ರಸ್ತೆ ಗಳ ಪರಿಸ್ಥಿತಿ ಈಗ ಏನಾಗಿದೆಯೆಂಬುದನ್ನು ಖಂಡಿತವಾಗಿ ಅವರು ಆಲೋಚನೆಮಾಡುವುದಿಲ್ಲ. ನನಗೆ ಗೊತ್ತಿರುವ ಹಾಗೆ ಇವರು ರೋಣ ತಾಲ್ಲೂಕಿನಲ್ಲಿ ಕೊಟ್ಟಿರುವ 50 ಮೈಲಿಗಳೊಳಗೆ 3-4 ಮೈಲಿಗಳ ಮಾರ್ಗವನ್ನು ಮಾತ್ರ ಬಿಟ್ಟರೆ. ಇನ್ನುಳಿದದ್ದೆಲ್ಲಾ ಯಾವ ಮಾರ್ಗವು ಉತ್ತಮ ಸ್ಥಿತಿ ಯಲ್ಲಿಲ್ಲ. ರಸ್ತೆಗಳೇ ಸರಿಯಾಗಿಲ್ಲ. ಅನೇಕ ನಾಲೆಗಳಿಗೆ ಸೇತುವೆಗಳನ್ನೇ ಕಟ್ಟಿಲ್ಲ. ರಾಯಚೂರು-ಬಿದರ್ ರಸ್ತೆಗಾಗಿ 1961-62 ನೇ ಇಸವಿಯೊಳಗೆ ಬರಗಾಲದಲ್ಲಿ ಬಹಳ ದುಡ್ಡನ್ನು ಖರ್ಚುಮಾಡಿ ದ್ದಾರೆ. ಆದರೆ ಬರಗಾಲ ಪ್ರದೇಶಗಳಿರುವ ಕಡೆಗಳಲ್ಲಿ ಸರ್ಕಾರದವರು ಇಂತಹ ಮಾರ್ಗಗಳಿ ಗಾಗಿ ಹೆಚ್ಚಿನ ಹಣವನ್ನು ಖರ್ಚುಮಾಡಿ ಜನರನ್ನು ತೊಂದರೆಗೆ ಒಳಗಾಗದ ಹಾಗೆ ಮಾಡ ಬೇಕೆಂದು ಹೇಳುತ್ತೇನೆ. ಇನ್ನು 1956-57 ನೇ ಇಸವಿಯಲ್ಲಿ ಸಿರೂರ್-ಹೊಲಿಯಾರ್ ಎಂಬ ಮಾರ್ಗ ಒಂದಾಯಿತು. ಇನ್ನೂ ಸರಿಯಾಗಿ ಇದು ನಿರ್ಮಾಣವಾಗಬೇಕಾಗಿದೆ. 1857-58 ರಲ್ಲಿ ಒಬ್ಬ ಪ್ರವಾಸಿಕ ಇಲ್ಲಿಗೆ ಬಂದು ಇಲ್ಲಿ ಅತ್ಯುತ್ತಮವಾದ ರಸ್ತೆಯಾಗಬೇಕು ಇದರಿಂದ ಸುತ್ತಲಿರುವ ಪ್ರದೇಶ ಗಳಿಗೆ ಹೆಚ್ಚಿನ ಸೌಕರ್ಯವಿದೆಯೆಂದು ಹೇಳಿದ್ದನಂತೆ. ಹಿಂದೆ ಶ್ರೀಮಾನ್ ವೀರಣ್ಣ ಗೌಡರು ಪಿ. ಡಬ್ಲ್ಯು. ಡಿ. ಮಂತ್ರಿಯಾಗಿದ್ದಾಗಲೇ ಅವರು ಈ ಕಾಮಗಾರಿಯನ್ನು ಮಾಡುತ್ತೇವೆಂದು ಹೇಳಿ ದ್ದರು. ಆಗಲೂ ಈ ಕೆಲಸವಾಗಲಿಲ್ಲ. ಬೇಕಾದಷ್ಟು ಹಣ ಖರ್ಚು ಮಾಡಿದ್ದಾರೆ. ಜನಗಳ ಕಂದಾಯದ ದುಡ್ಡನ್ನು ಬೇಕಾದಷ್ಟು ವ್ಯಯಮಾಡಿದ್ದಾರೆ. ಇದರ ವಿಷಯದಲ್ಲಿ ಅನೇಕಸಾರಿ ಸೆಕ್ರೆಟರಿಗಳು ಮತ್ತು ಮಂತ್ರಿಗಳು ಭೇಟಿಮಾಡಿದ್ದಾರೆ. ಅವರೆಲ್ಲರ ಭೇಟಿಗಾಗಿ ಕೇವಲ ಸುಮಾರು ಒಂದೂ-ಒಂದೂವರೆ ಸಾವಿರ ರೂಪಾಯಿಗಳು ಖರ್ಚಾಗಿರಬೇಕು. ಅದನ್ನು ಏತಕ್ಕೆ ಇವರು ಈ ಬಡ್ಜೆಟ್‌ನಲ್ಲಿ ಹಾಕಲಿಲ್ಲವೋ ಗೊತ್ತಿಲ್ಲ. ಹೀಗಾಗಿ ಅನೇಕ ಕೆಲಸಗಳು ಗ್ರಾಮಾಂತರ ಪ್ರದೇಶಗಳಲ್ಲಿ ನಿಂತು ಹೋಗಿವೆ. ಇದರಲ್ಲಿ ಹೊಸ ಮೈಸೂರು, ಹಳೆಯ ಮೈಸೂರು ಎಂಬ ವಿಚಾರ ಬೇಡ. ಹೊಸ ಮೈಸೂರಿನ ಗ್ರಾಮಾಂತರ ಪ್ರದೇಶಗಳಲ್ಲಿ ಮಾರ್ಗ ಸೌಕರ್ಯಗಳನ್ನು ಮಾಡಿಕೊಂಡರೆ ನಿಜ ವಾಗಿ ಹಳೆಯ ಮೈಸೂರಿನ ಅನೇಕ ಗ್ರಾಮಾಂತರ ಪ್ರದೇಶಗಳಿಗೆ ಸಂಬಂಧವಿರುತ್ತದೆ. ಎಲ್ಲಿ ಹೋದರೂ ಇಡೀ ಕರ್ಣಾಟಕದೊಳಗೆ ಗ್ರಾಮಾಂತರ ಪ್ರದೇಶಗಳಲ್ಲಿ ಮಾರ್ಗ ಸೌಕರ್ಯಗಳು ಬಹಳ ಚಲೋ ಇರಬೇಕು. ಸಂಪೂರ್ಣವಾಗಿ ದುರ್ಲಕ್ಷಿಸಲ್ಪಡದೆ ಇರಬೇಕು. ಹುಬ್ಬಳ್ಳಿ, ಬೆಂಗಳೂರು, ಮೈಸೂರು, ಧಾರವಾಡ—ಈ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಾರ್ಗಗಳ ಸೌಕರ್ಯ ಬಹಳವಾಗುತ್ತಿವೆ ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಏಕೆ ಇಷ್ಟು ಇವರ ಉದಾಸೀನ ಭಾವವೋ ನನಗೆ ಗೊತ್ತಿಲ್ಲ ಕೆಲವು ಜನ ಹಳ್ಳಿಗರು ಗ್ರಾಮಾಂತರ ಪ್ರದೇಶಗಳಲ್ಲಿ ಬರುತ್ತಿದ್ದಾಗ ನೋಡಿದೆ. ಅಲ್ಲಿನ ರಸ್ತೆಗಳು ಹೋಗುವಾಗ ಪಾಪ, ಅರ್ಧಬಟ್ಟೆಯನ್ನು ಉಟ್ಟುಕೊಂಡು ಹೋಗುತ್ತಿರುತ್ತಾರೆ. ಆದರೆ

(ಶ್ರೀ ಎ. ಜಿ. ದೊಡ್ಡಮೇಟಿ)

ಬೆಂಗಳೂರಿನ ರಸ್ತೆಯಲ್ಲಿ ಎಷ್ಟು ಸ್ವಚ್ಛತೆ ಎಷ್ಟು ಸಮನೆಲ—ಇವನ್ನು ನೋಡಿದರೆ ನನಗೇನು ಅನ್ನಿಸುತ್ತದೆಂದರೆ ಎಂದಿಗೆ ಗ್ರಾಮಾಂತರ ಪ್ರದೇಶ ಪಟ್ಟಣಗಳ ಹಾಗೆ ಮಾರ್ಗ ಸೌಕರ್ಯಗಳಲ್ಲಿ ಮುಂದುವರಿದೀತೆಂದು. ಆದರೆ ಮುನಿಸಿಪಾಲಿಟಿ ಅಥವಾ ಕಾರ್ಪೊರೇಷನ್ ವಿಷಯ ಬೇರೆ. ಸರ್ಕಾರದ್ದು ಈ ಬಗ್ಗೆ ಸಂಯುಕ್ತ ಜವಾಬ್ದಾರಿ ಇದೆ. ಏನೇ ಆಗಲಿ, ಹಳ್ಳಿಗಳನ್ನು ಅಲಕ್ಷ್ಯ ಮಾಡುವುದು ಖಂಡಿತವಾಗಿ ಸರಿಯಲ್ಲ. ಈ ರೀತಿಯಾದರೆ ಗ್ರಾಮಾಂತರ ಪ್ರದೇಶಗಳಿಂದ ಆಹಾರ ಧಾನ್ಯಗಳು ಪಟ್ಟಣಕ್ಕೆ ಸರಬರಾಜು ಆಗುವುದು ಹೇಗೆ ? ರೈತರು ಬೆಳೆಸತಕ್ಕ ಆಹಾರ ಧಾನ್ಯಗಳಿಗೆ ಒಳ್ಳೆಯ ಬೆಲೆ ಸಿಗುತ್ತಿಲ್ಲ. ಒಳ್ಳೆಯ ಸ್ಥಳದಲ್ಲಿ ಇವರು ಬೆಳೆದಂಥ ಆಹಾರ ಧಾನ್ಯಗಳನ್ನು ಇಡಲಿಕ್ಕೆ ವ್ಯವಸ್ಥೆ ಮಾಡಬೇಕು. ಸುಮ್ಮನೆ 50 ಮೈಲಿಗಳಷ್ಟು ಮಾರ್ಗ ಸೌಕರ್ಯವನ್ನು ಕೊಡಬೇಕೆಂಬ ಯೋಜನೆಯನ್ನು ತೆಗೆದುಕೊಳ್ಳುವುದಕಿಂತ, ಕೇವಲ 5 ಮೈಲಿಗಳಷ್ಟು ಮಾರ್ಗ ಸೌಕರ್ಯವನ್ನು ಚೆನ್ನಾಗಿ ಮಾಡಿ. ಸಾಕು. ಸುಮ್ಮನೆ ಹೆಚ್ಚಿಗೆ ಮಾರ್ಗ ಸೌಕರ್ಯ ಮಾಡುತ್ತೇವೆಂದು ಅಂಕಿ ಅಂಶಗಳನ್ನು ತೋರಿಸಿದರೆ ಏನೂ ಪ್ರಯೋಜನವಿಲ್ಲ ರೈತರಿಗೆ ಬೇಕಾದಷ್ಟು ಭೂಮಿ ಕೊಟ್ಟಿದ್ದೇವೆಂದು ಹೇಳಿದರೆ ಸಾಲದು. ಉತ್ತಮ ರೀತಿಯಲ್ಲಿ ಮಾರ್ಗ ಸೌಕರ್ಯಗಳು ಇಲ್ಲದಿದ್ದರೆ ಅವರಿಗೇನೂ ಸೌಕರ್ಯ ಕೊಟ್ಟ ಹಾಗಾಗುವುದಿಲ್ಲ. ಕೇವಲ ಒಂದೆರಡು ಉದಾಹರಣೆಗಳನ್ನು ಮಾತ್ರ ಈಗ ಇಲ್ಲಿ ಹೇಳಿದ್ದೇನೆ. ಇನ್ನೂ ಅನೇಕವಿವೆ. ಈ ದೃಷ್ಟಿಯಿಂದ ಸರ್ಕಾರ ವಿಚಾರ ಮಾಡಿ ನೋಡಬೇಕಾಗಿದೆ. ಆದಷ್ಟು ಮಟ್ಟಿಗೆ ಎಲ್ಲೆಲ್ಲಿ ಹೊಸ ಕರಗಳನ್ನು ಹಾಕಬೇಕೋ ಅಲ್ಲಲ್ಲಿ ಹಾಕಿ. ಎಲ್ಲಿ ಬೇಡವೋ ಅಲ್ಲಿ ಹಾಕಬೇಡಿ. ಶಿಕ್ಷಣ ಸೌಕರ್ಯ ಚೆನ್ನಾಗಿ ಕೊಡಬೇಕು. ತೆರಿಗೆಗಳಿಂದ ಬರತಕ್ಕ ವರಮಾನವನ್ನು ಗ್ರಾಮಾಂತರ ಪ್ರದೇಶಗಳ ಸೌಕರ್ಯಕ್ಕಾಗಿ ವಿನಿಯೋಗಿಸಬೇಕು. ಪಟ್ಟಣದವರಿಗೆ ಬಾಯಿ ಇದೆ, ಹಳ್ಳಿಯ ಜನಗಳಿಗೆ ಬಾಯಿ ಇಲ್ಲವೆಂದು ಹೇಳುವುದಿಲ್ಲ. ನಗರಗಳಲ್ಲಿ ಒಂದು ಡೆಪ್ಯುಟೇಷನ್ ಬಂದರೆ ಸಾಕು. ವಸೂಲಾತಿಯನ್ನು ನಿಲ್ಲಿಸುತ್ತಾರೆ. ಅಧಿಕಾರಿಗಳ ಮನಸ್ಸನ್ನು ಕರಗಿಸಿ ಬಿಡುತ್ತಾರೆ. ಆದರೆ ಹಳ್ಳಿಗಾಡಿನ ಜನರಿಗೆ ಇದು ಸ್ವಲ್ಪ ಕಷ್ಟ. ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದ ಹಾಗೆ ಹೊಸ ಮೈಸೂರು ಮತ್ತು ಹಳೆಯ ಮೈಸೂರಿನ ವಿಷಯ ನಾನು ಹೇಳುವುದಿಲ್ಲ. ಎಲ್ಲಾ ಜನಗಳಿಗೂ ಒಂದೇ ಸರ್ಕಾರ ಮಾಡಿ. ಕೆಲವರು ಇತ್ತೀಚೆಗೆ ಹಳ್ಳಿಗರು, ರೈತರು, ಒಕ್ಕಲಿಗರು, ಮುಂತಾದವರನ್ನು ತುಳಿಯಲಿಕ್ಕೆ ಎಲ್ಲಾ ರೀತಿಯಲ್ಲೂ ಶೋಷಣೆ ನಡೆಯುತ್ತಿದೆಂದು ಹೇಳಿದರು. ಅದು ತಪ್ಪು ಭಾವನೆ. ಅವರೂ ತೆರಿಗೆಗಳನ್ನು ಕೊಡುತ್ತಾರೆ, ನಾವೂ ಕೊಡುತ್ತೇವೆ. ಕೇವಲ ಬೆಂಗಳೂರು, ಮೈಸೂರು, ಧಾರವಾಡದವರು ಮಾತ್ರ ಹೆಚ್ಚು ತೆರಿಗೆಕೊಡುತ್ತಿದ್ದಾರೆಂದು ಹೇಳಬಹುದು. ತೆರಿಗೆಗಳನ್ನು ಯಾರು ಕೊಡುತ್ತಾರೋ ಯಾರು ವಸೂಲು ಮಾಡುತ್ತಾರೋ ಎಂದು ಹೇಳುವಾಗ ಬರೀ ಶ್ರೀಮಂತ ವರ್ಗಮಾತ್ರ ಕೊಡುತ್ತಾರೆಂದು ಹೇಳುವುದು ತಪ್ಪು. ತೆರಿಗೆಗಳು ಎಲ್ಲ ಜನಗಳಿಂದಲೂ ಬರುತ್ತದೆ. ಈ ಸೇಲ್ಸ್ ಟ್ಯಾಕ್ಸ್, ಇನ್‌ಕಂ ಟ್ಯಾಕ್ಸ್, ಅಗ್ರಿಕಲ್‌ಚರಲ್ ಟ್ಯಾಕ್ಸ್, ಎಲ್ಲವೂ ಸಮಸ್ತ ಜನಗಳಿಂದಲೂ ಹೆಚ್ಚಿಗೆ ರೈತರಿಂದಲೇ ಬರುತ್ತಿದೆ ಎನ್ನುತಕ್ಕದ್ದನ್ನು ಸರ್ಕಾರ ಮರೆಯತಕ್ಕದ್ದಲ್ಲ. ಈ ಪ್ರಶ್ನೆಯನ್ನು ಕೂಲಂಕಷವಾಗಿ ವಿಚಾರಮಾಡಬೇಕು. ತೆರಿಗೆಯ ಮೂಲಕ ಬಂದ ಉತ್ಪತ್ತಿಯನ್ನು ಹಳ್ಳಿಗಾರರಿಗೆ ಗ್ರಾಮಾಂತರ ಪ್ರದೇಶಗಳ ಸೌಕರ್ಯಕ್ಕಾಗಿ ಉಪಯೋಗಮಾಡಬೇಕು. ಅಮೇರಿಕಾ ಮತ್ತು ರಷ್ಯಾ ಮುಂತಾದ ಪ್ರದೇಶಗಳಲ್ಲಿ ತೆರಿಗೆ ಆದಾಯವನ್ನು ಹಿಂದುಳಿದ ಪ್ರದೇಶಗಳನ್ನು ಸಮಾನತೆ ತರಬೇಕಾದರೆ ಕೆಲವು ಜಿಲ್ಲೆಗಳಲ್ಲಿ ಗ್ರಾಮಾಂತರ ಅಭಿವೃದ್ಧಿಗೋಸ್ಕರ ಉಪಯೋಗಿಸುತ್ತಾರೆ. ಅದಕ್ಕೋಸ್ಕರವೇ ಆ ದೇಶಗಳು ಬಹಳ ಅಭಿವೃದ್ಧಿಯಾಗುತ್ತಿವೆ. ಆದ್ದರಿಂದ ನಮ್ಮ ಈ 19 ಜಿಲ್ಲೆಗಳ ಪೈಕಿ ಯಾವುದೇ ಒಂದು ಜಿಲ್ಲೆ ಹಿಂದುಳಿದರೆ ನಾವು ಅದನ್ನು ಒಂದು ಸಮಾನ ಸ್ಥಿತಿಗೆ ತರುವಂತೆ ಮಾಡಬೇಕು.

ಕನ್ನಡ ನಾಡು ಅಥವಾ ಕರ್ನಾಟಕವನ್ನು ನಾವು ಕಟ್ಟಿದೆವು. ಈಗ ಅದರಲ್ಲಿ ಯಾವುದೇ ಒಂದು ಭಾಗವಾಗಲೀ ಅವರೆಲ್ಲರೂ ಕೂಡ ಒಂದೇ ಜನಾಂಗ, ಒಂದೇ ತಾಯಿಯ ಮಕ್ಕಳು ಎನ್ನುವ ಭಾವನೆ ಎಲ್ಲರಲ್ಲೂ ಮೂಡಬೇಕು. ಎಲ್ಲಾ ಕಡೆಗಳಲ್ಲಿಯೂ ಕೂಡ ನಮಗೆ ಅನ್ಯಾಯವಾಗಿದೆ, ನಮಗೆ ಅನ್ಯಾಯವಾಗಿದೆ ಎಂದು ಪಬ್ಲಿಷ್ ಮಾಡುವವರಿದ್ದಾರೆ. ಅಗ್ರಿಕಲ್‌ಚರಲ್ ಇಲಾಖೆಯಲ್ಲಿ ನೌಕರರು ನಮಗೆ ಅನ್ಯಾಯವಾಗಿದೆ ಎಂದು ಹೇಳುತ್ತಿದ್ದಾರೆ. ಇನ್ನೂ ಕೆಲವು ಇಲಾಖೆಗಳಲ್ಲಿ ಕೆಲವು ನೌಕರರಿಗೆ ಅನ್ಯಾಯವಾಗಿದೆಯೆಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಸರ್ಕಾರದವರು ಗಮನ ಕೊಟ್ಟು ಅದನ್ನು ಸರಿಪಡಿಸಬೇಕು. ಈ ಬಗ್ಗೆ ನನಗೆ ಎರಡು ಮೂರು ಜನ ಹೇಳಿದರು. ಈ ಬಡ್ತಿ ಕೊಡತಕ್ಕ ವಿಷಯದಲ್ಲಿ ಏನಾಗಿವೆ ಎಂದರೆ ಯಾರಿಗೆ ಬಡ್ತಿಯನ್ನೂ ಕೊಡಲಿ ನೌಕರರು ಏನು ಹೇಳುತ್ತಾರೆಂದರೆ ಓಹೋ ಇನ್ನು ಮುಂದೆ ಲಿಂಗಾಯಿತ ಜಾತಿಯವರು ಕಟ್ಟಿ ಹೋಗುತ್ತಾರೆ. ಹಾಗಾಗಿದೆ, ಹೀಗಾಗಿದೆ ಎಂದು ಹೇಳುವವರಿದ್ದಾರೆ. ಈ ದೃಷ್ಟಿಯಿಂದ ಈ ಬರೀ ನೌಕರಿಯನ್ನು ಅವಲಂಬಿಸಿಕೊಂಡಿರು

ವವರನ್ನು ನಂಬಿಕೊಂಡು ಹೋದರೆ ಅವರು ನಮ್ಮ ತಲೆಯನ್ನು ಕೆಡಿಸುತ್ತಾರೆ. ಅದಕ್ಕೆ ಮಹತ್ವ ಕೊಡುವಷ್ಟು ಕೊಡೋಣ. ಅದರಲ್ಲಿ ಒಂದು ವಿಷಯವೇನೆಂದರೆ ಯಾರಿಗೂ ಅನ್ಯಾಯ ಆಗಬಾರದು. ಹಳೆಯ ಮೈಸೂರಿನವರಿಗೆ ಅನ್ಯಾಯವಾಗಿದೆ. ಉತ್ತರ ಕರ್ನಾಟಕದವರಿಗೆ ಅನ್ಯಾಯವಾಗಿದೆ ಎಂದರೆ ಪ್ರತಿಯೊಬ್ಬರಿಗೂ ಅವರವರ ಮನಸ್ಸಿಗೆ ನೋವಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರ ವಿಚಾರವನ್ನು ನ್ಯಾಯ ರೀತಿಯಿಂದ ವಿಚಾರ ಮಾಡಬೇಕು ಎನ್ನುವ ದೃಷ್ಟಿಯಿಂದ ಏನಾದರೂ ಒಂದು ಸೂಚನೆಯನ್ನು ಮಾಡಿದರೆ ಅದನ್ನು ಯಾರು ಬೇಕಾದರೂ ಮಾಡಬಹುದು. ಯಾವ ಭಾಗ ದವರಿಗೂ ಅನ್ಯಾಯವಾಗಬಾರದು. ಆದರೆ ಈ ರಾಜ್ಯವನ್ನು ಎರಡು ಭಾಗವಾಗಿ ಒಡೆಯುವುದಕ್ಕೆ ಈ ಮುಕ್ಕಣ್ಣಪ್ಪ ಅಲ್ಲ, ಮೇಲಿನ ಮುಕ್ಕಣ್ಣಪ್ಪ ಬಂದರೂ ಈ ರಾಜ್ಯವನ್ನು ಎರಡು ಭಾಗವಾಗಿ ಮಾಡು ವುದಕ್ಕೆ ಸಾಧ್ಯವಿಲ್ಲ.

ಇನ್ನು ಹರಿಜನರು ನಮ್ಮ ಉತ್ತರ ಕರ್ನಾಟಕದಲ್ಲೂ ಲಕ್ಷಾಂತರ ಜನರಿದ್ದಾರೆ. ಹಳೆಯ ಮೈಸೂರಿನಲ್ಲಿಯೂ ಲಕ್ಷಾಂತರ ಜನರಿದ್ದಾರೆ. ಆದರೆ ಹರಿಜನರಲ್ಲಿ ಶ್ರೀಮಾನ್ ಬಿ. ರಾಚಯ್ಯ ನವರಂತಹವರು ಸಿಕ್ಕುವುದು ದುರ್ಲಭ ಎಂದು ಮಾತ್ರ ನಾನು ಹೇಳುತ್ತೇನೆ. ಅನೇಕ ಸಂದರ್ಭ ಗಳಲ್ಲಿ ನಮ್ಮ ಜೊತೆಯಲ್ಲಿ ಅವರು ಹೇಳುತ್ತಾರೆ. ಯಾವ ದೃಷ್ಟಿಯಿಂದಲೂ ಕೂಡ ನಾವು ರೈತನ ಹಿತವನ್ನು ಅಲಕ್ಷ್ಯ ಮಾಡಬಾರದು. ಸಾಧ್ಯವಾದಷ್ಟು ಮಟ್ಟಿಗೆ ರೈತನಿಗೆ ಅನುಕೂಲಮಾಡಬೇಕೆಂದು ಅವರು ಹೇಳುತ್ತಿದ್ದಾರೆ. ಈ ಸಂದರ್ಭದಲ್ಲಿ ನಾನು ಇನ್ನೊಂದು ವಿಷಯವನ್ನು ಹೇಳಬಯಸು ತ್ತೇನೆ. ಮಲತಾಯಿ ಆದವಳು ಕೂಸನ್ನು ಎರಡು ಭಾಗ ಮಾಡಿದರೂ ಮಾಡಬಹುದು. ತಾಯಿ ಆದವಳು ತನ್ನ ಕೂಸನ್ನು ಎಂದಿಗೂ ಎರಡು ಭಾಗ ಮಾಡುವುದಕ್ಕೆ ಒಪ್ಪುವುದಿಲ್ಲ. ಅದೇ ರೀತಿ ನಾನು ನನ್ನ ದೇಹವನ್ನು ಬೇಕಾದರೆ ಎರಡು ಭಾಗ ಮಾಡುತ್ತೇನೆ. ಆದರೆ ಈ ರಾಜ್ಯವನ್ನು ಮಾತ್ರ ಎರಡು ಭಾಗ ಮಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಇಂಥಾ ಕನ್ನಡ ರಾಜ್ಯದ ಕನ್ನಡ ಮಕ್ಕಳನ್ನು ಬೇರೆ ಬೇರೆ ಮಾಡುವುದಕ್ಕೆ ಅಸ್ಪದವನ್ನು ಕೊಡುವುದು ಬೇಡಿ. ಎಲ್ಲೆಲ್ಲಿ ಏನೇನು ಭ್ರಷ್ಟಾ ಚಾರ ನಡೆಯುತ್ತಿದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗು ತ್ತಿಲ್ಲ. ಕೆಲವು ಇಲಾಖೆಗಳಲ್ಲಿ ಭ್ರಷ್ಟಾಚಾರ ಇಲ್ಲವೆಂದು ಮಂತ್ರಿಗಳು ಅಲ್ಲಗಳೆಯುವಂತಿಲ್ಲ. ಇವೊತ್ತು ಚೀಫ್ ಇಂಜಿನಿಯರ ಆಫೀಸಿಗೆ ಹೋಗಿ ಬನ್ನಿ, ಯಾರ ಯಾರ ಜೊತೆಯಲ್ಲಿ ಕಂಟ್ರಾಕ್ಟರು ಗಳು ಇರುತ್ತಾರೆ ಎಂಬುದು ಗೊತ್ತಾಗುತ್ತದೆ. ಅವರಿಗೆ ಏನು ಬೇಕೋ ಆ ಅನುಕೂಲಗಳನ್ನು ಮಾಡಿಕೊಡುತ್ತಾರೆ. ಅವರು ಯಾತಕ್ಕೋಸ್ಕರ ಆ ರೀತಿ ಮಾಡುತ್ತಾರೆಂಬುದನ್ನು ಅರ್ಥಮಾಡಿ ಕೊಳ್ಳಿ. ಇವೊತ್ತು ನಾನು ಹೇಳಬೇಕಾದರೆ ನಿಜವಾಗಿಯೂ ಇವೊತ್ತು ಆಡಳಿತದಲ್ಲಿ ಬಿಗಿ ಕಡಿಮೆ ಯಾಗಿದೆ. ಆದರೆ ಸೆಕ್ರೆಟೇರಿಯಟ್ ಲೆವೆಲ್‌ನಲ್ಲಿ ನಿಶ್ಚಿತ ಇದೆ. ಇದರಲ್ಲಿ ಅನುಮಾನ ಪಡಬೇಕಾದ ಕಾರಣವಿಲ್ಲ. ಎಗ್ಸಿಕ್ಯುಟೀವ್ ಲೈನಿನಲ್ಲಿರತಕ್ಕ ಒಬ್ಬ ಚೀಫ್ ಇಂಜಿನಿಯರು ತಾವಾಗಿಯೇ ಸರ್ಕಾ ರದ ಆಡಳಿತ ಶಿಥಿಲವಾಗಿದೆ, ಸರ್ಕಾರದ ಕಾರ್ಯಕ್ರಮಗಳು ವಿಫಲವಾಗುತ್ತಿವೆ, ಎಂದು ಉದ್ಧಟ ರೀತಿಯಿಂದ ಹೇಳುವುದಾದರೆ ನಮ್ಮ ಸರ್ಕಾರದವರು ಇದ್ದಾರೆಯೇ ? ಅವರು ಇರುವ ಹಾಗೆ ನನಗೆ ಕಾಣುವುದಿಲ್ಲ. ಒಬ್ಬ ಚೀಫ್ ಇಂಜಿನಿಯರು ಆ ರೀತಿ ಹೇಳುವುದಾದರೆ ಸರ್ಕಾರದವರು ಅವರ ಮೇಲೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಈಗ ಈ ಸಭೆಯಲ್ಲಿ ಏನು ಹೇಳಿದ್ದಾರೆಯೋ ಅದನ್ನು ಸರಕಾರದ ಗಮನಕ್ಕೆ ತೆಗೆದುಕೊಂಡು ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ. ಅವರು ಏನಾ ದರೂ ಆ ರೀತಿ ಹೇಳಿದ್ದರೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎ. ಜಿ. ದೊಡ್ಡಮೇಟಿ.—ಆದ್ದರಿಂದ ಸರ್ಕಾರದವರು ಅದನ್ನು ವಿಚಾರಮಾಡಿ ಅವರ ಮೇಲೆ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಜಿ. ಸತ್ಯನಾರಾಯಣ (ಬಳ್ಳಾರಿ).—ಸ್ವಾಮಿ, ಇವೊತ್ತು ಈ ಸಭೆಯ ಮುಂದೆ ಇಟ್ಟಿರುವ ಪಬ್ಲಿಕ್ ವರ್ಕ್ಸ್ ಇಲಾಖೆಯ ಬೇಡಿಕೆಗಳಿಗೆ ನಾನು ನನ್ನ ಬೆಂಬಲವನ್ನು ಕೊಡುತ್ತಾ ಇದನ್ನು ಸ್ವಾಗತಿಸುತ್ತೇನೆ. ಮತ್ತು ಈ ವಿಷಯದಲ್ಲಿ ಒಂದೆರಡು ಮಾತುಗಳನ್ನು ನಾನು ಹೇಳ ಬಯಸುತ್ತೇನೆ. ನಮ್ಮ ರಾಜ್ಯದ ಪಿ ಡಬ್ಲ್ಯು ಡಿ ರಸ್ತೆಗಳನ್ನು ಬೇರೆ ದೇಶಗಳೊಂದಿಗೆ ಹೋಲಿಕೆ ಮಾಡಿನೋಡುವುದಾದರೆ ನಮ್ಮ ಮೈಸೂರು ರಾಜ್ಯದ ರಸ್ತೆಗಳು ಚೆನ್ನಾಗಿವೆ ಎಂದು ಹೇಳಬಹುದು. ಮದ್ರಾಸ್ ಕೇರಳ ಮತ್ತು ಆಂಧ್ರ ಪ್ರಾಂತಗಳ ರಸ್ತೆಗಳಿಗಿಂತಲೂ ನಮ್ಮ ರಾಜ್ಯದ ರಸ್ತೆಗಳು ಚೆನ್ನಾಗಿವೆ. ಇನ್ನು ಬಳ್ಳಾರಿ ವಿಷಯವನ್ನು ಹೇಳುವುದಾದರೆ ಅಲ್ಲಿರತಕ್ಕ ಲೋ ಲೆವೆಲ್ ಕೆನಾಲ್ ಮತ್ತು ಹೈಲೆವೆಲ್ ಕೆನಾಲ್ ಕೆಲಸಗಳು ಚೆನ್ನಾಗಿಲ್ಲದೆ ಬೆಳೆಗಳಿಗೆ ಸಾಕಷ್ಟು ನೀರು ಸಿಕ್ಕದೆ ಬೆಳೆ

(ಶ್ರೀ ಟಿ. ಜಿ. ಸತ್ಯನಾರಾಯಣ)

ಗಳೆಲ್ಲಾ ಹಾಳಾಗಿವೆ. ರೋಡುಗಳ ಆಯಕಟ್ಟು ಮತ್ತು ರೋಡುಗಳ ಮೇಂಟೆನೆನ್ಸ್ ಸರಿಯಾಗಿಲ್ಲ. ಆದ್ದರಿಂದ ದಯವಿಟ್ಟು ಆ ರೋಡುಗಳನ್ನು ಸರಿಯಾಗಿ ರಿಪೇರಿ ಮಾಡಿಕೊಡಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ. ಹೊಸಪೇಟೆ—ಗುಂತಕಲ್ ರೋಡಿನಲ್ಲಿ ನೂರಾರು ಲಾರಿಗಳು ಓಡಾಡುತ್ತವೆ. ಆದರೆ ಆ ರೋಡಿನ ಮೇಂಟೆನೆನ್ಸ್ ಸರಿಯಾಗಿಲ್ಲ. ಅವು ತುಂಬಾ ಕೆಟ್ಟುಹೋಗಿವೆ. ಆದ್ದರಿಂದ ಆ ರೋಡುಗಳಿಗೆ ಸ್ವಲ್ಪ ಹೆಚ್ಚಿನ ಹಣವನ್ನು ಮಂಜೂರು ಮಾಡಿ ಅವುಗಳನ್ನು ರಿಪೇರಿ ಮಾಡಿಸಿ ಮೇಂಟೆನೆನ್ಸ್ ಚೆನ್ನಾಗಿ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಹಗರಿ ಪ್ರಾಜೆಕ್ಟಿಗೆ ಒಂದು ಕಾಸ್‌ವೇ ಹಾಕಿ ಅನಂತಪುರಕ್ಕೆ ಕನೆಕ್ಷನ್ ಕೊಟ್ಟರೆ ಆಂಧ್ರ ಬಾರ್ಡರಿಗೆ ಹತ್ತಿರವಾಗುತ್ತದೆ. ಅದನ್ನು ಮಾಡಿಸಿಕೊಡಬೇಕೆಂದು ನಾನು ಎಂ. ಎಲ್. ಎ ಆದಾಗಿನಿಂದಲೂ ಕೇಳುತ್ತಿದ್ದೇನೆ. ಆದರೂ ಸಹ ಆ ಕೆಲಸ ಇನ್ನೂ ಆಗಿಲ್ಲ. ಆದ್ದರಿಂದ ಸರ್ಕಾರದವರು ಆ ಕಡೆ ಗಮನ ಕೊಟ್ಟು ಅದನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ನ್ಯಾಷನಲ್ ಹೈವೇ ರೋಡ್ ವಿಷಯ. ಈ ನ್ಯಾಷನಲ್ ಹೈವೇ ರೋಡನ್ನು ಸೊಲ್ಲಾಪುರ—ಬೆಂಗಳೂರಿಗೆ ಮಾಡುವುದಕ್ಕೋಸ್ಕರ ಇಂಡಿಯಾ ಸರ್ಕಾರದವರು ಮಂಜೂರು ಮಾಡಿದ್ದರು. ಅದನ್ನು ಏತಕ್ಕೆ ಸ್ಕ್ರಾಪ್ ಮಾಡಿದರೋ ನನಗೆ ಅರ್ಥವಾಗುವುದಿಲ್ಲ. ನ್ಯಾಷನಲ್ ಹೈವೇಸ್‌ನ್ನು ಬಳ್ಳಾರಿ ಡಿಸ್ಟ್ರಿಕ್ಟಿಗೆ ಹೆಚ್ಚಿಗೆ ಬರುವಂತೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಮ... ಮನಹಳ್ಳಿ ಪ್ರಾಜೆಕ್ಟ್ ಮತ್ತು ನಾರೀಹಳ್ಳಿ ಪ್ರಾಜೆಕ್ಟ್ ಕೆಲಸ ಇನ್ನು ಕಂಪ್ಲೀಟ್ ಆಗಿಲ್ಲ. ಅದನ್ನು ದಯವಿಟ್ಟು ಪೂರ್ತಿಮಾಡಿ ಕೊಡಬೇಕೆಂದು ನಾನು ಹೇಳುತ್ತೇನೆ. ಹೊಸಪೇಟೆ-ಗದಗ್ ರಸ್ತೆಯ ವಿಷಯದಲ್ಲಿ ಈಗ ಮೂರು ವರ್ಷಗಳಿಂದಲೂ ಹೈಕೋರ್ಟಿನವರು ಸ್ಟೇ ಮಾಡಿದ್ದಾರೆ. ಅದ... ಪೂರ್ತಿ ಆಗಿಲ್ಲ. ಆ ವಿಷಯದಲ್ಲಿ ನಮ್ಮ ಪಬ್ಲಿಕ್ ವರ್ಕ್ಸ್ ಇಲಾಖೆಯ ಮಂತ್ರಿಗಳು ಸ್ವಲ್ಪ ಶ್ರದ್ಧೆ ವಹಿಸಿ ಅದನ್ನು ಆದಷ್ಟು ಜಾಗ್ರತೆ ಮಾಡಿಕೊಡಬೇಕು. ಬಳ್ಳಾರಿಯಿಂದ—ಹುಬ್ಬಳ್ಳಿಗೆ ಒಂದು ರಸ್ತೆ ಮಾಡಿದರೆ ವ್ಯಾಪಾರಕ್ಕೆ ಅನುಕೂಲವಾಗುತ್ತದೆ. ಮತ್ತು ಕಾರವಾರಕ್ಕೆ ಕಬ್ಬಿಣದ ಅದುರನ್ನು ಸಾಗಿಸುವುದಕ್ಕೂ ಆ ರಸ್ತೆ ಅನುಕೂಲವಾಗುತ್ತದೆ. ಅದನ್ನು ದಯವಿಟ್ಟು ಮಾಡಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Mr SPEAKER.—The House will now rise and meet at thirty minutes past Twelve of the Clock on Monday.

The House adjourned at Thirty Minutes past Twelve of the Clock to meet again at Thirty Minutes past Twelve of the Clok on Monday the 16th March 1964.

WD 2505—GPB—900—30-5-64